# chanakya

ಚಾಣಕ್ಯ

JOURNAL OF POLITICAL SCIENCE
(Combined Volume)

## Department of Political Science

**A Refereed, Bi Annual, Bi Lingual, Peer Reviewed,**
**Social Science Journal of Chanakya Alumni Association,**
Department of Political Science,
Karnatak University, Pavate Nagar,
Dharwad-580003

# THE POLITICAL SCIENCE ASSOCIATION AND CHANAKYA ALUMNI ASSOCIATION

For supporting Curricular and Co- Curricular activities of the Department (Estd. 1959) the Political Science Association was established in 1975. Today the Association is able to carry out most of the activities of the Department. During the past 55 years, thousands of students have passed out of the Department and are well placed in the society. The Alumni established in 2005, under the nomenclature "The Chanakya Alumni Association" is supporting the Department in terms of infrastructure development and academic activities including support to this Journal. You may also visit the alumni website-www.chanakyaalumni.org for further information in this regard.

## Call for Articles

Chanakya is a refereed bi annual, bi lingual, Peer reviewed journal published from the Department of Political Science to provide a forum for discussion/ dialogue/debate and for exchange of ideas on issues of contemporary relevance. The journal welcomes original, theoretical and insightful writings. It is also open for empirical research articles and case studies etc. Book reviews are encouraged.

However, it must be noted that the journal does not in any way take the responsibility for the opinions expressed by authors through their writings and it will be the sole responsibility of the authors to defend their writings.

There is also a column for readers interaction on issues raised in the articles. All such letters/ dialogues/ debates/ must be addressed to the executive editor or the e mail given.

**Note : All articles/letters/ dialogues/ debates will be subject to evaluation by Editorial Board Referees confidentially chosen by editorial board. The decision of the editorial board is final in all these matters.**

**Editorial Board**
Department of Political Science,
Karnatak University, Pavate Nagar, Dharwad-580 003

C 2013. All rights reserved. No part of this publication may be reproduced or copied in any form by any means without prior written permission of the publisher.

The views expressed in this publication are purely the personal judgments of the authors and do not in any way reflect the views of the department or of the editorial board or the executive editor or publisher of the Journal.

All efforts are made to ensure that the published information is correct. The journal or department or the editorial board or the executive editor or publisher is not responsible for any errors caused due to oversight or otherwise.

Published by: Department of Political Science, Karnatak University, Pavate Nagar, Dharwad-580 003, Karnataka, India

Place of Publication: Department of Political Science, Karnatak University, Pavate Nagar, Dharwad-580 003, Karnataka, India

Printed at: Image World, Belgaum

Note : Constitution of the Editorial Board shall be the sole privilege of the Chanakya Alumni Association. In case of difference of opinion, in the Editorial Board, majority view shall prevail.

For Membership of Chanakya Alumni Association and Application Forms
Contact

Secretary, Chanakya Alumni Association
Department of Political Science
Karantak University, Pavate Nagar, Dharwad-580 003
Karnataka, India
Ph. No.:0836-2770902
Mobile: 9448379350
E-mail: harishramas1960@gmail.com

# CONTENTS


- Understanding Popular Perceptions of Democracy Findings from the State of Democracy in South Asia study and world value survy
  - Dr.Sandeep Shastri, (Ms) Reetika Syal
- The Disarmament Debate – Issues and Concerns : A Comparative Study of The Indian and Chinese Perspectives
  - Dr. M.J.Vinod
- What is History Doing With The Past?
  - Prof. B.Surendra Rao
- India-Pakistan Relationship: Myths and Realities
  - Dr. K C Suresha
- Empowerment of Women Through Education and Employment in a Globalized Era
  - Dr. M. Narasimha Murthy
- Socio-Economic Transformation through e-panchayats in India
  - Dr.M.Veera Prasad

**Articles by Research Scholars**

- Child Marriage: Perspectives and Issues
  - (Ms) N. Nahida Begam

**ಕನ್ನಡ ವಿಭಾಗ**

- ಯಾವುದು ರಾಷ್ಟ್ರಪುನರ್ ನಿರ್ಮಾಣ?
  –ಶ್ರೀ. ಜಗದೀಶ ಮಾನೆ, ಡಾ. ಎನ್.ಎಮ್. ಸಾಲಿ
- ವಿಜ್ಞಾನ ಮತ್ತು ಮಾನವ ಹಕ್ಕುಗಳು
  –ಶ್ರೀ. ಎಸ್. ಆನಂದ , ಡಾ. ಎಸ್.ಎ. ಜಾವೀದ್

**ಪುಸ್ತಕ ವಿಮರ್ಶೆ ವಿಭಾಗ**

- ಭಾರತೀಯ ರಾಜಕೀಯ ಚಿಂತಕರು
  –ಪ್ರೋ. ಕಮಾಲಾಕ್ಷಿ ಜಿ. ತಡಸದ್
- ಬಡತನ ಮತ್ತು ಪ್ರಜಾಪ್ರಭುತ್ವ
  –ಶ್ರೀ. ಜಗದೀಶ ಬಿ. ಗೌಡ, ಶ್ರೀ. ಬಸಪ್ಪ ಅಥಣಿ, ಶ್ರೀ ಗಂಗಪ್ಪ ಸವದಿ
- **Information about**
  What is an Article? How to write an Article?
  What is an Abstract? Etc.,

## *From The Editor's Desk...*

Let me begin this writing by humbly submitting my sincere good wishes and many thanks to those who have been supportive to the cause of this journal. Mr.Gangadhar, Mr.Jagadish B.Gouda and Mr. Basappa Athani are all working with me for their PhD, but for their voluntary involvement this second journal would not have seen the day light. Equally, if not more important are my good colleagues in my profession all of whose articles are published in this volume took their time out to present an article on invitation for this journal in order to help me keep up its standard as a journal worth sustaining in this world of competitive publishing. Finally, Mr.Ravi Viswagna, my printer and whose page making, has earned this journal a distinct respect in the academic circle as a journal brought out with concern and responsibility. It is these trinities who have helped me to bring this journal out for scrutiny. I am sure this journal will win the test of time. It is delayed yes; my research friends whose articles are here will be upset, and I take full responsibility as an editor for this delay and ask for their apology. But I request them to continue to support us, for we are a crawling baby as yet.

The other important dimension that has entered this phase of the journal is its peer review part. We had received more than 14 articles other than those invited. None of the invited articles have been sent for review, this I thought I must clear because this is a policy of the journal. However, of the many sent for peer review, some of them did not pass the peer review and went back for major or minor corrections. The authors were informed of the peer review observations and we have kept all the papers for being transparent and accountable in our work. Unfortunately, many of the authors did not send it back in time. Since we work for quality, we sustained with those articles that came back to us after the peer review observations were attended to. I am indeed grateful to all my colleagues who took up the responsibility to review the papers and I say they have all done a great job for a meager honorarium. Their names are published in this journal. But that is how we grow with all the support from different quarters. In the days to come I will try and work hard to bring the journal in time. But as always I need all your support, contribution, book reviews and encouragement in the neighborhood to promote our efforts. I look forward for continued support of one and all hoping to achieve more than what is set as our target. I must at this point inform that in my department I have a great team, none of them ever thought of interfering in this work of maintaining the standard of the journal. I am indeed grateful to them for believing in me and in my team. Alumni association promptly paid the bills submitted and thus helped us realise this dream. My last word for my readers, please go through the journal and judge its standards and send your feedback to be published (selectively) in the forthcoming volume.

Fondly remembering the support of everyone.

Harish Ramaswamy,
On behalf of the Editorial Board



Angus Deaton
Nobel Prize winner in Economic Sciences (2015)

# ನಿಯೋ ಲಿಬರಲ್ ಅಭಿವೃದ್ಧಿ

ಡಾ. ಎಂ.ಚಂದ್ರ ಪೂಜಾರಿ

**ಸಾರಾಂಶ**

ಸ್ಥೂಲವಾಗಿ ಎರಡು ಆರ್ಥಿಕ ನೀತಿಗಳು ಪಶ್ಚಿಮ ದೇಶಗಳ ಅರ್ಥವ್ಯವಸ್ಥೆಯನ್ನು ಪ್ರಭಾವಿಸುತ್ತಿವೆ. ಒಂದು ಮುಕ್ತ ಮಾರುಕಟ್ಟೆ ಆರ್ಥಿಕ ನೀತಿಗಳು ಮತ್ತೊಂದು ಸೋಶಿಯಲ್ ಡೆಮಾಕ್ರಟಿಕ್ ಆರ್ಥಿಕ ನೀತಿಗಳು. ಮುಕ್ತ ಮಾರುಕಟ್ಟೆ ನೀತಿ ಸರಕುಸೇವೆಗಳ ಪೂರೈಕೆ ಹೆಚ್ಚಿಸುವ ಮೂಲಕ ಜನರ ಅಭಿವೃದ್ಧಿಗೆ ಪ್ರಯತ್ನಿಸಿದರೆ ಸೋಶಿಯಲ್ ಡೆಮಾಕ್ರಟಿಕ್ ನೀತಿಗಳು ಜನರ ಆಹಾರ, ವಸತಿ, ಶಿಕ್ಷಣ, ಆರೋಗ್ಯ ಮುಂತಾದವುಗಳನ್ನು ಸುಧಾರಿಸುವ ಅಭಿವೃದ್ಧಿಗೆ ಹೆಚ್ಚು ಮಹತ್ವ ನೀಡುತ್ತದೆ. ಈ ದೇಶಗಳಲ್ಲಿ ರಾಜಕೀಯ ಪಕ್ಷ ಮತ್ತು ಆರ್ಥಿಕ ನೀತಿಗಳ ನಡುವೆ ನೇರ ಮತ್ತು ಸ್ಪಷ್ಟ ಸಂಬಂಧವಿದೆ. ಈ ಎರಡು ಪ್ರತ್ಯೇಕ ನೀತಿಗಳನ್ನು ಪ್ರತಿಪಾದಿಸುವ ಪ್ರತ್ಯೇಕ ರಾಜಕೀಯ ಪಕ್ಷಗಳಿವೆ. ಅಮೇರಿಕಾದಲ್ಲಿ ಡೆಮಾಕ್ರಟಿಕ್ ಪಕ್ಷ ಅಲ್ಪಸ್ವಲ್ಪ ಸೋಶಿಯಲ್ ಡೆಮಾಕ್ರಟಿಕ್ ನೀತಿಗಳನ್ನು ಪ್ರತಿಪಾದಿಸಿದರೆ ರಿಪಬ್ಲಿಕನ್ ಪಕ್ಷ ಮುಕ್ತ ಮಾರುಕಟ್ಟೆ ಆರ್ಥಿಕ ನೀತಿಗಳನ್ನು ಜಾರಿಗೆ ತರುತ್ತದೆ. ಇಂಗ್ಲೇಂಡಲ್ಲಿ ಲೇಬರ್ ಪಕ್ಷ ಸೋಶಿಯಲ್ ಡೆಮಾಕ್ರಟಿಕ್ ನೀತಿಗಳನ್ನು ಅನುಷ್ಠಾನಗೊಳಿಸದರೆ ಕನ್‌ಸರ್ವೇಟಿವ್ ಪಕ್ಷ ಮುಕ್ತ ಮಾರುಕಟ್ಟೆ ನೀತಿಗಳನ್ನು ಪ್ರತಿಪಾದಿಸುತ್ತಿದೆ. ನಮ್ಮಲ್ಲೂ ಎರಡು ದೊಡ್ಡ ಪಕ್ಷಗಳಿವೆ. ಕಾಂಗ್ರೆಸ್ ಮತ್ತು ಬಿಜೆಪಿ ಆ ಎರಡು ಪಕ್ಷಗಳು. ಮೇಲ್ನೋಟಕ್ಕೆ ಕಾಂಗ್ರೆಸ್ ಸೋಶಿಯಲ್ ಡೆಮಾಕ್ರಟಿಕ್ ನೀತಿಗಳನ್ನು ಜಾರಿಗೆ ತರುವ ಪಕ್ಷ ಮತ್ತು ಬಿಜೆಪಿ ಮುಕ್ತ ಮಾರುಕಟ್ಟೆ ನೀತಿಗಳನ್ನು ಪ್ರತಿಪಾದಿಸುವ ಪಕ್ಷವೆನ್ನುವ ಇಮೇಜ್ ಇದೆ. ಆದರೆ ಇದು ನಿಜವಾದ ಚಿತ್ರಣವಲ್ಲ.

(**ಮುಖ್ಯಪದಗಳು:** ನಿಯೋ ಲಿಬರಲ್, ಅಭಿವೃದ್ಧಿ, ಮುಕ್ತ ಮಾರುಕಟ್ಟೆ, ಆರ್ಥಿಕ ನೀತಿಗಳು, ಉತ್ಪಾದನೆ, ಸಂಪತ್ತಿನ ವಿತರಣೆ, ಸರಕಾರ, ಸಂಕುಚಿತ ಪ್ರಜಾಪ್ರಭುತ್ವ, ಭಾರತ, ರಾಜಕೀಯ ಪಕ್ಷಗಳು)

**ಪ್ರಸ್ತಾವನೆ:**

ಈ ಎರಡೂ ಪಕ್ಷಗಳು ಪ್ರತಿಪಾದಿಸುವ ಆರ್ಥಿಕ ನೀತಿಗಳಲ್ಲಿ ವಿಶೇಷ ವ್ಯತ್ಯಾಸವೇ ಇಲ್ಲ. ಇವು ವಿರೋಧಪಕ್ಷದ ಸ್ಥಾನದಲ್ಲಿರುವಾಗ ಒಂದು ರೀತಿ ಮಾತಾಡಿದರೆ ಅಧಿಕಾರಕ್ಕೆ ಬಂದ ನಂತರ ಮತ್ತೊಂದು ರೀತಿ ಮಾತಾಡುತ್ತವೆ. ಕಾಂಗ್ರೆಸ್ ನೇತೃತ್ವದ ಯುಪಿಯ ಸರಕಾರ ಮುಕ್ತ ಮಾರುಕಟ್ಟೆ ನೀತಿಗಳನ್ನು ಜಾರಿಗೊಳಿಸಲು ಪ್ರಯತ್ನಿಸಿದಾಗಲೆಲ್ಲ ಬಿಜೆಪಿ ವಿರೋಧಿಸಿದೆ. ಬಹುಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳದ ನೇರ ವಿನಿಯೋಜನೆ, ವಿಮಾ ಕ್ಷೇತ್ರದಲ್ಲಿ ಪರದೇಶಿ ಬಂಡವಾಳದ ವಿನಿಯೋಜನೆ, ಸರಕುಸೇವೆಗಳ ತೆರಿಗೆ ಜಾರಿಗೊಳಿಸುವುದು, ಪೆಟ್ರೋಲ್ ಮತ್ತು ಡಿಸೆಲ್ ಬೆಲೆಯಲ್ಲಿನ ಸಬ್ಸಿಡಿ ಕಡಿತಗೊಳಿಸುವುದು, ಕೇಂದ್ರ ಸರಕಾರದ ಲೋಕಾಯುಕ್ತ ಕಾಯಿದೆ ಮಾದರಿಯಲ್ಲಿ ಎಲ್ಲ ರಾಜ್ಯಗಳು ಲೋಕಾಯುಕ್ತ ಕಾಯಿದೆ ತರಬೇಕೆಂದು ಒತ್ತಾಯಿಸುವುದು, ಉದ್ದಿಮೆಗಳಿಗೆ ನೈಸರ್ಗಿಕ ಸಂಪನ್ಮೂಲಗಳ ನೀಡುವ ವಿಧಾನ ಮುಂತಾದವುಗಳನ್ನು ಬಿಜೆಪಿ ವಿರೋಧಿಸಿದೆ. ಬಿಜೆಪಿಯ ಬಂಡವಾಳ ವಿರೋಧಿ ನಿಲುವುಗಳನ್ನು ನೋಡಿದ ಜನ ಇವರು ಅಧಿಕಾರಕ್ಕೆ ಬಂದರೆ ಪ್ರತ್ಯೇಕ ಅಭಿವೃದ್ಧಿ ದಾರಿಯನ್ನು ತುಳಿಯಬಹುದೆಂದು ನಂಬಿ ನಂತರದ ಚುನಾವಣೆಯಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತಂದರು. ಅಧಿಕಾರಕ್ಕೆ ಬಂದ ನಂತರ ಬಿಜೆಪಿ ಸರಕಾರದ ವರಸೆಯೇ ಬದಲಾಯಿತು. ಹಿಂದಿನ ಯುಪಿಎ ಸರಕಾರದ ಬಂಡವಾಳಪರ ಆರ್ಥಿಕ ನೀತಿಗಳು ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಮುಂದುವರಿದಿವೆ.

ಇದೇ ಬಂಡವಾಳಪರ ಆರ್ಥಿಕ ನೀತಿಗಳು ನಿಯೋ ಲಿಬರಲ್ ಅಥವಾ ಉದಾರೀಕರಣ, ಖಾಸಗೀಕರಣ,

ಜಾಗತೀಕರಣ ನೀತಿಗಳೆಂದು ಪ್ರಚಾರ ಪಡೆದಿವೆ. ಸಮಷ್ಠಿಯ ಸಂಪನ್ಮೂಲಗಳನ್ನು ಖಾಸಗಿ ಬಂಡವಾಳಿಗರಿಗೆ ನೀಡುವ ಖಾಸಗೀಕರಣ ನೀತಿಗಳು, ಖಾಸಗಿ ಬಂಡವಾಳಿಗರ ವ್ಯವಹಾರಗಳನ್ನು ನಿಯಂತ್ರಿಸುವ ಕಾನೂನು ಕಟ್ಟಳೆಗಳನ್ನು ಸಡಿಲಗೊಳಿಸುವ ಉದಾರೀಕರಣ ನೀತಿಗಳು ಮತ್ತು ಬಂಡವಾಳದ ಜಾಗತಿಕ ಚಲನೆಗಿರುವ ಅಡ್ಡಿ ಆತಂಕಗಳನ್ನು ದೂರ ಮಾಡುವ ಜಾಗತೀಕರಣ ನೀತಿಗಳನ್ನು ಚುನಾಯಿತ ಸರಕಾರಗಳು ಜಾರಿಗೆ ತರುವುದನ್ನು ಸ್ಥೂಲವಾಗಿ ಮಾರುಕಟ್ಟೆಪರ ಅಥವಾ ನಿಯೋ ಲಿಬರಲ್ ಅಭಿವೃದ್ಧಿ ನೀತಿಗಳೆನ್ನಬಹುದು. ದೊಡ್ಡ ಉದ್ದಿಮೆಗಳಿಗೆ ಹೆಚ್ಚಿನ ಬೆಂಬಲ ನೀಡಿ ಸರಕುಸೇವೆಗಳ ಉತ್ಪಾದನೆ ಮತ್ತು ಪೂರೈಕೆಗಳನ್ನು ಹೆಚ್ಚಿಸುವುದು ಈ ಅಭಿವೃದ್ಧಿ ನೀತಿಯ ಗುರಿ. ಸರಕುಸೇವೆಗಳ ಉತ್ಪಾದನೆ ಹಾಗು ಪೂರೈಕೆಗಳು ಹೆಚ್ಚಾದರೆ ಎಲ್ಲರಿಗೂ ಕಡಿಮೆ ಬೆಲೆಗೆ ಸರಕುಸೇವೆಗಳು ಲಭ್ಯವಾಗುತ್ತವೆ. ಎಲ್ಲರಿಗೂ ಕಡಿಮೆ ಬೆಲೆಗೆ ಸರಕುಸೇವೆಗಳು ಲಭ್ಯವಾದರೆ ಬಡತನ ನಿವಾರಣೆಯಾಗುತ್ತದೆ. ಸರಕುಸೇವೆಗಳ ಉತ್ಪಾದನೆ ಹೆಚ್ಚಿಸುವಾಗ ಉದ್ಯೋಗ ಸೃಷ್ಟಿ ಕೂಡ ಹೆಚ್ಚುತ್ತದೆ. ಉದ್ಯೋಗ ಸೃಷ್ಟಿಯಾಗುವುದರಿಂದ ಸರಕಾರ ನಿರುದ್ಯೋಗ ನಿವಾರಣೆ ಮೇಲೆ ಪ್ರತ್ಯೇಕ ಖರ್ಚು ಮಾಡುವ ಅಗತ್ಯವಿಲ್ಲ. ಉತ್ಪಾದನೆ ಮತ್ತು ಅನುಭೋಗ ಹೆಚ್ಚಿದರೆ ನೇರ ಮತ್ತು ಪರೋಕ್ಷ ತೆರಿಗೆ ಸಂಗ್ರಹ ಹೆಚ್ಚುತ್ತದೆ. ತೆರಿಗೆ ಸಂಗ್ರಹ ಹೆಚ್ಚಾದರೆ ಸರಕಾರ ಶಿಕ್ಷಣ ಮತ್ತು ಆರೋಗ್ಯಗಳ ಮೇಲೆ ಕರ್ಚು ಮಾಡಬಹುದು.

ನಿಯೋ ಲಿಬರಲ್ ಅಭಿವೃದ್ಧಿಯಿಂದ ಬಡತನ, ನಿರುದ್ಯೋಗಗಳು ನಿವಾರಣೆಯಾಗುತ್ತವೆ, ಸರಕುಸೇವೆಗಳ ಉತ್ಪಾದನೆ ಹೆಚ್ಚುವುದರಿಂದ ತೆರಿಗೆ ಸಂಗ್ರಹ ಹೆಚ್ಚುತ್ತದೆ ಮತ್ತು ಇದೇ ಹೆಚ್ಚಾದ ತೆರಿಗೆ ಸಂಗ್ರಹವನ್ನು ಬಡಜನರಿಗೆ ಶಿಕ್ಷಣ, ಆರೋಗ್ಯಗಳನ್ನು ನೀಡಲು ಖರ್ಚು ಮಾಡಲಾಗುವುದು ಎನ್ನುವ ಗ್ರಹಿಕೆಗಳು ಈ ಮಾದರಿಯಲ್ಲಿ ಕೆಲಸ ಮಾಡುತ್ತಿವೆ. ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿಯ ಈ ಸಾಮಾನ್ಯ ಗ್ರಹಿಕೆಗಳನ್ನು ಅಂದರೆ ಈ ಪಾಲಿಸಿಗಳಿಂದ ನಿಜವಾಗಿಯೂ ಬಡತನ ನಿವಾರಣೆಯಾಗಿದೆಯೇ, ಉದ್ಯೋಗಗಳು ಸೃಷ್ಟಿಯಾಗಿವೆಯೇ, ತೆರಿಗೆ ಸಂಗ್ರಹ ಹೆಚ್ಚಾಗಿ ಅದನ್ನು ಶಿಕ್ಷಣ, ಆರೋಗ್ಯಗಳ ಮೇಲೆ ಖರ್ಚು ಮಾಡಲಾಗಿದೆಯೇ ಎನ್ನುವುದನ್ನು ಈ ಲೇಖನದಲ್ಲಿ ವಿಮರ್ಶಿಸಿದ್ದೇನೆ. ಲೇಖನದ ವಿವರಗಳನ್ನು ಮೂರು ಭಾಗಗಳಲ್ಲಿ ನೀಡಿದ್ದೇನೆ. ನಿಯೋ ಲಿಬರಲ್ ಆರ್ಥಿಕ ನೀತಿಗಳ ಹಿಂದೆ ಕೆಲಸ ಮಾಡುತ್ತಿರುವ ಗ್ರಹಿಕೆಗಳನ್ನು ಪುಸ್ತಕದ ಮೊದಲ ಭಾಗದಲ್ಲಿ ಪರಿಚಯಿಸಿದ್ದೇನೆ. ನಿಯೋ ಲಿಬರಲ್ ಪಾಲಿಸಿಗಳ ಪರಿಣಾಮಗಳನ್ನು ಅಥವಾ ಸೃಷ್ಟಿಸಿದ ಸಮಾಜದ ಚಿತ್ರಣವನ್ನು ಎರಡನೇ ಭಾಗದಲ್ಲಿ ನೀಡಿದ್ದೇನೆ. ನಿಯೋ ಲಿಬರಲ್ ಪಾಲಿಸಿಗಳ ವೈಫಲ್ಯಕ್ಕೆ ಕಾರಣವಾದ ಅಂಶಗಳನ್ನು ಪುಸ್ತಕದ ಕೊನೇ ಭಾಗದಲ್ಲಿ ಚರ್ಚಿಸಿದ್ದೇನೆ.

**ವ್ಯಕ್ತಿ, ಮಾರುಕಟ್ಟೆ:**

ವ್ಯಕ್ತಿ, ಸಮಾಜ, ಸರಕಾರ, ಮಾರುಕಟ್ಟೆಗಳನ್ನು ಮಾರುಕಟ್ಟೆ ನಿರ್ದೇಶಿತ ಅಭಿವೃದ್ದಿ ಈ ಕೆಳಗಿನಂತೆ ಕಲ್ಪಿಸಿಕೊಂಡಿದೆ. ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿ ವ್ಯಕ್ತಿಗಳ ಸಮೂಹವನ್ನೇ ಸಮಾಜವೆಂದು ತಿಳಿಯುತ್ತದೆ. ಹಾಗಾಗಿ ವ್ಯಕ್ತಿಗಳ ಸಮೂಹವನ್ನು ಹೊರತು ಪಡಿಸಿದ ಸಮಾಜದ ಇರುವಿಕೆಯನ್ನು ಅಂದರೆ ಸಮುದಾಯ, ಸಂಸ್ಥೆ, ಮೌಲ್ಯಗಳ ಇರುವಿಕೆಯನ್ನೇ ಇವರು ಅಲ್ಲಗಳೆಯುತ್ತಾರೆ. ಸಮುದಾಯ, ಸಂಸ್ಥೆ, ಮೌಲ್ಯಗಳೇ ಇಲ್ಲದಿದ್ದರೆ ವ್ಯಕ್ತಿಯ ಬೇಕು ಬೇಡಗಳನ್ನು ಇವು ಪ್ರಭಾವಿಸುವ ಪ್ರಶ್ನೆಯೇ ಇರುವುದಿಲ್ಲ. ಮಾರುಕಟ್ಟೆ ಅಭಿವೃದ್ದಿಯನ್ನು ಪ್ರತಿಪಾದಿಸುವವರು ವ್ಯಕ್ತಿಯನ್ನು ಈ ಕೆಳಗಿನ ಸಂಗತಿಗಳೊಂದಿಗೆ ಕಲ್ಪಿಸಿಕೊಳ್ಳುತ್ತಾರೆ. ಒಂದು, ಪ್ರತಿಯೊಬ್ಬರಿಗೂ ತಮ್ಮ ಬೇಕುಬೇಡಗಳ ಬಗ್ಗೆ ಖಚಿತತೆ ಇದೆ ಮತ್ತು ತಮ್ಮ ತಮ್ಮ ಸುಖಸಂತೋಷಗಳನ್ನು ಹೆಚ್ಚಿಸಿಕೊಳ್ಳುವುದಕ್ಕೆ ಪ್ರತಿಯೊಬ್ಬರೂ ಆದ್ಯತೆ ನೀಡುತ್ತಾರೆ. ಎರಡು, ಪ್ರತಿಯೊಬ್ಬರು ಉತ್ಪಾದನ ಪ್ರಕ್ರಿಯೆಯಲ್ಲಿ ಪಾಲುಗೊಳ್ಳಲು ಅವಶ್ಯವಿರುವ ಸಂಪನ್ಮೂಲ ಹೊಂದಿದ್ದಾರೆ. ಕೆಲವರು ಭೂಮಿ ಹೊಂದಿರಬಹುದು, ಇನ್ನು ಕೆಲವರು ಬಂಡವಾಳ ಅಥವಾ ತಂತ್ರಜ್ಞಾನ ಹೊಂದಿರಬಹುದು, ಮತ್ತೆ ಕೆಲವರು ದುಡಿಯುವ ಶಕ್ತಿ ಅಥವಾ ಶ್ರಮ ಹೊಂದಿರಬಹುದು. ಸರಕುಸೇವೆಗಳ ಉತ್ಪಾದನೆಗೆ ಅವಶ್ಯವಿರುವ ಭೂಮಿ, ಬಂಡವಾಳ, ಪ್ರಾಕೃತಿಕ ಸಂಪನ್ಮೂಲ, ಮಾನವ ಸಂಪನ್ಮೂಲ ಇವೆಲ್ಲವೂ ಖಾಸಗಿ ಒಡೆತನದಲ್ಲಿರುವುದೇ ಉತ್ತಮವೆಂದು ಇವರು ವಾದಿಸುತ್ತಾರೆ (ಡೇವಿಡ್ ಹಾರ್ವೇ, ೨೦೦೫).

ಮೂರು, ತಮ್ಮೊಂದಿಗಿರುವ ಸಂಪನ್ಮೂಲ ಮತ್ತು ಚಾಲ್ತಿಯಲ್ಲಿರುವ ತಂತ್ರಜ್ಞಾನಗಳನ್ನು ಬಳಸಿಕೊಂಡು ಪ್ರಾಕೃತಿಕ

ಸಂಪನ್ಮೂಲಗಳನ್ನು ಸರಕುಸೇವೆಗಳನ್ನಾಗಿ ಪರಿವರ್ತಿಸುವ ಶಕ್ತಿ ಹೊಂದಿದ್ದಾರೆ. ವಿವಿಧ ಸಂಪನ್ಮೂಲಗಳನ್ನು ಹೊಂದಿರುವ ವ್ಯಕ್ತಿಗಳು ಉತ್ಪಾದನ ಪ್ರಕ್ರಿಯೆಯಲ್ಲಿ ಪಾಲುಗೊಂಡು ವಿವಿಧ ಪ್ರತಿಫಲ ಪಡೆಯುತ್ತಾರೆ. ಭೂಮಿ ಇರುವವರು ಬಾಡಿಗೆ ಪಡೆಯುತ್ತಾರೆ, ಬಂಡವಾಳವುಳ್ಳವರು ಬಡ್ಡಿ, ಲಾಭಾಂಶ ಪಡೆಯುತ್ತಾರೆ, ಶ್ರಮ ಇರುವವರು ಕೂಲಿ ಅಥವಾ ಸಂಬಳ ಪಡೆಯುತ್ತಾರೆ. ವ್ಯಕ್ತಿ ತನ್ನ ಸ್ವಾಧೀನ ಇರುವ ಸಂಪನ್ಮೂಲವನ್ನು ವಿವೇಚನೆಯಿಂದ ಬಳಸಿ ಗಳಿಸದಿದ್ದರೆ ಬಡತನ ಅನುಭವಿಸಬೇಕಾಗುತ್ತದೆ. ದುಡಿಯುವ ಶಕ್ತಿ ಇರುವವರು ಸೋಮಾರಿಗಳಾಗಿ ದುಡಿಯದೇ ತಮ್ಮ ಶ್ರಮವನ್ನು ವ್ಯರ್ಥ ಮಾಡಿದರೆ ಅವರ ಆದಾಯ ವೃದ್ಧಿಸುವುದಿಲ್ಲ. ಸೋಮಾರಿಗಳಾಗದೇ ದುಡಿಯಲು ತಮ್ಮ ಶ್ರಮ ಬಳಸಿದರೆ ಅವರು ಹೆಚ್ಚು ಕೂಲಿ ಅಥವಾ ಆದಾಯ ಗಳಿಸಬಹುದು. ಇದೇ ರೀತಿಯಲ್ಲಿ ಭೂಮಿ ಹೊಂದಿರುವವರು ಅದನ್ನು ಕೃಷಿಗೆ ಅಥವಾ ಉದ್ದಿಮೆಗೆ ಬಳಸಿದರೆ ಬಾಡಿಗೆ ಗಳಿಸಬಹುದು. ಹಣಕಾಸುವುಳ್ಳವರು ಅದನ್ನು ವ್ಯಾಪಾರ ಅಥವಾ ಉದ್ದಿಮೆಗಳಲ್ಲಿ ಹೂಡಿದರೆ ಬಡ್ಡಿ ಗಳಿಸುತ್ತಾರೆ (ಡೇವಿಡ್ ಹಾರ್ವೇ, ೨೦೦೫). ಈ ರೀತಿಯಲ್ಲಿ ರಾಷ್ಟ್ರೀಯ ಸಂಪತ್ತು ಎಲ್ಲರಿಗೂ ವಿತರಣೆಗೊಳ್ಳುತ್ತೆ ಎನ್ನುವುದು ನಿಯೋ ಕ್ಲಾಸಿಕಲ್ ಎಕನಾಮಿಕ್ಸ್‌ನ ವಾದ.

ಇವರ ವಾದ ಪ್ರಕಾರ ಅನುಕೂಲಸ್ಥರು ಅನಾನುಕೂಲಸ್ಥರನ್ನು ಶೋಷಿಸಿ ಸಂಪತ್ತು ಗಳಿಸುತ್ತಿಲ್ಲ. ಅದರ ಬದಲು ಅವರು ತಮ್ಮಲ್ಲಿರುವ ಸಂಪನ್ಮೂಲಗಳನ್ನು ವಿವೇಚನೆಯಿಂದ ಬಳಸಿ ಸಂಪತ್ತು ಗಳಿಸುತ್ತಾರೆ. ಪ್ರತಿಯೊಬ್ಬರು ಅವರವರು ಮಾಡುವ ಆಯ್ಕೆಗಳಿಂದ ಸಂಪತ್ತಿನಲ್ಲಿ ಪಾಲು ಪಡೆಯುತ್ತಾರೆ. ಒಬ್ಬರ ಶ್ರೀಮಂತಿಕೆಯಲ್ಲಿ ಮತ್ತೊಬ್ಬರ ಬಡತನ ಅಡಗಿಲ್ಲವೆನ್ನುವುದು ಇವರ ವಾದ (ವೂಲ್ಫಂಗ್ ಸಾಸ್, ೨೦೦೦). ಇಂತಹ ವ್ಯಕ್ತಿಗಳು ವ್ಯವಹರಿಸಲು ಪೂರಕವಾಗುವ ಪರಿಸರವನ್ನು ಮಾರುಕಟ್ಟೆ ಒದಗಿಸುತ್ತದೆಯೆಂದು ನಿಯೋ ಕ್ಲಾಸಿಕಲ್ ಎಕನಾಮಿಸ್ಟ್‌ಗಳ ವಾದ. ಮಾರುಕಟ್ಟೆಯನ್ನು ಸ್ಥಳದ ರೂಪದಲ್ಲಿ ಅಥವಾ ಮಾರುವ ಖರೀದಿಸುವ ರೂಪದಲ್ಲಿ ನೋಡಿದರೆ ಮಾರುಕಟ್ಟೆಯನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಮಾರುಕಟ್ಟೆಯನ್ನು ಅರ್ಥ ಮಾಡಿಕೊಳ್ಳಬೇಕಾದರೆ ಅದರ ಹಿಂದೆ ಕೆಲಸ ಮಾಡುವ ಮೂಲ ತತ್ತ್ವಗಳನ್ನು ಅರ್ಥ ಮಾಡಿಕೊಳ್ಳಬೇಕು. ಈ ಮೂಲತತ್ತ್ವಗಳು ಮಾರುಕಟ್ಟೆ ಸ್ಥಳದ ರೂಪದಲ್ಲಿ ಅಥವಾ ದೂರವಾಣಿ, ಮೊಬೈಲ್ ಮೂಲಕ ಕೆಲಸ ಮಾಡುವಾಗಲೂ ಸಕ್ರಿಯವಾಗಿರುತ್ತವೆ. ಈ ಮೂಲತತ್ತ್ವಗಳೇನೆಂದು ಪರಿಶೀಲಿಸುವ. ಮಾರುಕಟ್ಟೆ ಸ್ಥಳದ ರೂಪದಲ್ಲಿ ಕೆಲಸ ಮಾಡುವಾಗ ಮನೆ ಬೇರೆ ಮಾರುಕಟ್ಟೆ ಬೇರೆ ಎನ್ನುವ ಅರ್ಥ ಇದೆ. ಮನೆಯಿಂದ ದೂರದಲ್ಲಿ ಮಾರುಕಟ್ಟೆ ಇದೆ. ಇದು ಕೇವಲ ದೂರದ ಪ್ರಶ್ನೆ ಮಾತ್ರವಲ್ಲ. ಮನೆ ಅಥವಾ ಸಮುದಾಯದಲ್ಲಿ ಪರಿಗಣಿಸುವ ಹಲವು ಸಂಗತಿಗಳು – ಯಾರ ಮಗ, ಮಗಳು, ಗಂಡೋ ಹೆಣ್ಣೋ, ಮೇಲ್ಜಾತಿಯೇ ಕೆಳಜಾತಿಯೇ ಇತ್ಯಾದಿಗಳು ಮಾರುಕಟ್ಟೆಯಲ್ಲಿ ಪರಿಗಣನೆಗೆ ಬರುವುದಿಲ್ಲ. ಅಂದರೆ ಮಾರುಕಟ್ಟೆಯಲ್ಲಿ ನಿಮ್ಮ ಹಿನ್ನೆಲೆಯನ್ನು ಯಾರು ಕೇಳುವುದಿಲ್ಲ. ನಿಮ್ಮ ಭಾಷೆ, ಪ್ರದೇಶ, ಜಾತಿ, ಧರ್ಮ, ಲಿಂಗಗಳು ಮಾರುಕಟ್ಟೆಯಲ್ಲಿ ಮುಖ್ಯ ಅಲ್ಲವೇ ಅಲ್ಲ.

ಹುಟ್ಟಿನಿಂದ ಬಂದ ಎಲ್ಲ ಗುರುತುಗಳನ್ನು ಮರೆತು ನೀವು ಮಾರುಕಟ್ಟೆಯಲ್ಲಿ ವ್ಯವಹರಿಸಬಹುದು. ಇದನ್ನೇ ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ನೀವು ಅಲ್ಲಿ ಸರ್ವ ಸ್ವತಂತ್ರರು. ಮತ್ತೊಂದು ರೀತಿಯಲ್ಲೂ ನೀವು ಮಾರುಕಟ್ಟೆಯಲ್ಲಿ ಸ್ವತಂತ್ರರು. ಅಂದರೆ ನೀವು ಮಾರುಕಟ್ಟೆಗೆ ಪ್ರವೇಶಿಸಿದ ಕಾರಣಕ್ಕಾಗಿ ಮಾರಲೇಬೇಕು ಅಥವಾ ಖರೀದಿಸಲೇಬೇಕೆನ್ನುವ ಕಡ್ಡಾಯವಿಲ್ಲ. ನಿಮಗೆ ಒಪ್ಪಿಗೆಯಾದರೆ ಮಾರಬಹುದು ಅಥವಾ ಖರೀದಿಸಬಹುದು. ಒಪ್ಪಿಗೆಯಾಗದಿದ್ದರೆ ಮಾರುವ ಅಥವಾ ಖರೀದಿಸಬೇಕೆನ್ನುವ ಒತ್ತಾಯವಿಲ್ಲ. ಜಾತಿ, ಧರ್ಮ, ಲಿಂಗಗಳು ಮಾರುಕಟ್ಟೆಯಲ್ಲಿ ಮಹತ್ವ ಪಡೆಯದಿರುವುದರಿಂದ ಮಾರುಕಟ್ಟೆಯಲ್ಲಿ ಸಮಾನತೆಯೂ ಇದೆ ಎನ್ನುವ ಚಿತ್ರಣ ಇದೆ. ವ್ಯಕ್ತಿಯಲ್ಲಿ ಮಾರುವ ಅಥವಾ ಖರೀದಿಸುವ ಸರಕು ಅಥವಾ ಸೇವೆಗಳಿರುವುದು ಮುಖ್ಯವೇ ಹೊರತು ಅವರ ಹಿನ್ನೆಲೆ ಇಲ್ಲಿ ಮುಖ್ಯವಲ್ಲ (ಜೆರಾಲ್ಡ್ ಬತೌಡ್, ೨೦೦೦). ಹೀಗೆ ಮಾರುಕಟ್ಟೆ ಚರಿತ್ರೆಯಿಂದ ಬಂದ ಎಲ್ಲ ಬಂಧನಗಳಿಂದ ನಿಮ್ಮನ್ನು ಮುಕ್ತಗೊಳಿಸಿ ಪರಿಪೂರ್ಣ ವ್ಯಕ್ತಿಯಾಗಿನ್ನಾಗಿಸುತ್ತದೆ. ಅಂದರೆ ನಿಮ್ಮ ಸೋಲುಗೆಲುವಿಗೆ, ಲಾಭನಷ್ಟಕ್ಕೆ, ಸುಖದುಃಖಕ್ಕೆ ಮಾರುಕಟ್ಟೆ ನಿಮ್ಮನ್ನೇ ಜವಾಬ್ದಾರನ್ನಾಗಿಸುತ್ತಿದೆ. ಮಾರುಕಟ್ಟೆ ವ್ಯಕ್ತಿಗಳನ್ನು ಸಮುದಾಯದ ಪ್ರಭಾವದಿಂದ ಬೇರ್ಪಡಿಸಿದಂತೆ ಸರಕುಸೇವೆಗಳನ್ನು ಕೂಡ ಅವುಗಳ ಸ್ಥಾನಮಾನಗಳಿಂದ ಕಿತ್ತು ಕೇವಲ ಸರಕನ್ನಾಗಿಸುತ್ತದೆ.

ದೇವರ ಕೆಲಸಕ್ಕೆ ಬಳಸುವ ಪಾತ್ರೆ ಪಗಡಿಗಳು, ಊಟಕ್ಕೆ ಬಳಸುವ ಪಾತ್ರೆಗಳು ಮತ್ತು ಪ್ರಾಣಿಗಳಿಗೆ ಆಹಾರ ನೀಡಲು ಬಳಸುವ ಪಾತ್ರಗಳ ನಡುವೆ ಮನೆಯಲ್ಲಿ ತುಂಬಾ ಅಂತರವಿದೆ. ದೇವರ ಪಾತ್ರಗಳು ತುಂಬಾ ಪವಿತ್ರ ಅದನ್ನು ಮಹಿಳೆಯರು, ಅಶುದ್ಧ ವ್ಯಕ್ತಿಗಳು ಮುಟ್ಟಬಾರದು. ಅದೇ ರೀತಿ ಮನುಷ್ಯರ ಬಳಕೆಗಿರುವ ಪಾತ್ರಗಳ ಶುದ್ಧತೆ, ಇಡುವ ಸ್ಥಳ, ಬಳಕೆ ನಂತರ ಅದರ ಶುದ್ಧೀಕರಣ ಎಲ್ಲವೂ ಪ್ರಾಣಿಗಳ ಪಾತ್ರಕ್ಕಿಂತ ಭಿನ್ನ. ಹೀಗೆ ಮನೆಯಲ್ಲಿ ವ್ಯಕ್ತಿಗಳಂತೆ ವಸ್ತುಗಳು ಕೂಡ ವಿವಿಧ ಸ್ಥಾನಮಾನಗಳನ್ನು ಹೊಂದಿವೆ. ಆದರೆ ಮಾರುಕಟ್ಟೆಯಲ್ಲಿ ಎಲ್ಲ ಪಾತ್ರಗಳು ಕೇವಲ ಸರಕುಗಳು ಮಾತ್ರ. ಇವೆಲ್ಲವೂ ಒಂದೇ ಕಡೆ ಇರುತ್ತವೆ. ಒಂದೇ ತೂಕದ ಮೆಶಿನ್‌ಲ್ಲಿ ತೂಗಿಸಲ್ಪಡುತ್ತವೆ. ಪಾತ್ರೆ ದೇವರ ಬಳಕೆಗಿದೆಯೇ ಅಥವಾ ಮನುಷ್ಯರ ಬಳಕೆಗಿದೆಯೇ ಅಥವಾ ಪ್ರಾಣಿಗಳ ಬಳಕೆಗಿದೆಯೇ ಎನ್ನುವುದು ಅದರ ಮೌಲ್ಯ ತೀರ್ಮಾನದಲ್ಲಿ ಮುಖ್ಯ ಪಾತ್ರ ವಹಿಸುವುದಿಲ್ಲ. ಪಾತ್ರೆಗೆ ಅನ್ವಯವಾಗುವ ನಿಯಮ ಎಲ್ಲ ಸರಕುಸೇವೆಗಳಿಗೂ ಅನ್ವಯವಾಗುತ್ತದೆ. ಸರಕುಸೇವೆಗಳಿಗೆ ಅವುಗಳ ಬಳಕೆಯ ನೆಲೆಯಲ್ಲಿ ಅಂದರೆ ಯಾರು ಬಳಸುತ್ತಾರೆನ್ನುವ ನೆಲೆಯಲ್ಲಿ ಮಾರುಕಟ್ಟೆಯಲ್ಲಿ ಮೌಲ್ಯ ತೀರ್ಮಾನವಾಗುವುದಿಲ್ಲ. ಅದರಬದಲು ಮಾರುಕಟ್ಟೆಯಲ್ಲಿ ಸರಕುಸೇವೆಗಳ ಮೌಲ್ಯ ತೀರ್ಮಾನವಾಗುವುದು ಅವುಗಳ ಬೇಡಿಕೆ ಮತ್ತು ಪೂರೈಕೆ ನೆಲೆಯಲ್ಲಿ. ಅಂದರೆ ಸಮಾಜ ಸಂಸ್ಕೃತಿಯಿಂದ ವಸ್ತುಗಳಿಗೆ ಬಂದ ಸ್ಥಾನಮಾನಗಳಿಂದ ಬೇರ್ಪಡಿಸಿ ವಸ್ತುಗಳನ್ನು ಪರಿಪೂರ್ಣ ಸರಕುಗಳನ್ನಾಗಿಸಿ ಅವುಗಳ ಮೌಲ್ಯ ತೀರ್ಮಾನವಾಗುತ್ತದೆ. (ಜೆರಾಲ್ಡ್ ಬತೌಡ್, ೨೦೦೦).

ಮಾರುಕಟ್ಟೆಯಲ್ಲಿ ವ್ಯಕ್ತಿಗಳು ಅವರ ಹುಟ್ಟಿನಿಂದ ಬಂದ ಬಂಧನಗಳಿಂದ ಮುಕ್ತರಾಗಿ ಪರಿಪೂರ್ಣ ಮಾರಾಟಗಾರರು ಅಥವಾ ಖರೀದಿದಾರರಾಗುತ್ತಾರೆ. ಅಂದರೆ ಚರಿತ್ರೆಯಿಂದ ಬಂದ ಮೇಲುಕೀಳುಗಳು ಮಾರುಕಟ್ಟೆಯಲ್ಲಿ ಕೆಲಸ ಮಾಡುವುದಿಲ್ಲ. ಇಲ್ಲಿ ಎಲ್ಲರೂ ಸಮಾನರು. ಸರಕುಸೇವೆಗಳು ಮೌಲ್ಯ ತೀರ್ಮಾನದಲ್ಲೂ ವಸ್ತುಗಳ ಬಳಕೆ ಅಥವಾ ಹಿನ್ನೆಲೆಗಳು ಕೆಲಸ ಮಾಡುವುದಿಲ್ಲ. ಅದರ ಬದಲು ಇವುಗಳ ಪೂರೈಕೆ ಮತ್ತು ಬೇಡಿಕೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಇವೆಲ್ಲ ಮಾರುಕಟ್ಟೆ ಮೂಲತತ್ತ್ವಗಳು. ಇದು ನಿಯೋ ಕ್ಲಾಸಿಕಲ್ ಎಕನಾಮಿಕ್ಸ್ ಪ್ರತಿಪಾದಿಸುವ ಮಾರುಕಟ್ಟೆ ಕಲ್ಪನೆ. ಇಂತಹ ಮಾರುಕಟ್ಟೆಯಲ್ಲಿ ವ್ಯವಹರಿಸಿ ವ್ಯಕ್ತಿಗಳು ತಮ್ಮ ಬೇಕುಬೇಡಗಳನ್ನು ಪೂರೈಸಿಕೊಳ್ಳುತ್ತಾರೆ. ಇಂತಹ ಮಾರುಕಟ್ಟೆ ಉತ್ಪಾದಿತ ಸಂಪತ್ತನ್ನು ಅಥವಾ ಸರಕುಸೇವೆಗಳನ್ನು ಮತ್ತು ಉತ್ಪಾದನ ಪರಿಕರಗಳನ್ನು ಸಮಾಜದ ವಿವಿಧ ಗುಂಪುಗಳ ನಡುವೆ ವಿತರಿಸುತ್ತದೆ ಎನ್ನುವ ಗ್ರಹಿಕೆ ಇದೆ.

**ಸರಕಾರ:**

ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿಯಲ್ಲಿ ಸರಕಾರದ ಪಾತ್ರ ಕೂಡ ನಿರ್ಧರಿತವಾಗಿದೆ. ಆಡಳಿತದ ವೆಚ್ಚವನ್ನು ಕಡಿಮೆ ಮಾಡುವ ದೃಷ್ಟಿಯಿಂದ ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿಯಲ್ಲಿ ಸರಕಾರ ಗಾತ್ರ ಮತ್ತು ಪಾತ್ರ ಎರಡೂ ಕೂಡ ಕಡಿಮೆ ಇರಬೇಕೆನ್ನುವ ಗ್ರಹಿಕೆ ಇದೆ (ವರ್ಲ್ಡ್ ಬ್ಯಾಂಕ್, ೧೯೯೭). ಗಾತ್ರ ಎಂದರೆ ಸರಕಾರಿ ಇಲಾಖೆಗಳ ಸಂಖ್ಯೆ, ಮಂತ್ರಿಗಳ ಸಂಖ್ಯೆ, ನೌಕರರ ಸಂಖ್ಯೆ ಕಡಿಮೆ ಇರಬೇಕೆನ್ನುವ ಅರ್ಥ. ಹಿಂದೆ ಸರಕಾರ ನಡೆಸುತ್ತಿದ್ದ ಹಲವು ಕಾರ್ಯಕ್ರಮಗಳು ಖಾಸಗಿ ವಲಯಕ್ಕೆ ವರ್ಗಾವಣೆಗೊಳ್ಳುವುದರಿಂದ ಸರಕಾರಿ ಇಲಾಖೆಗಳು ಸಂಖ್ಯೆ, ಮಂತ್ರಿಗಳ ಸಂಖ್ಯೆ, ನೌಕರರ ಸಂಖ್ಯೆ ಕಡಿಮೆಯಾಗುತ್ತದೆ. ಸರಕಾರದ ಪಾತ್ರ ಕಡಿಮೆ ಇರಬೇಕೆನ್ನುವಾಗ ನಮ್ಮಂತಹ ಹಲವು ಭಾಷೆ, ಧರ್ಮಗಳಿರುವ ದೊಡ್ಡ ದೇಶದಲ್ಲಿ ಜನರ ಬೇಕುಬೇಡಗಳನ್ನು ಸರಕಾರವೇ ಏಕಾಂಗಿಯಾಗಿ ಅರ್ಥ ಮಾಡಿಕೊಳ್ಳುವುದು ಕಷ್ಟ. ಜನರ ಬೇಕುಬೇಡಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗದಿದ್ದರೆ ಅವುಗಳನ್ನು ಪೂರೈಸಲು ಸಾಧ್ಯವಿಲ್ಲ. ಸರಕಾರದ ಜೊತೆಗೆ ಉದ್ದಿಮೆಗಳು ಮತ್ತು ಸಿವಿಲ್ ಸೊಸೈಟಿಗಳು (ಸರಕಾರೇತರ ಸಂಸ್ಥೆಗಳು) ಆಡಳಿತದಲ್ಲಿ ಪಾಲುಗೊಳ್ಳುವುದು ಇಂದಿನ ಸರಕಾರದ ಲಕ್ಷಣ. ಉದ್ದಿಮೆಗಳು ಪ್ರತ್ಯೇಕವಾಗಿ ಅಥವಾ ಸರಕಾರದೊಂದಿಗೆ ಜಂಟಿಯಾಗಿ (ಸಾರ್ವಜನಿಕ ಖಾಸಗಿ ಪಾಲುಗೊಳ್ಳುವಿಕೆ ಅಥವಾ ಪಿಪಿಪಿ ಮಾದರಿ) ಅಭಿವೃದ್ಧಿ ಕೆಲಸಗಳಲ್ಲಿ ಕೈಜೋಡಿಸುವುದು ಸೇರಿದೆ. ಒಂದು ಕಾಲದಲ್ಲಿ ಸರಕಾರ ಪೂರೈಸುತ್ತಿದ್ದ ಸಾಮಾಜಿಕ (ಶಿಕ್ಷಣ, ಆರೋಗ್ಯ, ವಸತಿ, ಕುಡಿಯುವ ನೀರು ಇತ್ಯಾದಿಗಳನ್ನು) ಹಾಗು ಆರ್ಥಿಕ (ಸಾರಿಗೆ ಸಂಪರ್ಕ, ಬಂದರು, ವಿಮಾನ ನಿಲ್ದಾಣ, ವಿಮೆ, ಬ್ಯಾಂಕ್ ಇತ್ಯಾದಿಗಳನ್ನು) ಮೂಲಸೌಕರ್ಯಗಳನ್ನು ಇಂದು ಉದ್ದಿಮೆಗಳು ಉತ್ಪಾದಿಸಿ

ಪೂರೈಸುತ್ತಿವೆ.

ಸರಕುಸೇವೆಗಳ ಜೊತೆಗೆ ಸಾಮಾಜಿಕ ಆರ್ಥಿಕ ಮೂಲಸೌಕರ್ಯಗಳನ್ನು ಉತ್ಪಾದಿಸಿ ಪೂರೈಕೆ ಮಾಡುವುದು ಉದ್ದಿಮೆಗಳ ಜವಾಬ್ದಾರಿಯಾದರೆ ಸರಕಾರದ ಕೆಲಸವೇನು? ಎನ್ನುವ ಪ್ರಶ್ನೆ ಹುಟ್ಟುತ್ತದೆ. ಇಂತಹ ಉದ್ದಿಮೆಗಳಿಗೆ ಕಡಿಮೆ ಬೆಲೆಗೆ ನೀರು, ಭೂಮಿ, ಹಣಕಾಸು, ಪ್ರಾಕೃತಿಕ ಸಂಪನ್ಮೂಲ, ಮಾನವ ಸಂಪನ್ಮೂಲಗಳನ್ನು ಒದಗಿಸುವುದು ಸರಕಾರದ ಜವಾಬ್ದಾರಿಯಾಗಿದೆ. ಉದ್ದಿಮೆಗಳಿಗೆ ಕಡಿಮೆ ಬೆಲೆಗೆ ಭೂಮಿ ಪೂರೈಕೆ ಮಾಡಲು ಸರಕಾರ ೨೦೧೩ರ ಭೂಸ್ವಾಧೀನ ಮಸೂದೆ ತಿದ್ದುಪಡಿ ಮಾಡಲು ಹೊರಟಿದೆ. ೨೦೧೩ರ ಭೂಸ್ವಾಧೀನ ಮಸೂದೆ ಪ್ರಕಾರ ಉದ್ದಿಮೆಗಳಿಗೆ ಕೃಷಿಕರ ಭೂಮಿ ಸ್ವಾಧೀನ ಪಡಿಸಿಕೊಳ್ಳಲು ಕನಿಷ್ಠ ಶೇ.೮೦ರಷ್ಟು ಕೃಷಿಕರ ಒಪ್ಪಿಗೆ ಬೇಕು. ಸ್ವಾಧೀನ ಪಡಿಸಿಕೊಂಡ ಭೂಮಿಗೆ ಮಾರುಕಟ್ಟೆ ಬೆಲೆಯ ಐದು ಪಟ್ಟು ಬೆಲೆ ನೀಡಬೇಕು. ನೀರಾವರಿಯುಳ್ಳ ಕೃಷಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಬಾರದು. ಸ್ವಾಧೀನ ಪಡಿಸಿಕೊಂಡ ಭೂಮಿಯನ್ನು ಐದು ವರ್ಷಗಳೊಳಗೆ ಸ್ವಾಧೀನ ಪಡಿಸಿಕೊಂಡ ಉದ್ದೇಶಕ್ಕೆ ಬಳಸಬೇಕು. ಒಂದು ವೇಳೆ ಐದು ವರ್ಷದೊಳಗೆ ಸ್ವಾಧೀನ ಪಡಿಸಿಕೊಂಡ ಉದ್ದೇಶಕ್ಕೆ ಬಳಸದಿದ್ದರೆ ಭೂಮಿಯನ್ನು ಹಿಂದಕ್ಕೆ ಕೊಡಬೇಕು. ಸ್ವಾಧೀನ ಪಡಿಸಿಕೊಂಡ ಭೂಮಿಯಲ್ಲಿ ಆರಂಭಿಸುವ ಉದ್ದಿಮೆಗಳಿಂದ ಪರಿಸರ ನಾಶವಾದರೆ ಅದಕ್ಕೆ ಪರಿಹಾರವನ್ನು ಭೂಮಿ ಸ್ವಾಧೀನ ಪಡಿಸಿಕೊಂಡವರು ಕೊಡಬೇಕು. ಇದೇ ರೀತಿಯಲ್ಲಿ ಸ್ವಾಧೀನ ಪಡಿಸಿಕೊಂಡ ಭೂಮಿ ಮೇಲೆ ಪರೋಕ್ಷವಾಗಿ ಅವಲಂಬಿಸಿರುವ ಕುಂಬಾರ, ಕಂಬಾರ, ಚಮ್ಮಾರ, ಕೃಷಿ ಕೆಲಸಗಾರರಿಗೂ ಪರಿಹಾರವನ್ನು ಭೂಮಿ ಸ್ವಾಧೀನ ಪಡಿಸಿಕೊಳ್ಳುವವರು ಕೊಡಬೇಕು. ಇವೆಲ್ಲ ಶರತ್ತುಗಳು ೨೦೧೩ರ ಭೂಸ್ವಾಧೀನ ಮಸೂದೆಯಲ್ಲಿದ್ದವು (ಭಾರತ ಸರಕಾರ, ೨೦೧೩).

ಇಂತಹ ಮಸೂದೆ ಉದ್ದಿಮೆಗಳ ಹಿತಕ್ಕೆ ಅಡ್ಡಿಯೆಂದು ಬಿಜೆಪಿ ಸರಕಾರ ಈ ಮಸೂದೆಯನ್ನು ಆರ್ಡಿನೆನ್ಸ್ ಮೂಲಕ ತಿದ್ದುಪಡಿ ಮಾಡಲು ಪ್ರಯತ್ನಿಸಿದೆ. ಈ ತಿದ್ದುಪಡಿ ಪ್ರಕಾರ ಮೇಲಿನ ಐದು ಶರತ್ತುಗಳಲ್ಲಿ ಹೆಚ್ಚಿನ ಬೆಲೆ ನೀಡುವ ಒಂದು ಶರತ್ತನ್ನು ಬಿಟ್ಟು ಉಳಿದೆಲ್ಲವನ್ನು ರದ್ದುಗೊಳಿಸಲಾಗಿದೆ. ಬಿಜೆಪಿ ಸರಕಾರದ ಈ ತಿದ್ದುಪಡಿಯ ವಿರುದ್ಧ ಕೃಷಿಕರು ದೇಶವ್ಯಾಪಿ ಪ್ರತಿಭಟನೆ ನಡೆಸಿದರು. ಹಾಗಾಗಿ ಸರಕಾರ ತಾತ್ಕಾಲಿಕವಾಗಿ ತಿದ್ದುಪಡಿಯನ್ನು ತಡೆ ಹಿಡಿದಿದೆ. ತಿದ್ದುಪಡಿಗೊಂಡ ಭೂಸ್ವಾಧೀನ ಮಸೂದೆಯನ್ನು ಅನುಷ್ಠಾನಗೊಳಿಸುವ ಸ್ವಾತಂತ್ರ್ಯವನ್ನು ರಾಜ್ಯ ಸರಕಾರಗಳಿಗೆ ನೀಡಲಾಗಿದೆ. ಬಿಜೆಪಿ ಆಡಳಿತ ನಡೆಸುವ ರಾಜ್ಯಗಳಲ್ಲಿ ತಿದ್ದುಪಡಿಗೊಂಡ ಮಸೂದೆ ಅನುಷ್ಠಾನಗೊಳ್ಳುವ ಸಾಧ್ಯತೆಗಳಿವೆ. ಇದೇ ರೀತಿಯಲ್ಲಿ ಸಾಲ ನೀತಿಯನ್ನು ಕೂಡ ಉದ್ದಿಮೆಗಳಿಗೆ ಹೆಚ್ಚು ಸಾಲ ಹರಿಯುವಂತೆ ತಿದ್ದುಪಡಿ ಮಾಡಲಾಗಿದೆ. ಸರಕಾರಿ ಮತ್ತು ಖಾಸಗಿ ಸಾಲಗಳೆನ್ನುವ ಎರಡು ವಿಧದ ಸಾಲಗಳಿವೆ. ಖಾಸಗಿ ಸಾಲಕ್ಕೆ ಹೋಲಿಸಿದರೆ ಸರಕಾರಿ ಸಾಲದ ಬಡ್ಡಿ ಕಡಿಮೆ ಇದೆ ಮತ್ತು ಮರುಸಂದಾಯ ಅವಧಿ ಹೆಚ್ಚಿದೆ. ಸರಕಾರಿ ಸಾಲದ ಶೇ.೬೦ನ್ನು ಸಾಮಾನ್ಯ ವಲಯಕ್ಕೆ ಮತ್ತು ಶೇ.೪೦ನ್ನು ಆದ್ಯತಾ ವಲಯಕ್ಕೆ ನೀಡುವಂತೆ ಸಾಲ ನೀತಿಯನ್ನು ತಿದ್ದುಪಡಿ ಮಾಡಲಾಗಿದೆ. ಶೇ.೪೦ರಷ್ಟು ಸರಕಾರಿ ಸಾಲದಲ್ಲಿ ಶೇ.೧೮ ಕೃಷಿಗೆ, ಶೇ.೧೨ ಸಣ್ಣಪುಟ್ಟ ವ್ಯಾಪಾರ ಉದ್ದಿಮೆಗಳಿಗೆ ಮತ್ತು ಶೇ.೧೦ ಬಡತನ ನಿವಾರಣ ಕಾರ್ಯಕ್ರಮಗಳಿಗೆ ಹೋಗುತ್ತದೆ. ಅಂದರೆ ನಮ್ಮ ಸಮಾಜದ ಶೇ.೯೦ರಷ್ಟು ಜನರು ಶೇ.೪೦ರಷ್ಟು ಸರಕಾರ ಸಾಲ ಪಡೆದರೆ ದೊಡ್ಡ ವ್ಯಾಪಾರ ಉದ್ದಿಮೆಗಳನ್ನು ನಡೆಸುವ ಶೇ.೧೦ರಷ್ಟು ಜನರು ಸರಕಾರಿ ಸಾಲದ ಶೇ.೬೦ನ್ನು ಪಡೆಯುತ್ತಾರೆ (ಭಾರತ ಸರಕಾರ, ೨೦೦೭).

ಭೂಮಿ, ಸಾಲ ನೀತಿಗಳ ರೀತಿಯಲ್ಲೆ ತೆರಿಗೆ ನೀತಿ ಕೂಡ ಬಂಡವಾಳ ಸಂಗ್ರಹಕ್ಕೆ ಪೂರಕವಾಗಿದೆ. ನೇರ ಮತ್ತು ಪರೋಕ್ಷ ತೆರಿಗೆಗಳೆನ್ನುವ ಎರಡು ವಿಧದ ತೆರಿಗೆಗಳಿವೆ. ಆದಾಯ, ಆಸ್ತಿ, ಸಂಪತ್ತು ಇದ್ದವರು ನೇರ ತೆರಿಗೆ ಕಟ್ಟುತ್ತಾರೆ. ಆದುದರಿಂದ ಇದನ್ನು ಅನುಕೂಲಸ್ಥರ ತೆರಿಗೆ ಎನ್ನಬಹುದು. ಪರೋಕ್ಷ ತೆರಿಗೆಯನ್ನು ಎಲ್ಲರೂ ಅಂದರೆ ಮೂರು ಹೊತ್ತಿನ ಊಟಕ್ಕೆ ಪರದಾಡುವವರು ಕಟ್ಟಬೇಕು. ನಮ್ಮಲ್ಲಿ ಅನುಕೂಲಸ್ಥರಿಗಿಂತ ಹೆಚ್ಚು ಅನಾನುಕೂಲಸ್ಥರು ಇರುವುದರಿಂದ ಇದನ್ನು ಅನಾನುಕೂಲಸ್ಥರ ತೆರಿಗೆ ಎನ್ನಬಹುದು. ತೊಂಬತ್ತರ ಹಿಂದೆ ನಮ್ಮಲ್ಲಿ ನೇರ ತೆರಿಗೆ ದರ ಶೇ.೫೦ಕ್ಕಿಂತಲೂ ಹೆಚ್ಚಿತ್ತು. ಆದರೆ ಇಂದು ಇದು ಶೇ.೩೦ಕ್ಕೆ ಇಳಿದಿದೆ. ಐದು ಲಕ್ಷ ಆದಾಯ ಇರುವವರು ಶೇ.೧೦ರಷ್ಟು, ಎಂಟು ಲಕ್ಷ ಆದಾಯ ಇರುವವರು ಶೇ.೨೦ರಷ್ಟು ಮತ್ತು ಎಂಟು

ಲಕ್ಷಕ್ಕಿಂತ ಹೆಚ್ಚು ಆದಾಯವುಳ್ಳವರು ಶೇ.೩೦ರಷ್ಟು ನೇರ ತೆರಿಗೆ ಸಂದಾಯ ಮಾಡಬೇಕು. ಎಂಟು ಲಕ್ಷದ ಮೇಲೆ ಎಷ್ಟೇ ಲಕ್ಷ ಅಥವಾ ಕೋಟಿ ಆದಾಯವಿರಲಿ ನೇರ ತೆರಿಗೆ ಶೇ.೩೦ ಇರುತ್ತದೆ. ಅಷ್ಟು ಮಾತ್ರವಲ್ಲ ಈ ಶೇ.೩೦ ಕೂಡ ಹೆಚ್ಚೆನ್ನುವ ಉದ್ದಿಮೆಗಳ ಕೂಗಿಗೆ ಬೆಲೆ ಕೊಟ್ಟು ಅವುಗಳ ಆದಾಯದ ಮೇಲಿನ ತೆರಿಗೆಯನ್ನು ಶೇ.೨೫ಕ್ಕೆ ಇಳಿಸಲು ಸರಕಾರ ನಿರ್ಧರಿಸಿದೆ (ಆರ್‌ಬಿಐ, ೨೦೧೪).

ಈ ಎಲ್ಲ ಕಾರಣಗಳಿಂದ ನೇರ ತೆರಿಗೆ ಸಂಗ್ರಹ ನಮ್ಮಲ್ಲಿ ಪರೋಕ್ಷ ತೆರಿಗೆ ಸಂಗ್ರಹಕ್ಕಿಂತ ತುಂಬಾ ಕಡಿಮೆ ಇದೆ. ಬಹುತೇಕ ಶ್ರೀಮಂತ ದೇಶಗಳಲ್ಲಿ ನೇರ ತೆರಿಗೆ ಸಂಗ್ರಹ ಅವುಗಳ ಒಟ್ಟು ತೆರಿಗೆ ಸಂಗ್ರಹದ ಅರ್ಧಕ್ಕಿಂತಲೂ ಹೆಚ್ಚಿದ್ದರೆ ನಮ್ಮಲ್ಲಿ ನೇರ ತೆರಿಗೆ ಸಂಗ್ರಹ ನಮ್ಮ ಒಟ್ಟು ತೆರಿಗೆ ಸಂಗ್ರಹದ ಮೂರನೇ ಒಂದರಷ್ಟಿದೆ. ಎಲ್ಲ ದೇಶಗಳಲ್ಲೂ ಆದಾಯ ಹೆಚ್ಚಿದಂತೆ ನೇರ ತೆರಿಗೆ ದರ ಕೂಡ ಹೆಚ್ಚುತ್ತದೆ ಮತ್ತು ನೇರ ತೆರಿಗೆ ಕಟ್ಟುವವರ ಸಂಖ್ಯೆ ಕೂಡ ಹೆಚ್ಚಿರುತ್ತದೆ. ಆದರೆ ನಮ್ಮಲ್ಲಿ ಆ ರೀತಿ ಇಲ್ಲ. ನೂರ ಇಪ್ಪತ್ತು ಕೋಟಿ ಜನಸಂಖ್ಯೆ ಇರುವ ದೇಶದಲ್ಲಿ ನೇರ ತೆರಿಗೆ ಕಟ್ಟುವವರ ಸಂಖ್ಯೆ ನಾಲ್ಕೈದು ಕೋಟಿ ದಾಟುವುದಿಲ್ಲ. ಅಷ್ಟುಮಾತ್ರವಲ್ಲ ಪರೋಕ್ಷ ತೆರಿಗೆ ಸಂಗ್ರಹದ ಹೆಚ್ಚಳಕ್ಕೆ ಮಾಡುವ ಪ್ರಯತ್ನದ ಅರ್ಧದಷ್ಟನ್ನು ಕೂಡ ನೇರ ತೆರಿಗೆ ಸಂಗ್ರಹದ ಹೆಚ್ಚಳಕ್ಕೆ ಮಾಡುವುದು ಕಾಣುತ್ತಿಲ್ಲ. ೨೦೧೬ರಲ್ಲಿ ಜಿಎಸ್‌ಟಿ ಮಸೂದೆಗೆ ಬೆಂಬಲ ಪಡೆಯಲು ನಡೆದ ಸಂವಿಧಾನದ ತಿದ್ದುಪಡಿ ಇದಕ್ಕೆ ಉತ್ತಮ ಉದಾಹರಣೆ. ಕಾರಣ ಏನೇ ಇರಲಿ ನೇರ ತೆರಿಗೆ ಬದಲು ಪರೋಕ್ಷ ತೆರಿಗೆ ಹೆಚ್ಚಿಸಿದರೆ ಆರ್ಥಿಕ ಅಸಮಾನತೆ ಹೆಚ್ಚುತ್ತಲೇ ಹೋಗುತ್ತದೆ. ನೇರ ತೆರಿಗೆ ಬದಲು ಪರೋಕ್ಷ ತೆರಿಗೆಗಳನ್ನು ಬೇರೆ ಬೇರೆ ರೂಪದಲ್ಲಿ ಏರಿಸುವುದನ್ನು ಪ್ರಗತಿಪರ ತೆರಿಗೆ ನೀತಿ ಎನ್ನಲಾಗುವುದಿಲ್ಲ.

ಬಿಗಿ ಕಾರ್ಮಿಕ ಕಾಯಿದೆಗಳು ಮತ್ತು ಸಂಘಟಿತ ಕಾರ್ಮಿಕರು ಆರ್ಥಿಕ ಪ್ರಗತಿಗೆ ಮಾರಕ ಎನ್ನುವ ವಾದವನ್ನು ಮುಂದಿಟ್ಟುಕೊಂಡು ಖಾಸಗೀಕರಣ ಪ್ರಕ್ರಿಯೆ ಆರಂಭವಾದ ನಂತರ ಕಾರ್ಮಿಕ ಕಾಯಿದೆಗಳಿಗೆ ತಿದ್ದುಪಡಿ ಆರಂಭವಾಗಿದೆ. ಈ ತಿದ್ದುಪಡಿಗಳ ಮೂಲಕ ಗುತ್ತಿಗೆ, ಹೊರಗುತ್ತಿಗೆ, ತಾತ್ಕಾಲಿಕ, ಅರೆಕಾಲಿಕ ಕಾರ್ಮಿಕ ಪದ್ಧತಿಗಳನ್ನು ಜಾರಿಗೆ ತರಲಾಗಿದೆ. ಎಲ್ಲ ಕ್ಷೇತ್ರ ಗಳಲ್ಲೂ ಪರ್ಮನೆಂಟ್ ಕೆಲಸ ಇಂದು ಗಗನ ಕುಸುಮವಾಗಿದೆ. ಇದು ಕೇವಲ ಖಾಸಗಿ ವಲಯಕ್ಕೆ ಸೀಮಿತವಾದ ಬೆಳವಣಿಗೆಯಲ್ಲ; ಸರಕಾರಿ ವಲಯಗಳಲ್ಲೂ ಹೆಚ್ಚು ಕಡಿಮೆ ಇದೇ ಸ್ಥಿತಿ ಇದೆ. ಈ ಎಲ್ಲ ಕಾರ್ಮಿಕ ಸುಧಾರಣೆಗಳಿಂದ ವಿವಿಧ ಕ್ಷೇತ್ರಗಳಲ್ಲಿ ದುಡಿಯುವ ಕೆಲಸಗಾರರಲ್ಲಿ ಶೇಕಡಾ ೯೩ರಷ್ಟು ಅಸಂಘಟಿತ ಕಾರ್ಮಿಕರೇ ತುಂಬಿದ್ದಾರೆ. ಕೃಷಿ ಕ್ಷೇತ್ರದಲ್ಲಿ ಶೇಕಡಾ ೯೯, ಕೈಗಾರಿಕ ವಲಯದಲ್ಲಿ ಶೇಕಡಾ ೭೫, ಕನ್‌ಸ್ಟ್ರಕ್ಷನ್ ಕೆಲಸಗಾರರಲ್ಲಿ ಶೇಕಡಾ ೯೩, ವ್ಯಾಪಾರ, ಹೊಟೇಲ್, ರೆಸ್ಟೋರೆಂಟ್‌ಗಳಲ್ಲಿ ಶೇ.೯೯ರಷ್ಟು ಕೆಲಸಗಾರರು ಅಸಂಘಟಿತ ಕಾರ್ಮಿಕರಿದ್ದಾರೆ (ಭಾರತ ಸರಕಾರ, ೨೦೦೯). ಅಸಂಘಟಿತ ಕಾರ್ಮಿಕರಿಗೆ ಉದ್ಯೋಗ, ಸಂಬಳ ಹಾಗು ಸಾಮಾಜಿಕ ಭದ್ರತೆಗಳಿಲ್ಲ. ಮಾಲೀಕರು ಇವರನ್ನು ಕುಶಿ ಬಂದಾಗ ನೇಮಕ ಮಾಡಿ ಕುಶಿ ಬಂದಂತೆ ದುಡಿಸಿ ಕುಶಿ ಬಂದಾಗ ಮನೆಗೆ ಕಳುಹಿಸಬಹುದಾದ ಉದ್ಯೋಗಗಳು ಇವು.

ಉನ್ನತ ಶಿಕ್ಷಣದ ಖಾಸಗೀಕರಣದಿಂದ ಎಲ್ಲರಿಗೂ–ವಿದ್ಯಾರ್ಥಿ, ಮ್ಯಾನೇಜ್‌ಮೆಂಟ್, ಅಧ್ಯಾಪಕರು, ಪೋಷಕರಿಗೂ ಅನುಕೂಲವಾಗಲಿದೆಯೆಂದು ಖಾಸಗೀಕರಣ ಪ್ರಕ್ರಿಯೆ ಆರಂಭವಾಯಿತು. ಉನ್ನತ ಶಿಕ್ಷಣದ ಅರ್ಧಕ್ಕಿಂತಲೂ ಹೆಚ್ಚಿನ ಶಿಕ್ಷಣ ಸಂಸ್ಥೆಗಳು ಇಂದು ಖಾಸಗಿ ಒಡೆತನದಲ್ಲಿವೆ. ಬಹುತೇಕ ಮೆಡಿಕಲ್, ಎಂಜಿನೀಯರಿಂಗ್ ಕಾಲೇಜುಗಳು  ಖಾಸಗಿ ಒಡೆತನದಲ್ಲಿವೆ. ವರ್ಲ್ಡ್ ಹೆಲ್ತ್ ಆರ್ಗನೈಸೆಶನ್‌ನ ನಿಯಮ ಪ್ರಕಾರ ಪ್ರತಿ ಸಾವಿರ ಜನರಿಗೊಬ್ಬ ಡಾಕ್ಟರ್ ಇರಬೇಕು. ನಮ್ಮಲ್ಲಿ  ೧೬೭೪ ಜನರಿಗೆ ಒಬ್ಬ ಡಾಕ್ಟರ್ ಇದ್ದಾರೆ. ಅಗತ್ಯವಿರುವಷ್ಟು ಡಾಕ್ಟರ್‌ಗಳನ್ನು ತರಬೇತುಗೊಳಿಸಬೇಕಾದರೆ ಪ್ರತಿ ವರ್ಷ ನೂರು ಕಾಲೇಜುಗಳಂತೆ ಮುಂದಿನ ಐದು ವರ್ಷಗಳಲ್ಲಿ ೫೦೦ ಮೆಡಿಕಲ್ ಕಾಲೇಜುಗಳನ್ನು ಆರಂಭಿಸಬೇಕೆಂದು ತಜ್ಞರು ಅಭಿಪ್ರಾಯ ಪಡುತ್ತಾರೆ. ಒಂದು ಮೆಡಿಕಲ್ ಕಾಲೇಜು ಆರಂಭಿಸಲು ಕನಿಷ್ಠ ೨೦೦ ಕೋಟಿ ವಿನಿಯೋಜಿಸಬೇಕು. ವರ್ಷಕ್ಕೆ ಇಪ್ಪತ್ತು ಸಾವಿರ ಕೋಟಿಯಂತೆ ಐದು ವರ್ಷಕ್ಕೆ ಒಂದು ಲಕ್ಷ ಕೋಟಿ ರೂಗಳನ್ನು ಮೆಡಿಕಲ್ ಕಾಲೇಜು ಆರಂಭಿಸಲು ಸರಕಾರ ವಿನಿಯೋಜಿಸಬೇಕು. ಆದರೆ ಸರಕಾರ ಇಷ್ಟೊಂದು ದೊಡ್ಡ ಮೊತ್ತವನ್ನು ವಿನಿಯೋಜಿಸಲು ಮನಸ್ಸು ಮಾಡುತ್ತಿಲ್ಲ (ಭಾರತ ಸರಕಾರ, ೨೦೧೬).

ಸರಕಾರ ಆರೋಗ್ಯ ಕ್ಷೇತ್ರದ ಮೇಲೆ ವಿನಿಯೋಜಿಸಲು ವಿಫಲವಾದ ಕಾರಣ ದೊಡ್ಡ ಪ್ರಮಾಣದಲ್ಲಿ ಖಾಸಗಿ ಮೆಡಿಕಲ್ ಕಾಲೇಜುಗಳು ಮತ್ತು ಆಸ್ಪತ್ರೆಗಳು ವ್ಯಾಪಾರ ನಡೆಸುತ್ತಿವೆ. ಇಂದು ದೇಶದಲ್ಲಿರುವ ಒಟ್ಟು ೩೯೮ ಮೆಡಿಕಲ್ ಕಾಲೇಜುಗಳಲ್ಲಿ ಅರ್ಧಕ್ಕಿಂತಲು ಹೆಚ್ಚನ್ನು (೨೧೫) ಖಾಸಗಿ ಶಿಕ್ಷಣ ಸಂಸ್ಥೆಗಳು ಆರಂಭಿಸಿವೆ. ಎಂಬತ್ತು ತೊಂಬತ್ತರ ನಂತರ ಆರೋಗ್ಯ ಕ್ಷೇತ್ರದ ಖಾಸಗೀಕರಣ ಇನ್ನೂ ಹೆಚ್ಚಾಯಿತು. ಶೇಕಡಾ ೭೦ರಷ್ಟು ಡಾಕ್ಟರ್‌ಗಳು ಇಂದು ಖಾಸಗಿ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರಲ್ಲಿ ಬಹುತೇಕರು (ಶೇ.೭೦ರಷ್ಟು) ಪೇಟೆಪಟ್ಟಣಗಳ ಅನುಕೂಲಸ್ಥರಿಗೆ ಆರೋಗ್ಯ ಸೇವೆ ನೀಡಲು ಪೈಪೋಟಿ ನಡೆಸುತ್ತಿದ್ದಾರೆ. ೨೦೧೪ರಲ್ಲಿ ಶೇ.೭೦ರಷ್ಟು ಹೊರರೋಗಿಗಳು ಮತ್ತು ಶೇ.೬೦ರಷ್ಟು ಒಳರೋಗಿಗಳು ಖಾಸಗಿ ಕ್ಷೇತ್ರದ ಡಾಕ್ಟರ್‌ಗಳ ಸೇವೆಯನ್ನು ಅವಲಂಬಿಸಿದ್ದಾರೆ. ಖಾಸಗಿ ಕ್ಷೇತ್ರದಲ್ಲಿ ವೈದ್ಯಕೀಯ ಸೇವೆ ನೀಡುವವರಲ್ಲಿ ಅಧಿಕೃತ ಮೆಡಿಕಲ್ ಶಿಕ್ಷಣ ಇಲ್ಲದವರ ಸಂಖ್ಯೆಯೂ ಹೆಚ್ಚಿದೆ. ಇಂತವರ ಸಂಖ್ಯೆ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿದೆ (ಭಾರತ ಸರಕಾರ, ೨೦೧೬). ಇಂತಹ ಆರ್ಥಿಕ ನೀತಿಗಳು ಸೃಷ್ಟಿಸಿದ ಸಮಾಜದ ಚಿತ್ರಣವನ್ನು ಮುಂದಿನ ಪುಟಗಳಲ್ಲಿ ನೀಡಿದ್ದೇನೆ.

**ಪರಿಣಾಮಗಳು:**

ಹಿಂದಿನ ಸರಕಾರದ ನೇತೃತ್ವದ ಅಭಿವೃದ್ಧಿಯಿಂದ ಬಡತನ, ನಿರುದ್ಯೋಗಗಳು ನಿವಾರಣೆಯಾಗಿಲ್ಲ, ಜನರಿಗೆ ಉತ್ತಮ, ಆರೋಗ್ಯಗಳು ಸಿಗಲಿಲ್ಲವೆಂದು, ನಿಯೋ ಲಿಬರಲ್ ಅಥವಾ ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿ ನೀತಿ ಜಾರಿಗೆ ಬಂದಿದೆ. ಮಾರುಕಟ್ಟೆ ಅಭಿವೃದ್ಧಿಯಿಂದ ಜನ ಸಾಮಾನ್ಯರ ಬದುಕು ಉತ್ತಮವಾಗಿದಯೇ ಎನ್ನುವ ಪ್ರಶ್ನೆಗೆ ಸಕರಾತ್ಮಕ ಉತ್ತರ ಸಿಗುವುದಿಲ್ಲ. ಪ್ರಪಂಚದ ಬಡವರಲ್ಲಿ ಶೇ.೨೦ರಷ್ಟು ಬಡವರು ಭಾರತದಲ್ಲಿದ್ದಾರೆ. ನಮ್ಮಿಂದ ಹೆಚ್ಚು ಜನಸಂಖ್ಯೆ ಇರುವ ಚೈನಾದಲ್ಲಿ ಪ್ರಪಂಚದ ಬಡವರ ಶೇ.೩ರಷ್ಟು ಮಾತ್ರ ಇದ್ದಾರೆ. ಸರಕಾರ ಬಡತನ ರೇಖೆಯನ್ನು ಬದಿಗಿಟ್ಟು ಅಂತರಾಷ್ಟ್ರೀಯ ಬಡತನ ರೇಖೆಯಿಂದ (೧.೨೫ ಡಾಲರ್) ಮಾಪನ ಮಾಡಿದರೆ ಶೇ.೪೦ ಜನ ಬಡತನ ರೇಖೆಗಿನ ಆದಾಯ ಹೊಂದಿದ್ದಾರೆ. ಇದೇ ಮಾನದಂಡವನ್ನು ಎರಡು ಡಾಲರ್‌ಗೆ ಏರಿಸಿದರೆ ಶೇ.೭೭ ಜನ ಬಡತನ ರೇಖೆಗಿಂತ ಕೆಳಗಿದ್ದಾರೆ. ವರ್ಲ್ಡ್ ವೆಲ್ತ್ ರಿಪೋರ್ಟ್ (೨೦೧೪) ಪ್ರಕಾರ ೨೦೦೦ದಲ್ಲಿ ಭಾರತದ ಶೇ.೧ರಷ್ಟು ಶ್ರೀಮಂತರು ದೇಶದ ಸಂಪತ್ತಿನ ಶೇ.೩೭ರಷ್ಟನ್ನು ಹೊಂದಿದ್ದರು. ೨೦೧೪ರಲ್ಲಿ ಇವರು ಹೊಂದಿರುವ ಸಂಪತ್ತಿನ ಪ್ರಮಾಣ ಶೇ.೪೯ಕ್ಕೆ ಏರಿದೆ. ಶೇ.೧೦ರಷ್ಟಿರುವ ಅನುಕೂಲಸ್ಥರು ೨೦೦೦ದಲ್ಲಿ ದೇಶದ ಸಂಪತ್ತಿನ ಶೇ.೬೦ನ್ನು ಹೊಂದ್ದಿದ್ದರು. ೨೦೧೪ರಲ್ಲಿ ಇವರು ಹೊಂದಿರುವ ಸಂಪತ್ತಿನ ಪ್ರಮಾಣ ಶೇ.೭೪ಕ್ಕೆ ಏರಿದೆ. ಉಳಿದ ಶೇ.೯೦ ಜನರು ಶೇ.೨೫ ಸಂಪತ್ತನ್ನು ಹಂಚಿಕೊಳ್ಳುತ್ತಿದ್ದಾರೆ.

ಇಂದಿನ ಅಭಿವೃದ್ಧಿಯನ್ನು ಜೀರ್ಣಿಸಿಕೊಳ್ಳಬೇಕಾದರೆ ಒಂದೋ ಭೂಮಿ ಬೇಕು ಇಲ್ಲವೇ ಬಂಡವಾಳ ಬೇಕು ಇಲ್ಲವೇ ಆರೋಗ್ಯ ಶಿಕ್ಷಣಗಳು ಬೇಕು. ಈ ಮೂರರಲ್ಲಿ ಒಂದೂ ಇಲ್ಲದವರು ಬಡತನ ನಿವಾರಣ ಕಾರ್ಯಕ್ರಮಗಳನ್ನು ನಂಬಿ ಬದುಕಬೇಕು ಇಲ್ಲವೇ ಭಿಕ್ಷುಕರಾಗಬೇಕು ಇಲ್ಲವೇ ಆತ್ಮಹತ್ಯೆ ಮಾಡಿಕೊಳ್ಳಬೇಕು. ನಮ್ಮಲ್ಲಿ ಮೂರನೇ ಒಂದರಷ್ಟು ಜನರಿಗೆ ಭೂಮಿಯೇ ಇಲ್ಲ. ಭೂಮಿ ಇರುವ ಮೂರನೇ ಎರಡರಷ್ಟು ಕೃಷಿಕರಲ್ಲಿ ಮುಕ್ಕಾಲು ಭಾಗ ಸಣ್ಣ ಮತ್ತು ಅತೀ ಸಣ್ಣ ಕೃಷಿಕರು. ಬಹುತೇಕ ಸಣ್ಣ ಮತ್ತು ಅತೀ ಸಣ್ಣ ಕೃಷಿಕರು ಒಂದರಿಂದ ಒಂದೂವರೆ ಎಕರೆ ಭೂಮಿ ಹೊಂದಿದ್ದಾರೆ. ನೀರಾವರಿ ಇರುವ ಪ್ರದೇಶದಲ್ಲಿ ಇಂತಹ ಸಣ್ಣ ಭೂಮಿಯಲ್ಲೂ ಸಣ್ಣ ಕುಟುಂಬಗಳು ಉಸಿರಾಡಬಹುದು. ಆದರೆ ನಮ್ಮ ರಾಜ್ಯದ ಮೂರನೇ ಎರಡರಷ್ಟು ಭಾಗದಲ್ಲಿ ನೀರಾವರಿ ಇಲ್ಲ. ನೀರಾವರಿ ಇಲ್ಲದ ಭಾಗದ ಸಣ್ಣ ಮತ್ತು ಅತೀ ಸಣ್ಣ ರೈತರಿಗೂ ಭೂರಹಿತರಿಗೂ ವಿಶೇಷ ವ್ಯತ್ಯಾಸವಿಲ್ಲ. ಭೂರಹಿತರು ಮೂರು ಹೊತ್ತಿನ ಊಟಕ್ಕಾಗಿ ಮತ್ತೊಬ್ಬರಲ್ಲಿ ವರ್ಷಪೂರ್ತಿ ದುಡಿದರೆ ಸಣ್ಣ ಮತ್ತು ಅತೀ ಸಣ್ಣ ರೈತರು ವರ್ಷದ ಬಹುಭಾಗ ದುಡಿಯಬೇಕು. ಇದು ನಮ್ಮ ರಾಜ್ಯದ ಕತೆ ಮಾತ್ರವಲ್ಲ ದೇಶದ ಎಲ್ಲ ರಾಜ್ಯಗಳ ಕತೆಯೂ ಹೆಚ್ಚುಕಡಿಮೆ ಇದೇ ಇದೆ.

ಸರಕಾರಿ ಸಾಲದ ಅಲ್ಪಭಾಗವನ್ನು (ಶೇ.೪೦ನ್ನು) ಶೇ.೯೦ರಷ್ಟು ಜನರು ಹಂಚಿಕೊಂಡರೆ ಅಲ್ಪಸಂಖ್ಯೆಯಲ್ಲಿರುವ (ಅಂದಾಜು ಶೇ.೧೦ರಷ್ಟಿರುವ) ದೊಡ್ಡ ಕೃಷಿಕರು, ದೊಡ್ಡ ಉದ್ದಿಮೆಗಳು, ದೊಡ್ಡ ವ್ಯಾಪಾರಿಗಳು ಸರಕಾರಿ ಸಾಲದ ಬಹುಭಾಗವನ್ನು (ಶೇ.೬೦ನ್ನು) ಅನುಭವಿಸುತ್ತಿದ್ದಾರೆ. ಪಡೆದ ಸಾಲವನ್ನು ಬಡ್ಡಿ ಸಮೇತ ಮರುಸಂದಾಯ

ಮಾಡಿದರೆ ದೊಡ್ಡ ಪ್ರಮಾಣದ ಸಾಲ ದೊಡ್ಡ ಉದ್ದಿಮೆ, ವ್ಯಾಪಾರಿ, ಕೃಷಿಕರಿಗೆ ಹೋಗುವುದನ್ನು ನಕರಾತ್ಮವಾಗಿ ನೋಡುವ ಅಗತ್ಯವಿಲ್ಲ. ಆದರೆ ವಾಸ್ತವ ಆ ರೀತಿ ಇಲ್ಲ. ಆರ್‌ಬಿಐ ಮೂಲಗಳ ಪ್ರಕಾರ ೨೦೧೫ನೇ ಹಣಕಾಸು ವರ್ಷದ ಕೊನೆ ವೇಳೆಗೆ ವಾಣಿಜ್ಯ ಬ್ಯಾಂಕ್‌ಗಳು ನೀಡಿದ ಒಟ್ಟು ಸಾಲ ರೂ.೭೬.೬ ಲಕ್ಷ ಕೋಟಿಗಳು. ಇದರಲ್ಲಿ ರೂ.೩.೨೨ ಲಕ್ಷ ಕೋಟಿಗಳಷ್ಟು ಕೆಟ್ಟ ಸಾಲ ಅಂದರೆ ಮರುಸಂದಾಯ ಮಾಡದಿರುವ ಸಾಲ. ಇತ್ತೀಚಿನ ವರ್ಷಗಳಲ್ಲಿ ಇದನ್ನು non-performing assets ಎನ್ನುವ ಗೌರವಾನ್ವಿತ ಅಥವಾ ವಾಸ್ತವವನ್ನು ಮರೆಮಾಚುವ ಹೆಸರಿನಿಂದ ಗುರುತಿಸುತ್ತಾರೆ. ಖಾಸಗಿ ಬ್ಯಾಂಕ್‌ಗಳಿಗೆ ಹೋಲಿಸಿದರೆ ಸರಕಾರಿ ಬ್ಯಾಂಕ್‌ಗಳು ಅತೀ ಹೆಚ್ಚು (ಶೇ.೭೪ರಷ್ಟು) ಸಾಲ ನೀಡಿವೆ. ಸಹಜವಾಗಿಯೇ ಸರಕಾರಿ ಬ್ಯಾಂಕ್‌ಗಳಲ್ಲೇ ಅತೀ ಹೆಚ್ಚು (ಶೇ.೮೬ರಷ್ಟು) ಕೆಟ್ಟ ಸಾಲ ಕೂಡ ಇದೆ.

ಬ್ಯಾಂಕ್ ಸಾಲ ಮರುಸಂದಾಯ ಮಾಡದವರ ಪಟ್ಟಿ ನೋಡಿದರೆ ಎಲ್ಲರಿಗೂ ಆಶ್ಚರ್ಯವಾಗಬಹುದು. ಮೂರು ಹೊತ್ತಿನ ಊಟಕ್ಕೆ ಪರದಾಡುವ ಬಡಜನರೇ ಬ್ಯಾಂಕ್ ಸಾಲ ಮರುಸಂದಾಯ ಮಾಡದಿರಬೇಕೆನ್ನುವುದು ನಮಗೆಲ್ಲ ಬರುವ ಮೊದಲ ಆಲೋಚನೆ. ಅದರೆ ವಾಸ್ತವ ಬೇರೆಯೇ ಇದೆ. ಕೆಲವು ಸಾವಿರ ಸಾಲ ಪಡೆದವರು ಬಾಕಿ ಇಟ್ಟವರಲ್ಲಿ ದೊಡ್ಡ ಸಂಖ್ಯೆಯಲ್ಲಿ ಇಲ್ಲ. ಅದರ ಬದಲು ಹಲವು ಕೋಟಿ ಸಾಲ ಪಡೆದ ಅನುಕೂಲಸ್ಥರೇ ಸಾಲ ಬಾಕಿ ಇಟ್ಟವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆರ್‌ಬಿಐ ಮೂಲಗಳ ಪ್ರಕಾರ ಸಾಲ ಬಾಕಿ ಇಟ್ಟವರಲ್ಲಿ ರೂ.೫ ಕೋಟಿಗಿಂತ ಹೆಚ್ಚು ಸಾಲ ಪಡೆದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಮಾರ್ಚ್ ೨೦೧೫ರ ವೇಳೆಗೆ ಒಟ್ಟು ಸಾಲ ಬಾಕಿ ಇಟ್ಟವರಲ್ಲಿ ೫ ಕೋಟಿಗಿಂತ ಹೆಚ್ಚು ಸಾಲ ಬಾಕಿ ಇಟ್ಟವರು ಶೇ.೭೪ರಷ್ಟಿದ್ದರೆ ಸೆಪ್ಟಂಬರ್ ೨೦೧೫ರ ವೇಳೆಗೆ ಇವರ ಸಂಖ್ಯೆ ಶೇ.೮೭ಕ್ಕೆ ಏರಿದೆ. ಬಡವ ಸಾಲ ಬಾಕಿ ಇಟ್ಟರೆ ಕೋರ್ಟ್ ಕಚೇರಿಯೆಂದು ಹೆದರಿಸಿ ಬೆದರಿಸಿ ಸಾಲ ವಸೂಲು ಮಾಡುತ್ತಾರೆ. ಆದರೆ ಕೋಟ್ಯಧೀಶರು ಸಾಲ ಬಾಕಿ ಇಟ್ಟಾಗ ಅವರನ್ನು ಬಡವರ ರೀತಿಯಲ್ಲೇ ಹೆದರಿಸಿ ಬೆದರಿಸಿ ವಸೂಲಾತಿ ನಡೆಯುತ್ತಿಲ್ಲ. ಅದರ ಬದಲು ಸಾಲ ಬಾಕಿ ಇಟ್ಟವರಿಗೆ ಇನ್ನಷ್ಟು ಹೆಚ್ಚಿನ ಸಾಲ ನೀಡಿ ಅವರ ಉದ್ದಿಮೆಗಳು ಲಾಭ ಮಾಡಿದಾಗ ಸಾಲ ಸಂದಾಯ ಮಾಡಲು ಅವಕಾಶ ನೀಡಲಾಗುತ್ತಿದೆ. ಈ ರೀತಿ ಸಾಲ ಪುನರ್‌ರಚನೆಗೆ ನೀಡಿದ ಹೆಚ್ಚಿನ ಸಾಲದ ಮೊತ್ತ ಮಾರ್ಚ್ ೨೦೧೫ರ ವೇಳೆಗೆ ರೂ.೫.೨೪ ಲಕ್ಷ ಕೋಟಿ. ಸಾಲ ಪುನರ್‌ರಚನೆಯ ಮೊತ್ತವನ್ನು ಕೆಟ್ಟ ಸಾಲದ ಮೊತ್ತ ರೂ.೩.೨೨ ಕೋಟಿಗೆ ಸೇರಿಸಿದರೆ ಒಟ್ಟು ಕೆಟ್ಟ ಸಾಲದ ಮೊತ್ತ ರೂ.೮.೪೭ ಲಕ್ಷ ಕೋಟಿಯಾಗುತ್ತದೆ. ಅಥವಾ ಬ್ಯಾಂಕ್ ಸಾಲದ ಶೇ.೧೧ರಷ್ಟು ಕೆಟ್ಟ ಸಾಲವೇ ಇದೆ.

ನಿಯೋ ಲಿಬರಲ್ ಅಭಿವೃದ್ದಿ ಪಾಲಿಸಿಗಳನ್ನು ಜಾರಿಗೆ ತರುವುದರಿಂದ ತೆರಿಗೆ ಸಂಗ್ರಹ ಹೆಚ್ಚಾಗುತ್ತದೆ. ಹೆಚ್ಚಾದ ತೆರಿಗೆ ಸಂಗ್ರಹವನ್ನು ಶಿಕ್ಷಣ, ಆರೋಗ್ಯಗಳ ಮೇಲೆ ಖರ್ಚು ಮಾಡಲಾಗುವುದು ಎನ್ನುವ ಗ್ರಹಿಕೆಯಿಂದ ತೊಂಬತ್ತರ ಬರುವ ಎಲ್ಲ ಸರಕಾರಗಳು ಸತತ ಖಾಸಗೀಕರಣ, ಉದಾರೀಕರಣ ಪಾಲಿಸಿಗಳನ್ನು ಜಾರಿಗೆ ತರುತ್ತಿವೆ. ಎಲ್ಲರಿಗೂ ಸರಕಾರವೇ ಶಿಕ್ಷಣ ಕೊಡಲು ಸಾಧ್ಯವಿಲ್ಲವೆಂದು ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಗಣನೀಯವಾಗಿ ವೃದ್ಧಿಯಾಗಿದೆ. ಇದರಿಂದ ಎಲ್ಲರಿಗೂ ಶಿಕ್ಷಣ ದೊರಕಿದೆಯೇ ಎಂದು ನೋಡಿದರೆ ಅಂಕಿಅಂಶಗಳು ಬೇರೆಯದೇ ಚಿತ್ರಣ ನೀಡುತ್ತಿವೆ. ೨೦೧೪ರ ವೇಳೆಗೆ ಉನ್ನತ ಶಿಕ್ಷಣಯೋಗ್ಯ ವಯಸ್ಸಿನ (೧೮–೨೩ ವಯಸ್ಸಿನ) ಪ್ರತಿ ನೂರು ವಿದ್ಯಾರ್ಥಿಗಳಲ್ಲಿ ಕೇವಲ ೨೦ ವಿದ್ಯಾರ್ಥಿಗಳು ಮಾತ್ರ ಪ್ರವೇಶ ಪಡೆದಿದ್ದಾರೆ. ಎಲ್ಲ ಸಮುದಾಯಗಳಿಂದ ಇದೇ ಪ್ರಮಾಣದಲ್ಲಿ ಪ್ರವೇಶ ಪಡೆದಿಲ್ಲ. ದಲಿತರ ಶೇ.೧೨, ಬುಡಕಟ್ಟುಗಳ ಶೇ.೫, ಮುಸ್ಲಿಮರ ಶೇ.೭ ಮುಸ್ಲಿಮೇತ ಅಲ್ಪಸಂಖ್ಯಾತರ ಶೇ.೩ ಹಿಂದುಳಿದ ಜಾತಿಗಳ ಶೇ.೩೦ ಮತ್ತು ಮೇಲ್ಜಾತಿಗಳ ಶೇ.೪೩ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆದಿದ್ದಾರೆ. ಸರಕಾರಿ ಶಿಕ್ಷಣ ಸಂಸ್ಥೆಗಳು ಒಂದೆರಡು ಸಾವಿರ ಫೀಸು ಚಾರ್ಜ್ ಮಾಡುವ ಕೋರ್ಸ್‌ಗಳಿಗೆ ಖಾಸಗಿ ಸಂಸ್ಥೆಗಳು ಒಂದೆರಡು ಲಕ್ಷ ರೂಗಳ ಫೀಸ್ ಚಾರ್ಜ್ ಮಾಡುತ್ತಿವೆ. ಇದರಿಂದ ಖಾಸಗಿ ಉನ್ನತ ಶಿಕ್ಷಣ ಸಂಸ್ಥೆಗಳ ಅರ್ಧಕ್ಕಿಂತಲೂ ಹೆಚ್ಚಿನ ಸೀಟುಗಳು ಶೇಕಡ ಹತ್ತರಿಂದ ಇಪ್ಪತ್ತರಷ್ಟಿರುವ ಶ್ರೀಮಂತ ಮತ್ತು ಮೇಲ್‌ಮಧ್ಯಮ ವರ್ಗದ ವಿದ್ಯಾರ್ಥಿಗಳ ಪಾಲಾದರೆ ಅತ್ಯಲ್ಪ ಪ್ರಮಾಣದ (ಶೇ.೪ರಷ್ಟು) ಸೀಟುಗಳು ಬಡ ವಿದ್ಯಾರ್ಥಿಗಳ ಪಾಲಾಗಿದೆ.

ಪಾರ್ಲಿಮೆಂಟರಿ ಸಮಿತಿ ವರದಿ ಪ್ರಕಾರ ವೈದ್ಯಕೀಯ ನೆರವಿಲ್ಲದ ಕಾರಣ ಪ್ರತಿ ವರ್ಷ ಭಾರತದಲ್ಲಿ

ಕನಿಷ್ಠ ಒಂದು ಮಿಲಿಯ ಜನರು ಸಾಯುತ್ತಿದ್ದಾರೆ. ಅರ್ಧಕ್ಕಿಂತಲೂ ಹೆಚ್ಚಿನ ( ೭೦೦ ಮಿಲಿಯ) ಜನರಿಗೆ ತಜ್ಞ ವೈದ್ಯರ ಸೇವೆ ಲಭ್ಯವಿಲ್ಲ. ಅಲ್ಪಸಂಖ್ಯೆಯಲ್ಲಿರುವ (ಶೇ.೮೦ರಷ್ಟು) ಸ್ಪೆಷಲಿಸ್ಟ್‌ಗಳು ನಗರ ಪ್ರದೇಶದ ಅನುಕೂಲಸ್ಥರ ಸೇವೆಗೆ ಟೊಂಕಕಟ್ಟಿ ನಿಂತಿದ್ದಾರೆ. ನಮ್ಮ ನೆರೆಹೊರೆಯ ಸಣ್ಣಪುಟ್ಟ ದೇಶಗಳಿಗೆ ಹೋಲಿಸಿದರೂ ನಮ್ಮ ಆರೋಗ್ಯ ಕ್ಷೇತ್ರದ ಸ್ಥಿತಿ ತುಂಬಾ ಕಳಪೆ ಇದೆ. ಹುಟ್ಟುವ ಪ್ರತಿ ಸಾವಿರ ಮಕ್ಕಳಲ್ಲಿ ಐದು ವರ್ಷದೊಳಗೆ ಸಾಯುವ ಮಕ್ಕಳ ಪ್ರಮಾಣ ನೇಪಾಳದಲ್ಲಿ ೫೦, ಭೂತಾನ್‌ಲ್ಲಿ ೫೪, ಬಾಂಗ್ಲಾದೇಶದಲ್ಲಿ ೪೬, ಚೈನಾದಲ್ಲಿ ೧೫, ಶ್ರೀಲಂಕಾದಲ್ಲಿ ೧೨ ಇದ್ದರೆ ನಮ್ಮಲ್ಲಿ ೬೧ ಇದೆ. ಬಹುತೇಕ ಮಕ್ಕಳು ಡೈರಿಯಾ, ನ್ಯೂಮೋನಿಯಾ ಇತ್ಯಾದಿ ಸಣ್ಣಪುಟ್ಟ ರೋಗಗಳಿಂದ ಸಾಯುತ್ತವೆ.  ಇದೇ ರೀತಿಯಲ್ಲಿ ಹೆರಿಗೆ ಸಂದರ್ಭದಲ್ಲಿ ಸಾಯುವ ತಾಯಂದಿರ ಪ್ರಮಾಣ ಕೂಡ ಭಾರತದಲ್ಲಿ ಹೆಚ್ಚಿದೆ. ಆರೊಗ್ಯ ಕ್ಷೇತ್ರದ ಮೇಲೆ ಸರಕಾರ ಅತ್ಯಲ್ಪ ಮೊತ್ತ ವಿನಿಯೋಜಿಸುವುದರಿಂದ ಮೂರು ಹೊತ್ತಿನ ಊಟಕ್ಕೆ ಪರದಾಡುವವರು ಕೂಡ ತಮ್ಮ ಆದಾಯದ ಅರ್ಧಕ್ಕಿಂತಲೂ ಹೆಚ್ಚಿನ ಮೊತ್ತವನ್ನು ಆರೋಗ್ಯಕ್ಕಾಗಿ ಕರ್ಚು ಮಾಡಬೇಕಾಗಿದೆ.  ಅನಾರೋಗ್ಯ ಹಾಗು ಅದಕ್ಕೆ ಮಾಡುವ ದುಬಾರಿ ಆಸ್ಪತ್ರೆ ವೆಚ್ಚದಿಂದ ಪ್ರತಿ ವರ್ಷ ೬೩ ಮಿಲಿಯ ಜನರು ಬಡವರಾಗುತ್ತಿದ್ದಾರೆ (ಭಾರತ ಸರಕಾರ, ೨೦೧೬).

ಒಟ್ಟಾರೆಯಾಗಿ ಹೇಳುವುದಾದರೆ ನಮ್ಮ ಸಮಾಜವನ್ನೊಂದು ಪಿರಮಿಡ್ ಅಕೃತಿಯಲ್ಲಿ ರೂಪಿಸುವಲ್ಲಿ ನಿಯೋ ಲಿಬರಲ್ ಆರ್ಥಿಕ ನೀತಿಗಳು ಯಶಸ್ವಿಯಾಗಿವೆ. ಪಿರಮಿಡ್ ತುದಿಯಲ್ಲೊಂದು ಶೇ.೫ರಷ್ಟು ಜನರಿದ್ದಾರೆ. ಇವರಲ್ಲಿ ಅಧಿಕಾರ, ಆದಾಯ ಹಾಗು ಸ್ಥಾನಮಾನಗಳು ಹೆಚ್ಚಿನ ಪ್ರಮಾಣದಲ್ಲಿ ಕ್ರೋಢೀಕರಣಗೊಂಡಿವೆ. ಪಿರಮಿಡ್ ಮಧ್ಯಭಾಗದಲ್ಲಿ ಶೇ.೨೦–೨೫ರಷ್ಟು ಜನರಿದ್ದಾರೆ. ಇವರಲ್ಲಿ ಮೇಲಿನವರಿಗಿಂತ ಕಡಿಮೆ ಆದಾಯ, ಅಧಿಕಾರ, ಸ್ಥಾನಮಾನಗಳಿವೆ. ನಮ್ಮ ಸಮಾಜದ ಬಹುತೇಕರು (ಶೇ.೭೦ರಷ್ಟು) ಪಿರಮಿಡ್ ಬುಡದಲ್ಲಿದ್ದಾರೆ. ಇವರಲ್ಲಿ ಏನೇನೂ ಆದಾಯ, ಅಧಿಕಾರ, ಸ್ಥಾನಮಾನಗಳಿಲ್ಲ. ಎಲ್ಲ ಸಮುದಾಯಗಳಿಂದಲೂ ಪಿರಮಿಡ್ ಬುಡದಲ್ಲಿರುವವರಿದ್ದಾರೆ. ಆದರೆ ದಲಿತ, ಬುಡಕಟ್ಟುಗಳ ಹೆಚ್ಚಿನ ಜನರು ಪಿರಮಿಡ್‌ನ್ ಬುಡದಲ್ಲಿದ್ದಾರೆ. ದಲಿತಬುಡಕಟ್ಟುಗಳ ನಂತರ ಹಿಂದುಳಿದ ಜಾತಿ ಮತ್ತು ಅಲ್ಪಸಂಖ್ಯಾತರು ಕೂಡ ಪಿರಮಿಡ್ ಬುಡದಲ್ಲಿ ಹೆಚ್ಚಿದ್ದಾರೆ. ಫೋರ್ಬ್ಸ್ ಪತ್ರಿಕೆ ಪ್ರತಿವರ್ಷ ಪ್ರಪಂಚದ ೫೦೦ ಶ್ರೀಮಂತರ ಪಟ್ಟಿ ಬಿಡುಗಡೆ ಮಾಡುತ್ತಿದೆ. ೨೦೧೫ರ ಫೋರ್ಬ್ಸ್ ಪತ್ರಿಕೆಯ ವರದಿ ಪ್ರಕಾರ ಪ್ರಪಂಚದ ೫೦೦ ಶ್ರೀಮಂತರಲ್ಲಿ ಭಾರತದ ೫೫ ಮಂದಿ ಶ್ರೀಮಂತರಿದ್ದಾರೆ. ಈ ೫೫ರಲ್ಲಿ ಹತ್ತು ಮಂದಿ ಶ್ರೀಮಂತರ ಆದಾಯ ಉಳಿದ ೪೫ ಮಂದಿಯ ಒಟ್ಟು ಆದಾಯವನ್ನು ಮೀರಿಸುವಷ್ಟಿದೆ. ಇವರ್‍ಯಾರೆಂದು ಆರುಂಧತಿ ರಾಯ್ ಆಂಬೇಡ್ಕರ್ ಅವರ ಎನಿಹಿಲೇಶನ್ ಆಫ್ ಕಾಸ್ಟ್ ಪುಸ್ತಕಕ್ಕೆ ಬರೆದ ಪ್ರಸ್ತಾವನೆಯಲ್ಲಿ ಗುರುತಿಸಿದ್ದಾರೆ. ಭಾರತದ ಅತ್ಯಂತ ಶ್ರೀಮಂತ ಹತ್ತು ಮಂದಿಯಲ್ಲಿ ಏಳು ಮಂದಿ ಒಂದೇ ಜಾತಿಯಿಂದ – ಬನಿಯಾ ಸಮುದಾಯದಿಂದ ಬಂದಿದ್ದಾರೆ. ಉಳಿದ ೪೫ ಮಂದಿ ಶ್ರೀಮಂತರಲ್ಲಿ ೧೯ ಮಂದಿ ಇದೇ ಬನಿಯಾ ಸಮುದಾಯದಿಂದ ಬಂದಿದ್ದಾರೆ. ಉಳಿದ ಶ್ರೀಮಂತರು ಪಾರ್ಸಿ, ಬೋಹ್ರಾ, ಖತ್ರೀಸ್ ಮುಂತಾದ ವ್ಯಾಪಾರಿ ಸಮುದಾಯದಿಂದ ಬಂದಿದ್ದಾರೆ. ಬ್ರಾಹ್ಮಣರಿಂದ ಕೆಲವು ಮತ್ತು ಹಿಂದುಳಿದ ಜಾತಿಯಿಂದ ಒಬ್ಬರು ಶ್ರೀಮಂತರ ಪಟ್ಟಿಯಲ್ಲಿದ್ದಾರೆ. ದಲಿತ, ಬುಡಕಟ್ಟುಗಳಿಂದ ಒಬ್ಬರೂ ಇಲ್ಲ. ಇದು ಪಿರಮಿಡ್‌ನ ಮೇಲಿರುವ ಜಾತಿಗಳ ಒಂದು ಸಣ್ಣ ಚಿತ್ರಣ.

ಇನ್ನು ಪಿರಮಿಡ್ ಬುಡದಲ್ಲಿರುವವರ ಬಗ್ಗೆ ತಿಳಿದುಕೊಳ್ಳುವ. ಕೆ.ಪಿ.ಕಣ್ಣನ್ ತಮ್ಮ ಇಂಟರೋಗೆಟಿಂಗ್ ಇನ್‌ಕ್ಲುಸಿವ್ ಗ್ರೋಥ್ – ಪವರ್ಟಿ ಆ್ಯಂಡ್ ಇನ್ವಿಕ್ವಾಲಿಟಿ ಇನ್ ಇಂಡಿಯಾ (೨೦೧೪) ಪುಸ್ತಕದಲ್ಲಿ ಜಾತಿ ಮತ್ತು ಬಡತನದ ಸಂಬಂಧವನ್ನು ಗುರುತಿಸಿದ್ದಾರೆ.  ಅವರ ಪುಸ್ತಕದಲ್ಲಿರುವ ಅಂಕಿಅಂಶಗಳ ಪ್ರಕಾರ ನಮ್ಮಲ್ಲಿ ಸುಮಾರು ೨೪ ಕೋಟಿ ಅತ್ಯಂತ ಬಡವರಿದ್ದಾರೆ.  ಅತ್ಯಂತ ಬಡವರೆಂದರೆ ಬಡತನ ರೇಖೆಯಷ್ಟು  ಅಥವಾ ಅದಕ್ಕಿಂತಲೂ ಕಡಿಮೆ ಆದಾಯ ಇರುವವರು. ಅಂದರೆ ಮೂರು ಹೊತ್ತಿನ ಊಟಕ್ಕೆ, ವಸತಿಗೆ ಪರದಾಡುವವರು. ಅತ್ಯಂತ ಬಡವರಲ್ಲಿ ಅರ್ಧದಷ್ಟು (ಶೇ.೪೧) ದಲಿತಬುಡಕಟ್ಟು ಜನರಿದ್ದರೆ ಮೂರನೇ ಒಂದು ಭಾಗದಷ್ಟು ಹಿಂದುಳಿದ ಜಾತಿ ಜನರಿದ್ದಾರೆ. ಶೇ.೧೬ರಷ್ಟು ಮುಸ್ಲಿಮರು ಕೂಡ ಅತ್ಯಂತ ಬಡವರು. ಮೇಲ್ಜಾತಿಗಳಲ್ಲಿ ಅತ್ಯಲ್ಪ ಸಂಖ್ಯೆಯ (ಶೇ.೯ರಷ್ಟು) ಜನರು ಅತ್ಯಂತ ಬಡವರಿದ್ದಾರೆ. ಇದೇ ಸಂದರ್ಭದಲ್ಲಿ ನಮ್ಮಲ್ಲಿ ಸುಮಾರು ೨೧ ಕೋಟಿ ಮಧ್ಯಮ ವರ್ಗಕ್ಕೆ ಸೇರಿದವರಿದ್ದಾರೆ. ಇವರು ಬಡತನರೇಖೆಗಿಂತ ಕೆಲವು ಪಟ್ಟು ಹೆಚ್ಚಿನ ಆದಾಯವುಳ್ಳವರು.

ದಲಿತ ಬಡಕುಟ್ಟುಗಳ ಶೇ.೧೬ರಷ್ಟು, ಮುಸ್ಲಿಮರ ಶೇ.೯ರಷ್ಟು ಮತ್ತು ಹಿಂದುಳಿದ ಜಾತಿಗಳ ಶೇ.೩೩ರಷ್ಟು ಮಂದಿ ಮಧ್ಯಮವರ್ಗದ ಆದಾಯ ಹೊಂದಿದ್ದಾರೆ. ಈ ಮೂರು ಗುಂಪುಗಳಿಗೆ ಹೋಲಿಸಿದರೆ ಅತ್ಯಂತ ಹೆಚ್ಚು ಸಂಖ್ಯೆಯ (ಶೇ.೪೨) ಮೇಲ್ಜಾತಿ ಜನರು ಮಧ್ಯಮವರ್ಗದ ಆದಾಯ ಹೊಂದಿದ್ದಾರೆ.  ಇದೇ ರೀತಿಯಲ್ಲಿ ನಮ್ಮಲ್ಲಿ ಸುಮಾರು ೪ ಕೋಟಿ ಶ್ರೀಮಂತರಿದ್ದಾರೆ. ಇವರು ಬಡತನ ರೇಖೆಗಿಂತ ಹಲವುಪಟ್ಟು ಹೆಚ್ಚು ಆದಾಯ ಹೊಂದಿರುವವರು. ಅತ್ಯಂತ ಬಡವರಲ್ಲಿ ದಲಿತಬುಡಕಟ್ಟುಗಳು ಹೇಗೆ ಹೆಚ್ಚಿದ್ದಾರೋ ಅದೇ ರೀತಿಯಲ್ಲಿ ೪ ಕೋಟಿ ಶ್ರೀಮಂತರಲ್ಲಿ ಅರ್ಧಕ್ಕಿಂತಲೂ ಹೆಚ್ಚು (ಶೇ.೬೫) ಮೇಲ್ಜಾತಿ ಜನರಿದ್ದಾರೆ. ದಲಿತಬುಡಕಟ್ಟು ಮತ್ತು ಮುಸ್ಲಿಮರಲ್ಲಿ ಅತ್ಯಲ್ಪ ಜನರು (ಶೇ.೭) ಶ್ರೀಮಂತರಿದ್ದಾರೆ. ಇವರಿಗೆ ಹೋಲಿಸಿದರೆ  ಹಿಂದುಳಿದ ಜಾತಿಗಳು ವಾಸಿ. ನಾಲ್ಕು ಕೋಟಿ ಶ್ರೀಮಂತರಲ್ಲಿ ಹಿಂದುಳಿದ ಜಾತಿಗಳ ಶೇ.೨೧ ಜನರಿದ್ದಾರೆ.

ಮಾರುಕಟ್ಟೆ ಅಭಿವೃದ್ಧಿಯಿಂದ ಜನಸಾಮಾನ್ಯರಿಗೆ ಅನುಕೂಲಗಳಾಗುವ ಬದಲು ಅನಾನುಕೂಲಗಳೇ ಹೆಚ್ಚಾಗಿರುವುದನ್ನು ನೋಡಿ ಇದು ಮಾರುಕಟ್ಟೆಯದ್ದೇ ಅಥವಾ ನಿಯೋ ಲಿಬರಲ್ ಅಭಿವೃದ್ಧಿ ಪಾಲಿಸಿಗಳ ಸಮಸ್ಯೆಯೇ ಇರಬೇಕೆಂದು ಗ್ರಹಿಸುವ ಸಾಧ್ಯತೆಗಳಿವೆ. ಖಂಡಿತವಾಗಿಯೂ ಈ ಪಾಲಿಸಿಗಳ ಗರ್ಭದಲ್ಲೇ ಅಸಮಾನತೆಯನ್ನು ಸೃಷ್ಟಿಸುವ ಅಂಶಗಳಿವೆ. ಭೂಮಿ, ಹಣಕಾಸು, ಪ್ರಾಕೃತಿಕ ಸಂಪನ್ಮೂಲ, ಶಿಕ್ಷಣ, ಆರೋಗ್ಯಗಳನ್ನು ಕೆಲವರಲ್ಲೇ ಕ್ರೋಢೀಕರಣಗೊಳಿಸುವ ನಿಯೋ ಲಿಬರಲ್ ಪಾಲಿಸಿಗಳ ಪ್ರಭಾವವನ್ನು ಹಿಂದಿನ ಪುಟಗಳಲ್ಲಿ ನೋಡಿದ್ದೇವೆ. ಇವುಗಳೊಂದಿಗೆ ಈ ಪಾಲಿಸಿಗಳು ಅನುಷ್ಠಾನಗೊಳ್ಳುವ ರಾಜಕೀಯ, ಸಾಮಾಜಿಕ ಹಾಗು ಸಾಂಸ್ಕೃತಿಕ ಪರಿಸರಗಳ ಪಾತ್ರವೂ ಇದೆ. ಮಾನವ ಬದುಕಿ ಉಳಿಯ ಬೇಕಾದರೆ ಸರಕುಸೇವೆಗಳು ಬೇಕು. ಈ ಸರಕುಸೇವೆಗಳನ್ನು ಹೇಗೆ ಉತ್ಪಾದಿಸುವುದು ಮತ್ತು ಉತ್ಪಾದಿಸಿದ ಸರಕುಸೇವೆಗಳನ್ನು ಸಮಾಜದ ವಿವಿಧ ಗುಂಪುಗಳ ನಡುವೆ ಹೇಗೆ ಹಂಚುವುದು ಇತ್ಯಾದಿ ಪ್ರಶ್ನೆಗಳು ರಾಜಕೀಯದೊಂದಿಗೆ ನೇರ ಸಂಬಂಧ ಹೊಂದಿದೆ. ಇಂತಹ ರಾಜಕೀಯವನ್ನು ಕಟ್ಟಿಕೊಳ್ಳುವ ಬಗೆ ಉತ್ಪಾದಿತ ಸಂಪತ್ತಿನಲ್ಲಿ ವಿವಿಧ ಗುಂಪುಗಳ (ಭೂಮಾಲಕರು, ಹಣಕಾಸುಗಳ ಒಡೆಯರು, ಪ್ರಾಕೃತಿಕ ಸಂಪನ್ಮೂಲದ ಒಡೆಯರು, ಕಾರ್ಮಿಕರು)  ಹಕ್ಕುಗಳ ಮೇಲೆ ಪ್ರಭಾವ ಬೀರುತ್ತವೆ. ಇವೆಲ್ಲವನ್ನೂ ಮುಂದಿನ ಪುಟಗಳಲ್ಲಿ ವಿವರಿಸಿದ್ದೇನೆ. ಸಂಪತ್ತಿನ ವಿತರಣೆಯನ್ನು ಮಾರುಕಟ್ಟೆ ಉತ್ತಮವಾಗಿ ನಿರ್ವಹಿಸುತ್ತದೆ ಎನ್ನುವ ಗ್ರಹಿಕೆಯನ್ನು ಮೊದಲು ವಿಮರ್ಶಿಸಿದ್ದೇನೆ.

**ಸಂಪತ್ತಿನ ವಿತರಣೆ:**

ನಿಯೋ ಲಿಬರಲ್ಸ್ ಪ್ರಕಾರ ಎಲ್ಲ ವ್ಯಕ್ತಿಗಳು ಒಂದಲ್ಲ ಒಂದು ಸಂಪನ್ಮೂಲ ಹೊಂದಿರುತ್ತಾರೆನ್ನುವ ಗ್ರಹಿಕೆಯಿಂದ ಕೆಲಸ ಮಾಡುತ್ತಿದೆ. ಕೆಲವರಲ್ಲಿ ಭೂಮಿ ಇರಬಹುದು, ಇನ್ನು ಕೆಲವರಲ್ಲಿ ಬಂಡವಾಳ ಇರಬಹುದು ಮತ್ತೆ ಕೆಲವರಲ್ಲಿ ಪ್ರಾಕೃತಿ ಸಂಪನ್ಮೂಗಳಿರಬಹುದು. ಈ ಬಗೆಯ ಸಂಪನ್ಮೂಲ ಇಲ್ಲದವರಲ್ಲಿ ದುಡಿಯುವ ಶ್ರಮ ಇರಬಹುದು. ಈ ಸಂಪನ್ಮೂಲಗಳನ್ನು ವ್ಯಕ್ತಿಗಳು ಅವರ ಇಚ್ಛೆ ಅನುಸಾರ ಬಳಸುವ ಸ್ವಾತಂತ್ರ್ಯ ಇದೆ. ಪ್ರತಿಯೊಬ್ಬರಿಗೆ ತಮ್ಮ ಒಲಿತು ಕೆಡುಕುಗಳ ಬಗ್ಗೆ ಕಾಳಜಿ ಇರುವುದರಿಂದ ಎಲ್ಲರೂ ಅವರವರ ಸ್ವಾಧೀನ ಇರುವ ಸಂಪನ್ಮೂಲಗಳನ್ನು ಅವರಿಗೆ ಹೆಚ್ಚು ಲಾಭ ಬರುವಂತೆ ಬಳಸುತ್ತಾರೆ. ಮಾರುಕಟ್ಟೆ ಉತ್ಪಾದಿತ ಸಂಪತ್ತನ್ನು ಅಥವಾ ಸರಕುಸೇವೆಗಳನ್ನು ಮತ್ತು ಉತ್ಪಾದನ ಪರಿಕರಗಳನ್ನು ಸಮಾಜದ ವಿವಿಧ ಗುಂಪುಗಳ ನಡುವೆ ವಿತರಿಸುತ್ತದೆ. ಇವರ ಪ್ರಕಾರ ಈ ಕೆಳಗಿನ ಕಾರಣಗಳಿಂದ ಬಡತನ ಸೃಷ್ಟಿಯಾಗುತ್ತದೆ. ಒಂದು, ಮಾರುಕಟ್ಟೆ ಸರಿಯಾಗಿ ಕೆಲಸ ಮಾಡದಿದ್ದರೆ ವ್ಯಕ್ತಿಗಳಿಗೆ ತಮ್ಮ ಸಂಪನ್ಮೂಲಗಳನ್ನು ಬಳಸಿಕೊಂಡು ಸಂಪತ್ತು ಗಳಿಸಲು ಸಾಧ್ಯವಾಗುವುದಿಲ್ಲ. ಒಂದೆರಡು ಕಾರಣಗಳಿಂದ ಮಾರುಕಟ್ಟೆ ವೈಫಲ್ಯತೆ ಸಾಧ್ಯ. ಒಂದು, ಕೆಲವು ವ್ಯಕ್ತಿಗಳು ಮಾರುಕಟ್ಟೆಯನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು (ಏಕಸ್ವಾಮ್ಯತೆ) ಪ್ರಯತ್ನಿಸುವುದರಿಂದ ಮಾರುಕಟ್ಟೆ ಅದರ ಉದ್ದೇಶಿತ ರೂಪದಲ್ಲಿ ಕಾರ್ಯ ನಿರ್ವಹಿಸಲು ವಿಫಲವಾಗಬಹುದು.

ಎರಡು, ಪ್ರಕೃತಿದತ್ತವಾದ ಮನುಷ್ಯರ ಕೆಲವು ಇತಿಮಿತಿಗಳಿಂದ – ಉದಾಹರಣೆ ಭವಿಷ್ಯದ ಬೆಳವಣಿಗೆಗಳನ್ನು ನಿಖರವಾಗಿ ಊಹಿಸಲು ವಿಫಲವಾಗುವುದು. ಬಡತನಕ್ಕೆ ಮತ್ತೊಂದು ಕಾರಣ ವ್ಯಕ್ತಿಗಳು ಮಾಡುವ ಆಯ್ಕೆಗಳು. ಶ್ರಮ ಸಂಪನ್ಮೂಲ ಮಾತ್ರ ಹೊಂದಿರುವ ವ್ಯಕ್ತಿ ದುಡಿತಗಿಂತ ಹೆಚ್ಚು ಅನುಭೋಗಿಸಲು ಇಷ್ಟಪಟ್ಟರೆ ಬಡತನ ಕಟ್ಟಿಟ್ಟ

ಬುತ್ತಿ. ಇಂದು ಗಳಿಸಿದರಲ್ಲಿ ಸ್ವಲ್ಪ ಭಾಗವನ್ನು ಭವಿಷ್ಯದ ಅನುಭೋಗಕ್ಕೆ ತೆಗೆದಿಡದ ವ್ಯಕ್ತಿ ಕೂಡ ಬಡತನವನ್ನು ಅನುಭವಿಸಬೇಕಾಗುತ್ತದೆ. ಇದು ಕೇವಲ ವ್ಯಕ್ತಿಗೆ ಮಾತ್ರವಲ್ಲ, ಸಮುದಾಯಗಳಿಗೆ, ಸಮಾಜಗಳಿಗೆ ಮತ್ತು ದೇಶಗಳಿಗೂ ಅನ್ವಯಿಸುತ್ತದೆ. ನಿಯೋ ಕ್ಲಾಸಿಕಲ್ ಎಕನಾಮಿಕ್ಸ್‌ನ ಈ ನೀತಿ ಪ್ರಕಾರ ವ್ಯಕ್ತಿ ಅಥವಾ ಸಮುದಾಯದ ಅಥವಾ ದೇಶದ ಬಡತನಕ್ಕೆ ವ್ಯಕ್ತಿ, ದೇಶ ಅಥವಾ ಸಮುದಾಯೇ ಕಾರಣ ಹೊರತು ಒಟ್ಟು ಪರಿಸರವಲ್ಲ. ಬಡತನದ ಮೂರನೇ ಕಾರಣ ವ್ಯಕ್ತಿಯ ಉತ್ಪಾದಕತೆಗೆ ಸಂಬಂಧಿಸಿದೆ. ಮಾರುಕಟ್ಟೆಯಲ್ಲಿ ಬೇಡಿಕೆಯುಳ್ಳ ಸ್ಕಿಲ್ ಇಲ್ಲದ ವ್ಯಕ್ತಿಗಳು ಅಥವಾ ಕಡಿಮೆ ಫಲವತ್ತತೆಯುಳ್ಳ ಭೂಮಿಯಲ್ಲಿನ ಭೂಮಿಯ ಉತ್ಪಾದನೆಗಳು ಹೆಚ್ಚು ಆದಾಯ ತರುವುದಿಲ್ಲ. ಅಂದರೆ ವ್ಯಕ್ತಿಗತ ಸಂಪನ್ಮೂಲಗಳನ್ನು ಸಂಪತ್ತಾಗಿ ಪರಿವರ್ತಿಸಿಕೊಳ್ಳಲು ತಂತ್ರಜ್ಞಾನದ ಬಳಕೆಯೂ ಅಗತ್ಯ. ತಂತ್ರಜ್ಞಾನದ ಕೊರತೆ ಕೂಡ ಬಡತನಕ್ಕೆ ಎಡೆಮಾಡಿಕೊಡಬಹುದು.

ಸಂಪತ್ತಿನ ವಿತರಣೆ ಕುರಿತಂತೆ ನಿಯೋ ಲಿಬರಲ್ಸ್ ಮುಂದಿಡುವ ವಾದವನ್ನು ಮಾರ್ಕಿಸ್ಟರು ಒಪ್ಪುವುದಿಲ್ಲ. ಮಾರ್ಕಿಸ್ಟರ ಪ್ರಕಾರ ಉತ್ಪಾದನ ಪರಿಕರಗಳ ಕೊರತೆ ಜೊತೆ ಆರೋಗ್ಯ ಶಿಕ್ಷಣಗಳ ಕೊರತೆಯೂ ಬಡತನಕ್ಕೆ ಕಾರಣವಾಗಿದೆ. ಶ್ರಮ ಬಿಟ್ಟು ಬೇರೇನು ಸಂಪನ್ಮೂಲ ಇಲ್ಲದ ವ್ಯಕ್ತಿಗೆ ಶ್ರಮ ಮಾರಿದರೆ ಕೂಲಿ ಆದಾಯವಾಗಿ ಬರುತ್ತದೆ. ಈ ಆದಾಯ ಗಳಿಸಬೇಕಾದರೆ ವ್ಯಕ್ತಿ ದುಡಿದು ಗಳಿಸುವಷ್ಟು ಶಕ್ತಿ ಪಡೆಯಬೇಕು. ವ್ಯಕ್ತಿ ದುಡಿದು ಗಳಿಸುವಷ್ಟ ಶಕ್ತಿ ಗಳಿಸಲು ಉಣ್ಣಬೇಕು, ವಾಸಕ್ಕೊಂದು ಕನಿಷ್ಠ ಗುಡಿಸಲಾದರು ಬೇಕು, ಆರೋಗ್ಯ ಕಾಪಾಡಲು ಆರೋಗ್ಯದ ಮೇಲೆ ಖರ್ಚು ಮಾಡವೇಕು. ಬಹುತೇಕ ಸಂದರ್ಭಗಳಲ್ಲಿ ಮೇಲಿನ ಎಲ್ಲ ಖರ್ಚುಗಳನ್ನು ಭರಿಸುವಷ್ಟು ಸಂಬಳ ಸಿಗುವುದಿಲ್ಲ. ಜೊತೆಗೆ ವ್ಯಕ್ತಿ ಶ್ರಮಶಕ್ತಿ ಗಳಿಸಲು ಅನುಭೋಗಿಸಬೇಕಾದ ಸರಕುಸೇವೆಗಳ ಮಾಡಬೇಕಾದ ಖರ್ಚು ಸಂಸ್ಕೃತಿ, ಪ್ರಕೃತಿ, ರಾಜಕೀಯ, ಅರ್ಥಿಕ ಸಂಗತಿಗಳ ಮೇಲೆ ಅವಲಂಬಿತವಾಗಿದೆ. ಇದರೊಂದಿಗೆ ದುಡಿಯುವ ಜನ ಅನುಭೋಗಿಸುವ ಸರಕುಸೇವೆಗಳನ್ನು ಉತ್ಪಾದಿಸಲು ತಗಲುವ ಅವಶ್ಯ ದುಡಿಮೆ ಕೂಡ ಸರಕುಸೇವೆಗಳ ಮೌಲ್ಯವನ್ನು ಪ್ರಭಾವಿಸುತ್ತಿರುತ್ತವೆ. ಹೀಗೆ ಹಲವು ಸಂಗತಿಗಳು ದುಡಿಮೆಗೆ ಅವಶ್ಯವಿರುವ ಶಕ್ತಿ ಗಳಿಸಲು ಅನುಭೋಗಿಸಬೇಕಾದ ಸರಕುಸೇವೆಗಳನ್ನು ಮತ್ತು ಅವುಗಳ ಬೆಲೆಗಳನ್ನು ಪ್ರಭಾವಿಸುತ್ತಿರುತ್ತವೆ. ಇದು ನಿಯೋ ಕ್ಲಾಸಿಕಲ್ ಎಕನಾಮಿಕ್ಸ್ ಗ್ರಹಿಸುವಂತೆ ಕೇವಲ ವ್ಯಕ್ತಿಯ ಬೇಕು ಬೇಡಗಳ ಮೇಲೆ ನಿಂತಿಲ್ಲ (ಮಜೀದ್ ರಹೆನಾಮ, ೨೦೦೦).

ಇದೇ ರೀತಿಯಲ್ಲಿ ವ್ಯಕ್ತಿಯೊಬ್ಬರ ಗಳಿಕೆ ಕೇವಲ ಅವರ ದುಡಿಮೆ ಮತ್ತು ಉತ್ಪಾದಕತೆ ಮೇಲೆ ನಿಂತಿಲ್ಲ. ವ್ಯಕ್ತಿಯ ಗಳಿಕೆಯನ್ನು ಅವರ ದುಡಿಮೆ ಮತ್ತು ಉತ್ಪಾದಕತೆಗಳು ಪ್ರಭಾವಿಸುವುದಕ್ಕಿಂತ ಹೆಚ್ಚು ವರ್ಗ ಪ್ರಕ್ರಿಯೆ ಪ್ರಭಾವಿಸುತ್ತದೆ ಎನ್ನುವುದು ಮಾರ್ಕಿಸ್ಟರ ಮತ್ತೊಂದು ನಿಲುವು. ಮೂಲಭೂತ ವರ್ಗ ಪ್ರಕ್ರಿಯೆ ಮತ್ತು ಅಂತರ್‌ಗತಗೊತಗೊಂಡಿರುವ ವರ್ಗ ಪ್ರಕ್ರಿಯೆಗಳು ವ್ಯಕ್ತಿಯ ಗಳಿಕೆಯನ್ನು ಪ್ರಭಾವಿಸುತ್ತವೆ. ಮೂಲಭೂತ ವರ್ಗ ಪ್ರಕ್ರಿಯೆ ಸಕ್ರಿಯವಾಗಿರುವ ಸಂದರ್ಭದಲ್ಲಿ ವ್ಯಕ್ತಿಯೊಬ್ಬರು ತಮ್ಮ ಶ್ರಮದ ಉತ್ಪತ್ತಿಗೆ ಬೇಕಾದಷ್ಟು ಮಾತ್ರ ದುಡಿಯುವುದಲ್ಲ. ಅದಕ್ಕಿಂತಲೂ ಹೆಚ್ಚು ಕಾಲ ದುಡಿಯುತ್ತಾರೆ. ಅವರ ಅವಶ್ಯಕತೆಗಳನ್ನು ಪೂರೈಸುವ ದುಡಿಮೆಯನ್ನು ಅವಶ್ಯ ದುಡಿಮೆ (ನೆಸಸರಿ ಲೇಬರ್) ಎಂದರೆ ಅವಶ್ಯಕತೆಗಳನ್ನು ಪೂರೈಸಿದಕ್ಕಿಂತ ಹೆಚ್ಚಿನ ದುಡಿಮೆಯನ್ನು ಮಿಗತೆ ದುಡಿಮೆ (ಸರ್ಪ್ಲಸ್ ಲೇಬರ್) ಎನ್ನುತ್ತಾರೆ. ಈ ಮಿಗತೆ ದುಡಿಮೆಯನ್ನು ಮಾಲೀಕರು ಅಥವಾ ದುಡಿಸುವವರು ಎಪ್ರೋಪ್ರಿಯೇಟ್ ಮಾಡುತ್ತಾರೆ. ಇದು ಬಂಡವಾಳ ಹೂಡುವವರ ಆದಾಯ.

ಮಾಲೀಕರು ಗಳಿಸದ ಎಲ್ಲ ಆದಾಯಗಳನ್ನು ತಮ್ಮಲ್ಲೇ ಇರಿಸಿಕೊಳ್ಳುವುದಿಲ್ಲ. ಉತ್ಪಾದನೆಯಲ್ಲಿ ಪಾಲುಗೊಳ್ಳುವ ನೇರ ಕಾರ್ಮಿಕರಿಗೆ ಸಲ್ಲಬೇಕಾದ ಆದಾಯದ ಒಂದು ಪಾಲು ಆಹಾರ, ಸರಕುಸೇವೆಗಳ ಉತ್ಪಾದನೆಯಲ್ಲಿ ಪರೋಕ್ಷವಾಗಿ ಪಾಲುಗೊಳ್ಳುವ ಹಣಕಾಸು, ಮಾರ್ಕೆಟಿಂಗ್, ಮ್ಯಾನೇಜ್‌ಮೆಂಟ್ ಇತ್ಯಾದಿ ಜವಾಬ್ದಾರಿಗಳನ್ನು ನಿರ್ವಹಿಸುವವರಿಗೆ ಹೋಗುತ್ತದೆ. ಈ ಕೆಲಸಗಳಲ್ಲಿ ತೊಡಗಿಸಿಕೊಂಡ ಬಹುತೇಕರ ಸಂಬಳ ಉತ್ಪಾದನೆಯಲ್ಲಿ ನೇರ ಪಾಲುಗೊಳ್ಳುವ ಕಾರ್ಮಿಕರ ಕೂಲಿಗಿಂತ ಮೂರುನಾಲ್ಕು ಪಟ್ಟು ಹೆಚ್ಚಿದೆ. ಆದುದರಿಂದಲೇ ಇವರು ಮಧ್ಯಮ ವರ್ಗದ ಜೀವನ ನಡೆಸಲು ಸಾಧ್ಯವಾಗುತ್ತಿದೆ. ಉತ್ಪಾದನೆಯಲ್ಲಿ ನೇರ ಪಾಲುಗೊಳ್ಳುವ ಕಾರ್ಮಿಕರಿಗೆ ಅತ್ಯಂತ ಕಡಿಮೆ ಕೂಲಿ ನೀಡಿ ಅವರ ದುಡಿತದಿಂತ ಸೃಷಿಯಾಗುವ ಸಂಪತ್ತಿನ ದೊಡ್ಡ ಪಾಲನ್ನು

ಉದ್ದಿಮೆಗಳ ಮಾಲೀಕರು ಪಡೆಯುತ್ತಿದ್ದಾರೆ. ಕಾರ್ಮಿಕರ ದುಡಿತದ ದೊಡ್ಡ ಪಾಲನ್ನು ಮಾಲೀಕರು ಸತತವಾಗಿ ಪಡೆಯಬೇಕಾದರೆ ಅಸಮಾನ ರಾಜಕೀಯ, ಆರ್ಥಿಕ ಸಂಬಂಧಗಳನ್ನು ಸೃಷ್ಟಿಸುತ್ತಲೇ ಇರಬೇಕಾಗುತ್ತದೆ (ರಿಚರ್ಡ್ ಪೀಟ್ ಅಂಡ್ ಇಲೈನ್ ಹೆಟ್‌ವಿಕ್ , ೨೦೦೯).

ಇದಕ್ಕಾಗಿ ಮಾಲೀಕರು ತಮ್ಮ ಗಳಿಕೆಯ ಕೆಲವು ಭಾಗವನ್ನು  ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡಬಹುದು. ರಾಜಕೀಯ ಪಕ್ಷಗಳು ಭೂಸ್ವಾಧೀನ ಮಸೂದೆಗಳನ್ನು ಉದ್ದಿಮೆಗಳಿಗೆ ಅನುಕೂಲವಾಗುವ ರೀತಿಯಲ್ಲಿ ತಿದ್ದುಪಡಿ ಮಾಡಬಹುದು. ಕಾರ್ಮಿಕರು ಅತ್ಯಂತ ಕನಿಷ್ಠ ಕೂಲಿಗೆ ದುಡಿಯುವಂತಹ ಕಾರ್ಮಿಕ ಕಾನೂನುಗಳನ್ನು ಜಾರಿಗೆ ತರಬಹುದು. ಉಳಿತಾಯದ ಬಹುಭಾಗವನ್ನು ಅತ್ಯಂತ ಕಡಿಮೆ ಬಡ್ಡಿಗೆ ಉದ್ದಿಮೆಗಳಿಗೆ ವರ್ಗಾಯಿಸುವ ಹಣಕಾಸು ನೀತಿಗಳನ್ನು ಜಾರಿಗೆ ತರಬಹುದು. ಇದೇ ರೀತಿಯಲ್ಲಿ ಸಂಪನ್ಮೂಲ ಕೆಲವರ ಕೈಯಲ್ಲಿ ಸ್ವಾಧೀನಗೊಳ್ಳುವುದನ್ನು ಪ್ರಶ್ನಿಸುವ ಶಿಕ್ಷಣದ ಬದಲು ಸಂಪನ್ಮೂಲ ಹೆಚ್ಚು ಹೆಚ್ಚು ಕೆಲವರಲ್ಲೇ ಕ್ರೋಢೀಕರಣಗೊಳ್ಳುವುದನ್ನು ವಿವಿಧ ರೂಪದಲ್ಲಿ ಸಮರ್ಥಿಸುವ ಶಿಕ್ಷಣ ನೀತಿಯನ್ನು ಜಾರಿಗೆ ತರಬಹುದು. ಇವೆಲ್ಲವೂ ಭೂಮಿ, ಹಣಕಾಸು, ಪ್ರಾಕೃತಿಕ ಸಂಪನ್ಮೂಲಗಳು ಕೆಲವರ ಸ್ವಾಧೀನ ಕ್ರೋಢೀಕರಣಗೊಳ್ಳಲು ಸಹಕರಿಸುತ್ತವೆ. ಇದೇ ಸಂದರ್ಭದಲ್ಲಿ ಉದ್ದಿಮೆಗಳು ಕುಶಿ ಬಂದ ಸಂಬಳ ಕೊಟ್ಟು, ಕುಶಿ ಬಂದ ಹಾಗೆ ದುಡಿಸಿ ಕುಶಿ ಬಂದಾಗ ಮನೆಗೆ ಕಳುಹಿಸುವ ಕಾಯಿದೆಗಳನ್ನು ಸರಕಾರ ಜಾರಿಗೆ ತರುತ್ತವೆ. ಹೊರ ಗುತ್ತಿಗೆ, ಕಂಟ್ರಾಕ್ಟ್ ಪದ್ಧತಿ, ಅರೆಕಾಲಿಕ ಪದ್ಧತಿ ಇತ್ಯಾದಿ ಕಾರ್ಮಿಕ ಪದ್ಧತಿಗಳನ್ನು ಜಾರಿಗೆ ತಂದು ಅಸಂಘಟಿತ ಕಾರ್ಮಿಕರನ್ನು ಸರಕಾರವೇ ಸೃಷ್ಟಿಸುತ್ತದೆ. ಇವೆಲ್ಲವೂ ದೊಡ್ಡ ಪ್ರಮಾಣದಲ್ಲಿ ಬಡತನವನ್ನು ಸೃಷ್ಟಿಸುತ್ತವೆ.

ಕಾರ್ಮಿಕರ ದುಡಿತದಿಂದ ಸೃಷ್ಟಿಯಾದ ಸಂಪತ್ತಿನ ಬಹುಪಾಲನ್ನು ಎಪ್ರೋಪ್ರಿಯೆಟ್ ಮಾಡಲು ಕೇವಲ ಕಾನೂನಿನ ಬೆಂಬಲ ಇದ್ದರೆ ಸಾಲದು. ಏಕೆಂದರೆ ಸಮಾಜದಲ್ಲಿ ಜನ ದೇವರಿಗೆ ಹೆದರಿದಷ್ಟು ಕಾನೂನಿಗೆ ಹೆದರುವುದಿಲ್ಲ ಮತ್ತು ಮಠಮಂದಿರಗಳನ್ನು ಅನುಸರಿಸಿದಷ್ಟು ಕಾನೂನುಗಳನ್ನು ಅನುಸರಿಸುವುದಿಲ್ಲ. ಆದುದರಿಂದ ದುಡಿತದ ಬಹುಪಾಲನ್ನು ಎಪ್ರೋಪ್ರಿಯೆಟ್ ಮಾಡಲು ಕಾನೂನಿನ ಬೆಂಬಲದ ಜೊತೆಗೆ ಸಾಂಸ್ಕೃತಿಕ ಒಪ್ಪಿಗೆಯೂ ಬೇಕು. ಇದಕ್ಕಾಗಿ ದೇವರು, ಧರ್ಮಗಳನ್ನು ಕೂಡ ಜನರ ಬೆವರಿನ ದುಡ್ಡನ್ನು ಎಪ್ರೋಪ್ರಿಯೆಟ್ ಮಾಡಲು ಅನುಕೂಲವಾಗುವ ರೀತಿಯಲ್ಲಿ ಕಟ್ಟಿಕೊಳ್ಳಬೇಕಾಗುತ್ತದೆ. ಇದಕ್ಕೂ ಕಾರ್ಮಿಕರ ಮಿಗತೆ ದುಡಿಮೆಯನ್ನು ಎಪ್ರೋಪ್ರಿಯೇಟ್ ಮಾಡಿದವರು ಸಾಕಷ್ಟು ವಿನಿಯೋಜಿಸಬೇಕಾಗುತ್ತದೆ. ಇಂತಹ ವಿನಿಯೋಜನೆಯಿಂದ ಎಲ್ಲ ಕಡೆ ತುಂಬಿರುವ ದೇವರು, ಜಾತ್ರೆ, ಪೂಜೆ ಪುನಸ್ಕಾರ, ವಾಸ್ತು, ಜ್ಯೋತಿಷ್ಯಗಳು ತುಂಬುತ್ತಾರೆ. ಇವರು ಒಂದು ಕಡೆ ದೇವಸ್ಥಾನಗಳಲ್ಲಿ ದೊಡ್ಡ ಪ್ರಮಾಣದ ಸಂಪತ್ತಿನ ಕ್ರೋಢೀಕರಣಕ್ಕೆ ಅವಕಾಶ ಮಾಡಿಕೊಟ್ಟರೆ ಮತ್ತೊಂದೆಡೆ ಜನಸಾಮಾನ್ಯರ ಬೆವರಿನ ದುಡಿಮೆಗಿಂತ ಹೆಚ್ಚು ಪೂಜೆ ಪುನಸ್ಕಾರಗಳೇ ನಮ್ಮೆಲ್ಲರ ಒಲಿತು ಕೆಡುಕುಗಳನ್ನು ನಿರ್ಧರಿಸುತ್ತವೆನ್ನುವ ನಂಬಿಕೆ ಸೃಷ್ಟಿಸುತ್ತಿವೆ.

ಇವುಗಳೊಂದಿಗೆ ಉಣ್ಣುವ, ತಿನ್ನುವ, ಉಡುವ, ಪೂಜಿಸುವ, ಪ್ರೀತಿಸುವ ವಿಷಯಗಳನ್ನು ಬಳಸಿಕೊಂಡು ಜನರನ್ನು ಧ್ರುವೀಕರಿಸಲು ದೇವರು, ಧರ್ಮಗಳು ಧಾರಾಳವಾಗಿ ಬಳಕೆಯಾಗುತ್ತಿವೆ. ಇಂತಹ ಸಾಂಸ್ಕೃತಿ ಪರಿಸರದಲ್ಲಿ ಪರಾವಲಂಬಿಗಳು ಉತ್ಪಾದಕರೆಂದು ಪುರಸ್ಕರಿಸಲ್ಪಟ್ಟರೆ ನಿಜವಾದ ಉತ್ಪಾದಕರು ಪರಾವಲಂಬಿಗಳಂತೆ ತಿರಸ್ಕರಿಸಲ್ಪಡುತ್ತಾರೆ. ಸರಕುಸೇವೆಗಳ ಉತ್ಪಾದನೆಯೊಂದಿಗೆ ಯಾವುದೇ ಸಂಬಂಧವಿಲ್ಲದವರು – ಸ್ವಾಮೀಜಿಗಳು, ಬಾಬಾಗಳು, ಜ್ಯೋತಿಷಿಗಳು, ವಾಸ್ತು ಶಿಲ್ಪಿಗಳು,  ಕ್ರಿಕೆಟ್ ದೇವರುಗಳು, ಸಿನಿಮಾ ತಾರೆಯರು ಇವರೆಲ್ಲ ಉನ್ನತ ಸ್ಥಾನಮಾನ, ಆದಾಯ ಪಡೆಯುತ್ತಾರೆ. ಇವೆಲ್ಲವೂ ನಿಜವಾದ ಉತ್ಪಾದಕರ ದುಡಿಮೆಯ ಬಹುಭಾಗವನ್ನು ದುಡಿಸುವವರು ಎಪ್ರೋಪ್ರಿಯೇಟ್ ಮಾಡಲು ಅವಶ್ಯವಿರುವ ಸಾಂಸ್ಕೃತಿಕ, ರಾಜಕೀಯ ಪರಿಸರವನ್ನು ಸೃಷ್ಟಿಸುತ್ತಿವೆ. ಹೀಗೆ ಸಮಾಜದ ವಿವಿಧ ಗುಂಪುಗಳು ಪಡೆಯುವ ಆದಾಯದ ಹಿಂದೆ ಉತ್ಪಾದನೆಯಲ್ಲಿ ನೇರ ಪಾಲುಗೊಳ್ಳುವ ಕಾರ್ಮಿಕರ ಮಿಗತೆ ದುಡಿಮೆಯ ಪಾಲಿದೆ ಎನ್ನುವುದು ಮಾರ್ಕ್ಸ್ ವಾದ. ಪರಾಲಂಬಿಗಳು ಮಿಗತೆ ಆದಾಯದ ಹೆಚ್ಚಿನ ಪಾಲು ಪಡೆದಂತೆ ನೇರ ದುಡಿಮೆಗಾರರಿಗೆ ದಕ್ಕುವ ಪಾಲು ಕಡಿಮೆಯಾಗುತ್ತಾ ಹೋಗುತ್ತದೆ. ದುಡಿಮೆಗಾರರ ಪಾಲು ಕಡಿಮೆಯಾದಂತೆ ಬಡತನ ಹೆಚ್ಚಾಗುತ್ತಾ ಹೋಗುತ್ತದೆ.

**ಸಂಕುಚಿತ ಪ್ರಜಾಪ್ರಭುತ್ವ:**

ಉತ್ತಮ ಸರಕಾರಗಳು ಮೇಲೆ ಚರ್ಚಿಸಿದ ಮಾರುಕಟ್ಟೆಯ ನಕರಾತ್ಮಕ ಪರಿಣಾಮಗಳನ್ನು ಕಡಿಮೆ ಮಾಡಬಹುದು. ಒಂದು ವೇಳೆ ಸರಕಾರದ ಗುಣಮಟ್ಟವೂ ಕೆಟ್ಟರೆ ಈ ಪಾಲಿಸಿಗಳು ಜನಸಾಮಾನ್ಯರ ಬದುಕಿನ ಮೇಲೆ ಭೀಕರ ಪರಿಣಾಮ ಬೀರುತ್ತವೆ. ಹೀಗೆ ನಿಯೋ ಲಿಬರಲ್ ಅಭಿವೃದ್ದಿ ಗುಣಮಟ್ಟ ಮತ್ತು ಪ್ರಜಾಪ್ರಭುತ್ವದ ಗುಣಮಟ್ಟ ನಡುವೆ ನೇರ ಸಂಬಂಧ ಇದೆ. ಪ್ರಜಾಪ್ರಭುತ್ವದ ಗುಣಮಟ್ಟ ಉತ್ತಮಗೊಂಡಂತೆ ಮಾರುಕಟ್ಟೆಯ ಗುಣಮಟ್ಟ ಉತ್ತಮಗೊಳ್ಳುತ್ತದೆ ಮತ್ತು ಪ್ರಜಾಪ್ರಭುತ್ವದ ಗುಣಮಟ್ಟ ಕೆಟ್ಟಂತೆ ಮಾರುಕಟ್ಟೆ ಗುಣಮಟ್ಟ ಕೆಡುತ್ತದೆ (ಅತುಲ್ ಕೊಹ್ಲಿ, ೧೯೯೧, ಅಶುತೋಷ್ ವಾರ್ಶ್ನಿ, ೨೦೧೩). ಮುಕ್ತ ಮಾರುಕಟ್ಟೆ ನಿಜವಾದ ಅರ್ಥದಲ್ಲಿ ಆಚರಣೆಗೆ ಬರಬೇಕಾದರೆ ಮುಕ್ತ ಪ್ರಜಾಪ್ರಭುತ್ವ ಆಚರಣೆಯಲ್ಲಿರಬೇಕಾಗುತ್ತದೆ. ಪ್ರಜಾಪ್ರಭುತ್ವ ಸಂಕುಚಿತಗೊಂಡಂತೆ ಮಾರುಕಟ್ಟೆ ಕೂಡ ಸಂಕುಚಿತಗೊಳ್ಳುತ್ತದೆ. ಗುಣಮಟ್ಟದ ಪ್ರಜಾಪ್ರಭುತ್ವ ಆಚರಣೆಯಲ್ಲಿ ಇರಬೇಕಾದರೆ ಸಮಾಜದ ಎಲ್ಲರೂ ಪ್ರಜಾಪ್ರಭತ್ವದಲ್ಲಿ ಮುಕ್ತವಾಗಿ ಪಾಲುಗೊಳ್ಳುವ ಅವಕಾಶ ಇರಬೇಕು. ತಾತ್ವಿಕವಾಗಿ ಈ ಅವಕಾಶ ನಮ್ಮಲ್ಲಿದೆ. ಅಂದರೆ ಚುನಾವಣೆಯಲ್ಲಿ ಭಾಗವಹಿಸಲು ವ್ಯಕ್ತಿಯ ಜಾತಿ, ಧರ್ಮ. ಲಿಂಗ, ವರ್ಗಗಳು ಅಡ್ಡಿಯಾಗಬಾರದು. ಆದರೆ ವಾಸ್ತವದಲ್ಲಿ ಆ ರೀತಿ ನಡೆಯುತ್ತಿಲ್ಲ.

ನಮ್ಮ ಜನಸಂಖ್ಯೆಯ ಅರ್ಧದಷ್ಟು ಮಹಿಳೆಯರಿದ್ದಾರೆ. ಆದರೆ ಲೋಕಸಭೆಯ ಪ್ರತಿನಿಧಿಗಳ ಹತ್ತನೇ ಒಂದರಷ್ಟು ಮತ್ತು ವಿಧಾನಸಭೆಯ ಪ್ರತಿನಿಧಿಗಳ ಹತ್ತನೇ ಒಂದಕ್ಕಿಂತಲೂ ಕಡಿಮೆ ಮಹಿಳ ಪ್ರತಿನಿಧಿಗಳಿದ್ದಾರೆ. ಇದೇ ರೀತಿಯಲ್ಲಿ ನಮ್ಮ ಜನಸಂಖ್ಯೆಯ ಐದನೇ ಒಂದರಷ್ಟು ಅಲ್ಪಸಂಖ್ಯಾತರಿದ್ದಾರೆ. ಆದರೆ ಅಲ್ಪಸಂಖ್ಯಾತರ ಜನಪ್ರತಿನಿಧಿಗಳ ಸಂಖ್ಯೆ ಶೇಕಡ ಹತ್ತು ದಾಟುವುದಿಲ್ಲ. ನಮ್ಮ ಜನಸಂಖ್ಯೆಯ ಕಾಲುಭಾಗದಷ್ಟು ದಲಿತಬುಡಕಟ್ಟು ಜನಸಂಖ್ಯೆ ಇದೆ. ಹೆಚ್ಚು ಕಡಿಮೆ ಅಷ್ಟೇ ಪ್ರಮಾಣದ ಜನಪ್ರತಿನಿಧಿಗಳು ದಲಿತಬುಡಕಟ್ಟು ಹಿನ್ನೆಲೆಯಿಂದ ಬರುತ್ತಾರೆ. ಇದಕ್ಕೆ ಬಹುಮುಖ್ಯ ಕಾರಣ ಮೀಸಲಾತಿ ಕ್ಷೇತ್ರಗಳು. ಮೀಸಲಾತಿ ಕ್ಷೇತ್ರಗಳು ಇಲ್ಲದಿದ್ದರೆ ದಲಿತಬುಡಕಟ್ಟುಗಳ ಸ್ಥಿತಿ ಮಹಿಳೆ ಮತ್ತು ಅಲ್ಪಸಂಖ್ಯಾತರಿಗಿಂತಲೂ ಕೆಟ್ಟದಿರುತ್ತಿತ್ತು. ಇದೇ ಸಂದರ್ಭದಲ್ಲಿ ಮೀಸಲಾತಿ ಕ್ಷೇತ್ರ ನೀಡಿದ ಕೂಡಲೇ ದಲಿತ ಬುಡಕಟ್ಟು ಜನರ ಆದ್ಯತೆಗಳನ್ನು ಪ್ರತಿನಿಧಿಸುವ ಪ್ರತಿನಿಧಿಗಳು ಆಯ್ಕೆಯಾಗುತ್ತಾರೆನ್ನಲು ಸಾಧ್ಯವಿಲ್ಲ. ಏಕೆಂದರೆ ದಲಿತ ಬುಡಕಟ್ಟುಗಳ ಪ್ರತಿನಿಧಿಗಳ ಆಯ್ಕೆಯಲ್ಲಿ ದಲಿತಬುಡಕಟ್ಟೇತರ ಅಥವಾ ಸಾಮಾನ್ಯ ಮತದಾರರು ನಿರ್ಣಾಯಕ ಪಾತ್ರ ವಹಿಸುತ್ತಿದ್ದಾರೆ. ಇದರಿಂದಾಗಿ ದಲಿತ ಬುಡಕಟ್ಟು ಪ್ರತಿನಿಧಿಗಳು ತಮ್ಮ ಜನರ ಆಸಕ್ತಿಗಳನ್ನು ಪ್ರತಿನಿಧಿಸುವುದಕ್ಕಿಂತ ಹೆಚ್ಚು ಸಾಮಾನ್ಯ ಮತದಾರರ ಆದ್ಯತೆಗಳನ್ನು ಪ್ರತಿನಿಧಿಸುವ ಅನಿವಾರ್ಯತೆ ಇದೆ. ಇನ್ನು ಪ್ರಾತಿನಿಧಿತ್ವವನ್ನು ವರ್ಗದ ದೃಷ್ಟಿಯಿಂದ ನೋಡಿದರೆ ನಮ್ಮ ಸಮಾಜದ ಶೇಕಡಾ ತೊಂಬತ್ತಕ್ಕಿಂತಲೂ ಹೆಚ್ಚಿನ ಜನರು ಅತ್ಯಂತ ಕಡಿಮೆ ಆದಾಯವುಳ್ಳವರು. ಆದರೆ ಈ ವರ್ಗದಿಂದ ಒಂದೆರಡು ಜನಪ್ರತಿನಿಧಿಗಳು ಕೂಡ ಚುನಾಯಿತರಾಗುತ್ತಿಲ್ಲ.

ಈ ಎಲ್ಲದರ ಹಿನ್ನೆಲೆಯಲ್ಲಿ ನಮ್ಮ ಪ್ರಜಾಪ್ರಭುತ್ವದ ಗುಣಮಟ್ಟದ ಕುರಿತು ಈ ಕೆಳಗಿನ ತೀರ್ಮಾನಕ್ಕೆ ಬರಬಹುದು. ಒಂದು, ನಮ್ಮ ಸಮಾಜದ ಶೇಕಡಾ ಎಪ್ಪತ್ತರಷ್ಟು ಜನರು ತಮ್ಮ ಜನಸಂಖ್ಯೆಗೆ ಸಮವಾದ ಪ್ರತಿನಿಧಿತ್ವವನ್ನು ಹೊಂದಿಲ್ಲ. ಎರಡು, ದಲಿತ ಬುಡಕಟ್ಟುಗಳು ಅವರ ಜನಸಂಖ್ಯೆಗೆ ಸಮವಾದ ಪ್ರತಿನಿಧಿತ್ವ ಹೊಂದಿದ್ದರೂ ಅವರು ದಲಿತ ಬುಡಕಟ್ಟುಗಳಿಗಿಂತ ಹೆಚ್ಚು ದಲಿತಬುಡಕಟ್ಟೇತರ ಜನರ ಆದ್ಯತೆಗಳನ್ನು ಪ್ರತಿನಿಧಿಸುವ ಅನಿವಾರ್ಯತೆ ಇದೆ. ಮೂರು, ಜಾತಿ, ಧರ್ಮ, ಹಣದ ಬಲಗಳು ಜನಪ್ರತಿನಿಧಿಗಳ ಆಯ್ಕೆಯಲ್ಲಿ ನಿರ್ಣಾಯಕ ಪಾತ್ರವಹಿಸುತ್ತಿವೆ. ಇದರಿಂದಾಗಿ ಪ್ರತಿನಿಧಿಗಳುಳ್ಳ ಸಮುದಾಯಗಳ ತಳಸ್ತರದ ಜನರ ಆದ್ಯತೆಗಳು ಪ್ರತಿನಿಧಿಸಲ್ಪಡುತ್ತಿಲ್ಲ. ಇವೆಲ್ಲವೂ ಸಂಕುಚಿತ ಪ್ರಜಾಪ್ರಭುತ್ವದ ಗುಣಲಕ್ಷಣಗಳು. ಸಂಕುಚಿತ ಪ್ರಜಾಪ್ರಭುತ್ವ ಸಂಕುಚಿತ ಮಾರುಕಟ್ಟೆಯನ್ನು ಸೃಷ್ಟಿಸುತ್ತದೆ ಎನ್ನುವುದು ಮತ್ತೊಂದು ಗ್ರಹಿಕೆ. ಈ ಗ್ರಹಿಕೆ ಎಷ್ಟರ ಮಟ್ಟಿಗೆ ಸರಿಯೆಂದು ಪರೀಕ್ಷಿಸುವ.

**ಸಂಕುಚಿತ ಅಭಿವೃದ್ಧಿ:**

ಭೂಮಿ, ಹಣಕಾಸು, ಪ್ರಾಕೃತಿಕ ಸಂಪನ್ಮೂಲ, ಶ್ರಮ ಇವೆಲ್ಲ ಉತ್ಪಾದನಾ ಪರಿಕರಗಳು. ಅಂದರೆ ಇವುಗಳನ್ನು ಬಳಸಿಕೊಂಡು ಸರಕುಸೇವೆಗಳ ಉತ್ಪಾದನೆ ನಡೆಯುತ್ತದೆ. ಭೂಮಿ, ಹಣಕಾಸು ಇಲ್ಲದವರು ತಮ್ಮ ಶ್ರಮ ಮಾರಿ

ಬದುಕುವುದು ಬಿಟ್ಟರೆ ಬೇರೆ ದಾರಿ ಇಲ್ಲ. ತೊಂಬತ್ತರ ನಂತರ ಅಥವಾ ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿ ಜಾರಿಗೆ ಬಂದ ನಂತರ ಉತ್ಪಾದನಾ ಪರಿಕರ ಮತ್ತು ಸರಕುಸೇವೆಗಳ ವಿತರಣೆ ಮಾರುಕಟ್ಟೆ ನಿಯಮಕ್ಕೆ ಒಳಗಾಗಿದೆ ಎನ್ನುವ ಚಿತ್ರಣ ಇದೆ. ವ್ಯಕ್ತಿಯ ಖರೀದಿಸುವ ಶಕ್ತಿ ಮತ್ತು ಅವರು ಅನುಭವಿಸುವ ಸರಕುಸೇವೆ ಅಥವಾ ಉತ್ಪಾದನಾ ಪರಿಕರಗಳ ನಡುವೆ ನೇರ ಸಂಬಂಧ ಕಲ್ಪಿಸಲಾಗಿದೆ. ಅಂದರೆ ಅನುಕೂಲಸ್ಥರು ಮಾರುಕಟ್ಟೆ ದರದಲ್ಲಿ ಖರೀದಿಸಿ ಅನುಭವಿಸುತ್ತಿದ್ದಾರೆ ಮತ್ತು ಪ್ರಜಾಪ್ರಭುತ್ವದಲ್ಲಿ ಸರಿಯಾದ ಪ್ರಾತಿನಿಧಿತ್ವ ಇಲ್ಲದ ಅನಾನುಕೂಲಸ್ಥರು ಸರಕಾರದ ಕೃಪೆಯಲ್ಲಿ ಬದುಕುತ್ತಿದ್ದಾರೆ ಎನ್ನುವ ಚಿತ್ರಣ ಇದೆ. ಆದರೆ ಕಾರ್ಯರೂಪದಲ್ಲಿರುವ ಮಾರುಕಟ್ಟೆ ಚಿತ್ರಣವೇ ಬೇರೆ ಇದೆ. ಸಂಕುಚಿತ ಪ್ರಜಾಪ್ರಭುತ್ವದ ಮೇಲೆ ಹಿಡಿತ ಹೊಂದಿರುವ ಮೇಲ್ವರ್ಗ ಮಾರುಕಟ್ಟೆಯನ್ನು ತನ್ನ ಆಸಕ್ತಿಗೆ ಪೂರಕವಾಗಿ ಕಟ್ಟಿಕೊಂಡಿದೆ. ಇವರು ಕಟ್ಟಿಕೊಂಡ ಮಾರುಕಟ್ಟೆಯಲ್ಲಿ ಬೇಡಿಕೆಗಿಂತ ಕಡಿಮೆ ಪೂರೈಕೆ ಇರುವ ಭೂಮಿ, ಹಣಕಾಸು, ಪ್ರಾಕೃತಿಕ ಸಂಪನ್ಮೂಲಗಳ ವ್ಯವಹಾರ ಮಾರುಕಟ್ಟೆ ನಿಯಮದಿಂದ ಹೊರಗಿದ್ದರೆ ಬೇಡಿಕೆಗಿಂತ ಹೆಚ್ಚು ಪೂರೈಕೆ ಇರುವ ಶ್ರಮ ವ್ಯವಹಾರ ಮಾರುಕಟ್ಟೆ ನಿಯಮದೊಳಗಿದೆ. ಕೆಲವೊಂದು ಉದಾಹರಣೆಗಳನ್ನು ನೋಡಿದರೆ ಮೇಲಿನ ಅಂಶ ಹೆಚ್ಚು ಸ್ಪಷ್ಟವಾಗಬಹುದು.

ಮೊದಲಿಗೆ ಹಣಕಾಸು ಮಾರುಕಟ್ಟೆಯನ್ನು ಪರಿಶೀಲಿಸುವ. ಸಾಲದ ಬೇಡಿಕೆ ಪೂರೈಕೆಗಳು ಬಡ್ಡಿದರವನ್ನು ತೀರ್ಮಾನಿಸಬೇಕು. ಸಾಲದ ಬೇಡಿಕೆ ಹೆಚ್ಚಾದಾಗ ಬಡ್ಡಿದರ ಹೆಚ್ಚಾಗಬೇಕು ಮತ್ತು ಕಡಿಮೆಯಾದಾಗ ಕಡಿಮೆಯಾಗಬೇಕು. ಆದರೆ ನಮ್ಮಲ್ಲಿ ಆ ರೀತಿ ಆಗುತ್ತಿಲ್ಲ. ಸಾಲದ ಮಾರುಕಟ್ಟೆಯಲ್ಲಿ ಸರಕಾರ ಮಧ್ಯಪ್ರವೇಶಿಸಿ ಸಾಲದ ಎರಡು ಮಾರುಕಟ್ಟೆಗಳನ್ನು ಸೃಷ್ಟಿಸಿದೆ. ಒಂದು ಸಾಲದ ಮಾರುಕಟ್ಟೆಯಲ್ಲಿ ಸರಕಾರ ಮಧ್ಯಪ್ರವೇಶ ಮಾಡಿ ಬಡ್ಡಿದರವನ್ನು ಹಿಡಿತದಲ್ಲಿಟ್ಟುಕೊಂಡರೆ ಮತ್ತೊಂದು ಸಾಲದ ಮಾರುಕಟ್ಟೆ ಮಾರುಕಟ್ಟೆ ನಿಯಮನುಸಾರ ನಡೆಯುತ್ತಿದೆ. ವಿಚಿತ್ರವೆಂದರೆ ಸರಕಾರದ ಹಿಡಿತದಲ್ಲಿರುವ ಸಾಲದ ಮಾರುಕಟ್ಟೆಯ ಹೆಚ್ಚಿನ ಭಾಗ ದೊಡ್ಡ ಉದ್ದಿಮೆ ಹಾಗು ದೊಡ್ಡ ಕೃಷಿಕರಿಗೆ ಹೋದರೆ ಸಣ್ಣ ಭಾಗ ಪ್ರಜಾಪ್ರಭುತ್ವದಲ್ಲಿ ಕಡಿಮೆ ಪ್ರತಿನಿಧಿತ್ವವುಳ್ಳವರಿಗೆ ಹೋಗುತ್ತಿದೆ. ಅಷ್ಟುಮಾತ್ರವಲ್ಲ ಪ್ರಜಾಪ್ರಭುತ್ವದಲ್ಲಿ ಪ್ರತಿನಿಧಿತ್ವ ಇಲ್ಲದ ತಳಸ್ತರದ ಜನರನ್ನು ಮಾರುಕಟ್ಟೆ ನಿಯಮನುಸಾರ ವ್ಯವಹರಿಸಲು ಒತ್ತಾಯಿಸಲಾಗುತ್ತಿದೆ. ಇವರ ಸಾಲದ ಬೇಡಿಕೆ ಹೆಚ್ಚಿರುವುದರಿಂದ ಸರಕಾರೇತರ ಮೂಲಗಳ ಸಾಲದ ಬಡ್ಡಿದರಗಳು ಕೂಡ ಹೆಚ್ಚಾಗಿವೆ (ಭಾರತ ಸರಕಾರ, ೨೦೦೭). ಪ್ರಜಾಪ್ರಭುತ್ವದ ಮೇಲೆ ಹಿಡಿತಹೊಂದಿರುವ ಮೇಲ್ವರ್ಗ ಹೆಚ್ಚು ಸರಕಾರಿ ಸಾಲ ಪಡೆಯುವುದು ಮಾತ್ರವಲ್ಲ, ಪಡೆದ ಸಾಲವನ್ನು ಸಂದಾಯ ಮಾಡುವುದರಲ್ಲೂ ಹಿಂದಿದೆ. ಹಾಗೆಂದು ಕಠಿಣ ಕಾನೂನು ಕ್ರಮ ಕೈಗೊಂಡು ಇವರ ಸಾಲ ವಸೂಲಿ ಮಾಡುವ ಬದಲು ಕೋಟಿಗಟ್ಟಲೆ ರೂಗಳ ಸಾಲವನ್ನು ಮನ್ನಾ ಮಾಡಲಾಗುತ್ತಿದೆ. ಕೃಷಿಕರ ಸಣ್ಣಪುಟ್ಟ ಸಾಲವನ್ನು ಸರಕಾರ ಮನ್ನಾ ಮಾಡುವಾಗ ನಮ್ಮ ಬ್ಯಾಂಕಿಂಗ್ ವ್ಯವಸ್ಥೆ ಕೆಡುತ್ತಿದೆಯೆಂದು ಕಿರುಚಾಡುವ ಮಾಧ್ಯಮಗಳು ಉದ್ದಿಮೆಗಳು ಮಾಡಿರುವ ಲಕ್ಷಕೋಟಿಗಿಂತಲೂ ಹೆಚ್ಚಿನ ಸಾಲವನ್ನು ಮನ್ನಾ ಮಾಡುವಾಗ ಮಾತೇ ಆಡುವುದಿಲ್ಲ.

ಎರಡು ವಿಧದ ಸಾಲದ ಮಾರುಕಟ್ಟೆ ಇದ್ದಂತೆ ಎರಡು ವಿಧದ ಭೂಮಾರುಕಟ್ಟೆಗಳಿವೆ. ಬಡವರು ಮತ್ತು ತಳಮಧ್ಯಮ ವರ್ಗದವರು ಮನೆ ಕಟ್ಟಿಸಲು ಒಂದು ಸಣ್ಣ ತುಂಡು ಜಾಗ ಖರೀದಿಸುವಾಗ ಮಾರುಕಟ್ಟೆ ದರ ನೀಡಬೇಕು. ವರ್ಷದಿಂದ ವರ್ಷ ವಸತಿ ಬೇಡಿಕೆ ಹೆಚ್ಚಾದಂತೆ ಭೂಮಿ ಬೆಲೆ ಕೂಡ ಏರುತ್ತಿದೆ. ಆದರೆ ಇದೇ ಸಂದರ್ಭದಲ್ಲಿ ಉದ್ದಿಮೆಗಳಿಗೆ ಅತ್ಯಂತ ಅಗ್ಗದ ಬೆಲೆಯಲ್ಲಿ ಭೂಮಿ ಲಭ್ಯವಾಗುತ್ತಿದೆ. ಉದ್ದಿಮೆಗಳಿಗೆ ಭೂಮಿ ನೀಡಲು ಸರಕಾರವೇ ಭೂಬ್ಯಾಂಕ್ ಸ್ಥಾಪಿಸುತ್ತಿದೆ. ಉದ್ದಿಮೆಗಳಿಗೆ ಕಡಿಮೆ ಬೆಲೆಯಲ್ಲಿ ಭೂಮಿ ಒದಗಿಸುವ ಉದ್ದೇಶದಿಂದ ಭೂಸ್ವಾಧೀನ ಮಸೂದೆಯನ್ನು ತಿದ್ದುಪಡಿ ಮಾಡಲು ಸರಕಾರ ಹಿಂದೇಟು ಹಾಕುವುದಿಲ್ಲ. ಇಷ್ಟ ಇದ್ದರೆ ಮಾರುವ ಇಲ್ಲವಾದರೆ ದೂರ ನಿಲ್ಲುವ ಭೂಮಾಲೀಕರ ಮಾರುಕಟ್ಟೆ ಸ್ವಾತಂತ್ರ್ಯ ಉದ್ದಿಮೆಗಳಿಗೆ ಭೂಮಿ ನೀಡುವ ಸಂದರ್ಭದಲ್ಲಿ ಅನ್ವಯವಾಗುವುದಿಲ್ಲ. ಹೆಚ್ಚುಕಡಿಮೆ ಇದೇ ನೀತಿ ಕಲ್ಲಿದ್ದಲು, ತೈಲ, ಕಬ್ಬಿಣ ಅದಿರು ಇತ್ಯಾದಿ ಪ್ರಾಕೃತಿಕ ಸಂಪನ್ಮೂಲಗಳ ಮಾರುಕಟ್ಟೆಯಲ್ಲೂ ಕೆಲಸ ಮಾಡುತ್ತಿದೆ.

ಅತ್ಯಂತ ಕಡಿಮೆ ಬೆಲೆಗೆ ಭೂಮಿ, ಹಣಕಾಸುಗಳು ಮೇಲ್ವರ್ಗಕ್ಕೆ ಪೂರೈಕೆಯಾಗುವಂತೆ ಇವುಗಳ

ಮಾರುಕಟ್ಟೆಯನ್ನು ಕಟ್ಟಿಕೊಳ್ಳಲಾಗಿದೆ. ಆದರೆ ಶ್ರಮ ಮಾರುಕಟ್ಟೆಯಲ್ಲಿ ದುಡಿಯುವ ವರ್ಗದ ಸಂಬಳ ಸಂಪೂರ್ಣವಾಗಿ ಬೇಡಿಕೆ ಪೂರೈಕೆಗಳ ಮೇಲೆ ನಿಂತಿದೆ. ನಮ್ಮಲ್ಲಿ ಭೂಮಿ, ಹಣಕಾಸು ಇಲ್ಲದ ಜನರಸಂಖ್ಯೆ ಹೆಚ್ಚಿರುವುದರಿಂದ ದುಡಿಯುವ ಜನರ ಪೂರೈಕೆ ಕೂಡ ಹೆಚ್ಚಿದೆ. ಪೂರೈಕೆ ಹೆಚ್ಚಿರುವುದರಿಂದ ಅತ್ಯಂತ ಕಡಿಮೆ ಸಂಬಳಕ್ಕೆ ದುಡಿಯುವವರನ್ನು ಪಡೆಯಲು ಅನುಕೂಲವಾಗುವ ರೀತಿಯಲ್ಲಿ (ಒಪ್ಪಂದ, ಹೊರಗುತ್ತಿಗೆ, ತಾತ್ಕಾಲಿಕ ನೇಮಕಾತಿ ಇತ್ಯಾದಿ ಕ್ರಮಗಳ ಮೂಲಕ) ಶ್ರಮ ಮಾರುಕಟ್ಟೆಯನ್ನು ರೂಪಿಸಲಾಗಿದೆ. ಹೀಗೆ ಸಂಕುಚಿತ ಪ್ರಜಾಪ್ರಭುತ್ವ ಸಂಕುಚಿತ ಮಾರುಕಟ್ಟೆಯನ್ನು ಸೃಷ್ಟಿಸಿದೆ. ಸಂಕುಚಿತ ಪ್ರಜಾಪ್ರಭುತ್ವ ನಮ್ಮ ಸಮಾಜದ ಬಹುತೇಕರ ಆಸಕ್ತಿಗಳನ್ನು ಪ್ರತಿನಿಧಿಸುತ್ತಿಲ್ಲ. ಅಲ್ಪಸಂಖ್ಯೆಯಲ್ಲಿರುವ ಮೇಲ್ವರ್ಗದ ಆಸಕ್ತಿಗಳನ್ನು ಪ್ರತಿನಿಧಿಸುವ ಪ್ರಜಾಪ್ರಭುತ್ವ ತನ್ನ ಆಸಕ್ತಿಯನ್ನು ಪ್ರತಿನಿಧಿಸುವ ಮಾರುಕಟ್ಟೆಯನ್ನು ಕಟ್ಟಿಕೊಂಡಿದೆ. ಈ ವ್ಯವಸ್ಥೆಯಲ್ಲಿ ಅನಾನುಕೂಲಸ್ಥರು ಮಾರುಕಟ್ಟೆ ದರದಲ್ಲಿ ಖರೀದಿಸಿ ಅನುಭವಿಸಿದರೆ ಅನುಕೂಲಸ್ಥರು ಸರಕಾರದ ಕೃಪೆಯಲ್ಲಿ ಬದುಕುತ್ತಿದ್ದಾರೆ.

**ಸಾಂಸ್ಕೃತಿಕ ಬಿಡುಗಡೆ:**

ಮಾರುಕಟ್ಟೆ ತಳಸ್ತರ ಜನಪರ ಕೆಲಸ ಮಾಡುತ್ತಿಲ್ಲ ಎನ್ನುವುದನ್ನು ಮೇಲಿನ ವಿವರಗಳಿಂದ ಅರ್ಥಮಾಡಿಕೊಳ್ಳಬಹುದು. ಈ ಸಮಸ್ಯೆಗೆ ಪರಿಹಾರ ಹೆಚ್ಚು ಹೆಚ್ಚು ಕ್ಷೇತ್ರಗಳಿಗೆ ಮಾರುಕಟ್ಟೆ ನೀತಿಯನ್ನು ಅನ್ವಯಿಸುವುದಲ್ಲ. ಅದರ ಬದಲು ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳ ಲಿಬರಲೈಸೇಶನ್ ಮಾರುಕಟ್ಟೆ ಲಿಬರಲೈಸೇಶನ್ ಜೊತೆಜೊತೆಗೆ ನಡೆಯಬೇಕು. ಮಾರುಕಟ್ಟೆ ಅಭಿವೃದ್ದಿ ಸಮಾಜದ ತಳಸ್ತರ ಪರ ಕೆಲಸ ಮಾಡಬೇಕಾದರೆ ಆರ್ಥಿಕ ಕ್ಷೇತ್ರಗಳನ್ನು ಲಿಬರಲೈಸ್ ಮಾಡಿದರೆ ಸಾಲದು ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳೂ ಲಿಬರಲೈಸ್ ಆಗಬೇಕೆನ್ನುವುದನ್ನು ಪಶ್ಚಿಮದಲ್ಲಿ ಮಾರುಕಟ್ಟೆ ಅರ್ಥ ವ್ಯವಸ್ಥೆ ಜಾರಿಗೆ ಬಂದ ಚಾರಿತ್ರಿಕ ಸಂದರ್ಭದಿಂದ ಅರ್ಥ ಮಾಡಿಕೊಳ್ಳಬಹುದು. ಮುಕ್ತ ಮಾರುಕಟ್ಟೆ ಕಲ್ಪನೆ ಅಡಂ ಸ್ಮಿಥ್‌ನ ವೆಲ್ತ್ ಆಫ್ ನೇಶನ್ಸ್ ಥಿಯರಿಯಿಂದ ಜನಸಾಮಾನ್ಯರ ಪ್ರಜ್ಞೆಯ ಭಾಗವಾಗಲಿಲ್ಲ. ಆ ಚಾರಿತ್ರಿಕ ಸಂದಭದಲ್ಲಿ ನಡೆದ ಸಾಂಸ್ಕೃತಿಕ, ರಾಜಕೀಯ ಬದಲಾವಣೆಗಳು ಮುಕ್ತ ಮಾರುಕಟ್ಟೆ ಕಲ್ಪನೆಯನ್ನು ಬಲಗೊಳಿಸಿವೆ. ಬಹುಮುಖ್ಯವಾಗಿ ಜ್ಞಾನದ ಉತ್ಪಾದನೆಯಲ್ಲಾದ ಬದಲಾವಣೆಗಳು, ವ್ಯಕ್ತಿ ಮತ್ತು ಸಮುದಾಯ ಸಂಬಂಧ ಕುರಿತಂತೆ ಆದ ಬದಲಾವಣೆಗಳು ಮುಕ್ತ ಮಾರುಕಟ್ಟೆ ಕಲ್ಪನೆಗೆ ನೀರೆರೆದು ಬೆಳೆಸಿವೆ. ವ್ಯಕ್ತಿ ಪ್ರಾಧಾನ್ಯತೆಯನ್ನು ಪ್ರತಿಪಾದಿಸುವ ರಾಜಕೀಯ ತತ್ತ್ವ ಲಿಬರಲಿಸಂ ಕೂಡ ಮುಕ್ತ ಮಾರುಕಟ್ಟೆಗೆ ಬೇಕಾಗಿರುವ ರಾಜಕೀಯ ವಾತಾವರಣ ಸೃಷ್ಟಿಸಿದೆ. ಡಾರ್ವಿನನ ವಿಕಾಸವಾದ ಕೂಡ ಮುಕ್ತ ಮಾರುಕಟ್ಟೆ ನೀತಿಯ ಸಮರ್ಥನೆಗೆ ಬಳಕೆಯಾಗಿದೆ.

ಎನ್‌ಲೈಟನ್‌ಮೆಂಟ್ ಚಳವಳಿ ಮುನ್ನ ಪ್ರಪಂಚವನ್ನು, ಮಾನವ ಸೃಷ್ಟಿಯನ್ನು, ಸಮಾಜವನ್ನು, ವ್ಯಕ್ತಿ, ಸಮಾಜ ಸಂಬಂಧವನ್ನು, ದೇವರ ಕಲ್ಪನೆಯನ್ನು ಎಲ್ಲವನ್ನು ಚರ್ಚ್ ವಿವರಿಸುತಿತ್ತು. ಅಂದರೆ ಚರ್ಚ್ ಕೇವಲ ದೇವರ ಪೂಜಾಸ್ಥಾನ ಮಾತ್ರವಲ್ಲ ಜ್ಞಾನದ ಉತ್ಪಾದನೆ ಮತ್ತು ಪಸರಿಸುವಿಕೆಯ ಕೇಂದ್ರವೂ ಆಗಿತ್ತು. ಉಳಿಗಮಾನ್ಯ ವ್ಯವಸ್ಥೆಯ ಆರ್ಥಿಕ ಚಟುವಟಿಕೆಗಳನ್ನು ನಿರ್ವಹಿಸುವ ನಿಯಮಗಳನ್ನು ರೂಪಿಸುವಲ್ಲಿ ಚರ್ಚ್ ಪಾತ್ರ ಮಹತ್ವದಾಗಿತ್ತು. ಮನುಷ್ಯರು, ಭೂಮಿ, ಪ್ರಕೃತಿ ಎಲ್ಲವೂ ದೇವರ ಸೃಷ್ಟಿ. ದುಡಿಮೆಯನ್ನು ದೇವರು ಕೊಟ್ಟ ಶಿಕ್ಷೆಯೆಂದು ತಿಳಿಯಲಾಗಿತ್ತು. ದೇವರ ಅಪ್ಪಣೆ ಮೀರಿ ಆ್ಯಡಂ ಈವ್ ಜೊತೆ ಸೇರಿದಕ್ಕೆ ಕೆಲಸದ ಶಿಕ್ಷೆಯನ್ನು ಕೊಟ್ಟಿದ್ದಾರೆಂದು ನಂಬಲಾಗಿತ್ತು. ನಂತರದ ದಿನಗಳಲ್ಲಿ ಕೆಲಸವನ್ನು ಶಿಕ್ಷೆಯೆಂದು ತಿಳಿಯುವ ಬದಲು ಆ್ಯಡಂ ಮಾಡಿದ ತಪ್ಪಿಗೆ ತೆರುವ ದಂಡವೆಂದು ತಿಳಿಯಲಾಯಿತು. ಕಾಲಕ್ರಮೇಣ ಕೆಲಸವನ್ನು ಶಿಕ್ಷೆ ಅಥವಾ ದಂಡದ ರೂಪದಲ್ಲಿ ನೋಡುವ ಬದಲಾಯಿತು (ಸ್ಟೀಫನ್ ವಲ್ಯಾಂಡ್, ೧೯೬೭). ಹದಿನಾರನೇ ಶತಮಾನದ ಪ್ರೊಟೆಸ್ಟೆಂಟ್ ಚಳವಳಿಯೊಂದಿಗೆ ಈ ಬದಲಾವಣೆ ಇನ್ನೂ ಹೆಚ್ಚು ಸ್ಪಷ್ಟ ರೂಪ ಪಡೆಯಿತು.

ಕಾಲ್ವಿನಿಸ್ಟ್‌ಗಳು ಪ್ರೊಟೆಸ್ಟೆಂಟ್‌ರ ಒಂದು ಗುಂಪು. ಇವರು ಕೆಲಸವನ್ನು ದೇವರ ಪೂಜೆಯೆಂದು ನಿರ್ವಚಿಸಿದರು. ಕೆಲವರನ್ನು ಕೆಲವು ಕೆಲಸಕ್ಕಾಗಿ ದೇವರೇ ಆಯ್ಕೆ ಮಾಡುತ್ತಾರೆ. ದೇವರಿಂದ ಆಯ್ಕೆಗೊಂಡವರು ತಮ್ಮ ಕೆಲಸವನ್ನು ಮೋಸ, ವಂಚನೆಯಿಲ್ಲದೆ ತುಂಬಾ ಶ್ರದ್ಧೆಯಿಂದ, ಶಿಸ್ತಿನಿಂದ ಮತ್ತು ಪರಿಶ್ರಮದಿಂದ ಮಾಡುವುದು ದೇವರ ಪೂಜೆಯೆನ್ನುವ ನಂಬಿಕೆ ಬೆಳೆಯಿತು (ವೇಬರ್, ೧೯೯೨). ಹೀಗೆ ಪಾಪ ಪ್ರಜ್ಞೆಯಿಂದ ಮಾಡುವ ಕೆಲಸ ಸಮಾಜ

ಸೇವೆಯ ಮತ್ತು ದೇವರ ಪೂಜೆಯ ರೂಪ ಪಡೆಯಿತು. ಕರಕುಶಲ ಕೆಲಸಗಾರರು, ಕಮ್ಮಾರ, ಕುಂಬಾರ, ನೇಕಾರ, ಗಾಣಿಗ ಮುಂತಾದವರು ಈ ಬಗೆಯ ನಂಬಿಕೆಗಳನ್ನು ಬೆಳೆಸಿದವರಲ್ಲಿ ಪ್ರಮುಖರು. ಶ್ರಮ, ಸಂಪತ್ತು ಮತ್ತು ಉತ್ಪಾದಕತೆ ಬಗೆಗಿನ ಇಂತಹ ನಂಬಿಕೆಗಳು ಉತ್ಪಾದನೆಯಲ್ಲಿ ತೊಡಗಿಸಿಕೊಂಡವರಲ್ಲಿ ತಾವು ಮೌಲ್ಯ ಉತ್ಪಾದಿಸುತ್ತಿದ್ದೇವೆ ಎನ್ನುವ ನಂಬಿಕೆಯನ್ನು ಹುಟ್ಟು ಹಾಕಿದೆ. ನೇಯುವ ಮಗ್ಗದಲ್ಲಿ ಹಾದು ಹೋಗುವ ಪ್ರತಿ ನೂಲು, ಹೊಲಿಗೆ ಮೆಶಿನ್ ಮೂಲಕ ಹಾದು ಹೋಗುವ ಪ್ರತಿ ಇಂಚು ಬಟ್ಟೆ ತಾವು ಪ್ರತಿ ನಿಮಿಶ ಮೌಲ್ಯವನ್ನು ವೃದ್ಧಿಸುತ್ತದೆ ಎನ್ನುವ ನಂಬಿಕೆಯನ್ನು ನೇಕಾರರಲ್ಲಿ ಬೆಳೆಸಿತು. ಹೆಚ್ಚು ದುಡಿಮೆ, ಹೆಚ್ಚು ಬಟ್ಟೆ ಉತ್ಪಾದನೆ ಮತ್ತು ಹೆಚ್ಚು ಮೌಲ್ಯ ವರ್ಧನೆ ಎನ್ನುವ ಗ್ರಹಿಕೆ ಲೇಬರ್ ಥಿಯರಿ ಆಫ್ ವ್ಯಾಲ್ಯೂ ಕಟ್ಟುವಲ್ಲಿ ದೊಡ್ಡ ಪಾತ್ರ ವಹಿಸಿದೆ. (ರಿಚರ್ಡ್ ಪೀಟ್ ಇಲೈನ್ ಹಾರ್ಟ್‌ವಿಕ್, ೨೦೦೫)

ಕ್ಯಾಥೋಲಿಕ್ ಧರ್ಮ ಖಾಸಗಿ ಆಸ್ತಿಯ ಪರಿಕಲ್ಪನೆಯನ್ನು, ಬಡ್ಡಿ ತೆಗೆದುಕೊಳ್ಳುವುದನ್ನು ಮತ್ತು ಲಾಭ ಗಳಿಸುವ ಉದ್ದೇಶದಿಂದ ವಸ್ತುಗಳ ವಿನಿಮಯ ನಡೆಸುವುದನ್ನು ವಿರೋಧಿಸುತಿತ್ತು. ಇಂತಹ ಪರಿಸರವನ್ನು ಬದಲಾಯಿಸುವ ಕೆಲಸವನ್ನು ಅರ್ಥಶಾಸ್ತ್ರಜ್ಞರು ಮಾಡಿದಲ್ಲ. ಅವರ ಬದಲು ಧಾರ್ಮಿಕ ಕ್ಷೇತ್ರದ ಪಂಡಿತರು ಮಾಡಿದ್ದಾರೆ. ಅವರಲ್ಲಿ ಸೈಂಟ್ ಥಾಮಸ್ ಅಕ್ವಿನಾಸ್ ಪ್ರಮುಖ (ಲಾರಿ ಟಾಡ್, ೧೯೮೭). ಭೂಮಿ ಮತ್ತು ಇತರ ಸಂಪತ್ತುಗಳು ಸಂಪೂರ್ಣವಾಗಿ ಸಮುದಾಯದ ಒಡೆತನದಲ್ಲಿರುವ ಸಂದರ್ಭದಲ್ಲಿ ಅಲ್ಪಸ್ವಲ್ಪ ಖಾಸಗಿ ಒಡೆತನ ಸಮಸ್ಯೆಯಲ್ಲವೆಂದು ಒಪ್ಪಿಸುವುದು ಕಷ್ಟದ ಕೆಲಸವಾಗಿತ್ತು. ಹದಿಮೂರನೇ ಶತಮಾನದಲ್ಲಿ ಗ್ರೀಕ್ ತತ್ತ್ವಜ್ಞಾನಿ ಅರಿಸ್ಟೋಟಲ್‌ನ ಆಲೋಚನೆಗಳನ್ನು ಪಶ್ಚಿಮ ಯುರೋಪಿಗೆ ಪರಿಚಯವಾದ ನಂತರ ಆಕ್ವಿನಾಸ್ ನಿಧಾನವಾಗಿ ಖಾಸಗಿ ಆಸ್ತಿ ಹೊಂದುವುದು ಪ್ರಕೃತಿ ನಿಯಮಕ್ಕೆ ವಿರುದ್ಧವಲ್ಲವೆಂದು ವಾದಿಸಲು ಶುರು ಮಾಡಿದ. ಆಕ್ವಿನಾಸ್ ವಾದ ಸರಳವಾಗಿತ್ತು. ಪ್ರಕೃತಿ ನಿಯಮ ಪ್ರಕಾರ ಮನುಷ್ಯರೆಲ್ಲ ಹುಟ್ಟುವಾಗ ಬತ್ತಲೆಯಾಗಿ ಇರುತ್ತಾರೆ. ಏಕೆಂದರೆ ಪ್ರಕೃತಿ ಆತನಿಗೆ ಬಟ್ಟೆ ನೀಡಿಲ್ಲ. ಹಾಗೆಂದು ಆತ ಜೀವನಪೂರ್ತಿ ಬತ್ತಲೆಯಾಗಿರುವುದಿಲ್ಲ. ಪ್ರಕೃತಿಯಲ್ಲಿರುವುದನ್ನು ಬಳಸಿಕೊಂಡು ಆತನೇ ಬಟ್ಟೆಯನ್ನು ಸಂಶೋಧಿಸಿಕೊಂಡಿದ್ದಾನೆ. ಇದೇ ರೀತಿ ಭೂಮಿ ಸಮುದಾಯದ ಆಸ್ತಿ ಎನ್ನುವುದರಲ್ಲಿ ಯಾವುದೇ ಸಂದೇಹವೇ ಇಲ್ಲ. ಇದರಲ್ಲಿ ಸ್ವಲ್ಪ ಭೂಮಿಯನ್ನು ಖಾಸಗಿ ಉದ್ದೇಶಕ್ಕೆ ಬಳಸುವುದು ಪ್ರಕೃತಿ ನಿಯಮಕ್ಕೆ ವಿರುದ್ಧವಾಗುವುದಿಲ್ಲವೆಂದು ಆತ ವಾದಿಸಿದ. ಖಾಸಗಿ ಆಸ್ತಿಯನ್ನು ಸಮುದಾಯದ ನಿಯಮಕ್ಕೆ ಒಳಪಡಿಸುವುದರಿಂದ ಅದರ ದುರ್ಬಳಕೆಯನ್ನು ಅಥವಾ ಸಮುದಾಯೇತರ ಉದ್ದೇಶಗಳ ಬಳಕೆಯನ್ನು ತಪ್ಪಿಸಬಹುದೆಂದು ವಾದಿಸಿದ (ಹೆರಿ ಲ್ಯಾಂಡ್ರೆತ್ ಅಂಡ್ ಡೇವಿಡ್ ಕೊಲಂಡರ್, ೧೯೮೫).

ಇದೇ ರೀತಿಯಲ್ಲಿ ವಸ್ತುಗಳ ವಿನಿಮಯದಿಂದ ಲಾಭ ಗಳಿಸುವುದು ಅಥವಾ ಖರೀದಿಸಿದಕ್ಕಿಂತ ಹೆಚ್ಚಿನ ಬೆಲೆಗೆ ಮಾರುವುದಕ್ಕೂ ಚರ್ಚ್ ಒಪ್ಪಿಗೆ ಇರಲಿಲ್ಲ. ಇಲ್ಲೂ ಅರಿಸ್ಟಾಟಲ್ ಚಿಂತನೆಗಳನ್ನು ಅಕ್ವಿನಾಸ್ ಬಳಸಿಕೊಂಡು ಲಾಭ ಗಳಿಸುವುದನ್ನು ಸಮರ್ಥಿಸಿಕೊಂಡಿದ್ದಾನೆ. ಎರಡು ಪಕ್ಷಗಳು ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುವ ದೃಷ್ಟಿಯಿಂದ ಮಾರುಕಟ್ಟೆಯಲ್ಲಿ ವಸ್ತುಗಳನ್ನು ವಿನಿಮಯ ಮಾಡಿಕೊಳ್ಳುವುದು ಪ್ರಕೃತಿ ನಿಯಮಕ್ಕೆ ವಿರುದ್ಧವಲ್ಲ. ಸಮಾಜಸೇವೆಯ ಉದ್ದೇಶದಿಂದ ಮತ್ತು ನ್ಯಾಯಯುತ ಬೆಲೆಗೆ ಮಾರುಕಟ್ಟೆಯಲ್ಲಿ ಮಾರಿ ಲಾಭ ಗಳಿಸುವ ಉದ್ದೇಶದಿಂದ ವಸ್ತುಗಳನ್ನು ಉತ್ಪಾದಿಸುವುದು ಅನೈತಿಕವಲ್ಲ ಎನ್ನುವುದು ಅಕ್ವಿನಾಸ್ ಮತ್ತೊಂದು ವಾದ. ವ್ಯಾಪಾರಿ ತನ್ನ ಸ್ವಂತ ಬದುಕಿಗಾಗಿ, ಸಮಾಜ ಸೇವೆಗಾಗಿ ಅಥವಾ ಸಾರ್ವಜನಿಕ ಹಿತಕ್ಕಾಗಿ ಮತ್ತು ನ್ಯಾಯಯುತ ಬೆಲೆಗೆ ವ್ಯಾಪಾರ ನಡೆಸಿದರೆ ತಪ್ಪಿಲ್ಲ. ಜೊತೆಗೆ ಮಾರುವವರು ಮತ್ತು ಖರೀದಿಸುವವರು ಇಬ್ಬರಿಗೂ ಲಾಭವಾಗುವ ವ್ಯಾಪಾರ ನಡೆಸುವುದು ಅಪರಾಧವಲ್ಲವೆಂದು ಅಕ್ವಿನಾಸ್ ವ್ಯಾಪಾರವನ್ನು ಸಮರ್ಥಿಸುತ್ತಾನೆ. ಇಲ್ಲಿ ನ್ಯಾಯಯುತ ಬೆಲೆ ಕುರಿತು ಹಿಂದಿನಿಂದಲೂ ತಕರಾರು ಇತ್ತು. ಕೆಲವರ ಪ್ರಕಾರ ವಸ್ತುವನ್ನು ಸಿದ್ದಪಡಿಸಲು ತಗಲುವ ಕೆಲಸದ ಅವಧಿಯಿಂದ ಜಸ್ಟ್ ಪ್ರೈಸನ್ನು ತೀರ್ಮಾನಿಸಲಾಗುತ್ತಿತ್ತು. ಇನ್ನು ಕೆಲವರ ಪ್ರಕಾರ ಜನರ ಅಗತ್ಯಗಳನ್ನು ಪೂರೈಸುವ ವಸ್ತುವಿನ ಶಕ್ತಿಯಿಂದ ಜಸ್ಟ್ ಪ್ರೈಸನ್ನು ತೀರ್ಮಾನಿಸಲಾಗುತ್ತಿತ್ತು. ಮತ್ತೆ ಕೆಲವರ ಪ್ರಕಾರ ವಸ್ತುವಿನ ಉತ್ಪಾದನೆಗೆ ಕೇವಲ ಶ್ರಮ ಸಾಕಾಗುವುದಿಲ್ಲ. ಶ್ರಮದ ಜೊತೆಗೆ ಭೂಮಿ, ಕಚ್ಚಾ ಸಾಮಾಗ್ರಿಗಳು ಬೇಕು. ಇವೆಲ್ಲವೂ ವಸ್ತುವಿನ ವೆಚ್ಚದ ಭಾಗವಾಗುತ್ತವೆ ಮತ್ತು ಬೆಲೆಯ ಭಾಗವೂ ಆಗುತ್ತದೆ. ಈ ಚರ್ಚೆ ಏನೇ ಇರಲಿ ಇವೆಲ್ಲವೂ ಮುಂದಿನ ದಿನಗಳಲ್ಲಿ ರಿಕಾರ್ಡೋ, ಕಾರ್ಲ್ ಮಾರ್ಕ್ಸ್ ಮತ್ತು ಇತರ ಕ್ಲಾಸಿಕಲ್ ಮತ್ತು ನಿಯೋ ಕ್ಲಾಸಿಕಲ್

ಎಕನಾಮಿಸ್ಟ್‌ಗಳು ಥಿಯರಿ ಆಫ್ ವ್ಯಾಲ್ಯೂಗಳನ್ನು ಕಟ್ಟುವಾಗ ನೆರವಿಗೆ ಬಂದಿವೆ.

ಮೇಲಿನ ವಿಜ್ಞಾನ ಮತ್ತು ಧರ್ಮಗಳ ಸಂಘರ್ಷಗಳ ಜೊತೆಗೆ ಲಿಬರಲಿಸಂನ ಬೆಳವಣಿಗೆ ಕೂಡ ಮುಕ್ತ ಮಾರುಕಟ್ಟೆ ಕಲ್ಪನೆಗಳು ಬೇರೂರಲು ಅವಶ್ಯವಿದ್ದ ವಾತಾವರಣ ಸೃಷ್ಟಿಸಿದೆ. ಜಾನ್ ಲೋಕೆ, ಥಾಮಸ್ ಹಾಬ್ಸ್, ಡೇವಿಡ್ ಹ್ಯೂಮ್ ಇವರೆಲ್ಲ ಪ್ರಮುಖ ಲಿಬರಲ್ ಚಿಂತಕರು. ಭೂಮಿ ದೇವರ ಕೊಡುಗೆ ಎನ್ನುವ ಚರ್ಚ್‌ನ ನಂಬಿಕೆಯನ್ನು ಜಾನ್ ಲೋಕೆ ಪ್ರಶ್ನಿಸಲಿಲ್ಲ. ಇದೇ ರೀತಿ ಮನುಷ್ಯ ಜೀವ ಕೂಡ ದೇವರ ಸೃಷ್ಟಿಯೇ. ಇಂತಹ ದೇವರ ಸೃಷ್ಟಿ ಜೀವಂತ ಇರಬೇಕಾದರೆ ಆಹಾರ ಬೇಕು. ಜೊತೆಗೆ ಮನುಷ್ಯನಿಗೆ ತನ್ನ ಶ್ರಮದ ಮೇಲೆ ಸಂಪೂರ್ಣ ಹಕ್ಕಿದೆ. ಈ ಶ್ರಮವನ್ನು ಬಳಸಿಕೊಂಡು ತನ್ನ ಜೀವನಕ್ಕೆ ಅವಶ್ಯವಿರುವ ಊಟ, ವಸತಿ, ಬಟ್ಟೆಬರೆಗಳನ್ನು ಭೂಮಿಯಿಂದ ಪಡೆಯುವುದು ಪ್ರಕೃತಿ ನಿಯಮಕ್ಕೆ ವಿರುದ್ಧವಲ್ಲವೆನ್ನುವುದು ಲೋಕೆ ವಾದ. ತನ್ನ ಶ್ರಮದ ಮೇಲಿನ ಹಕ್ಕು ಮತ್ತು ಅದನ್ನು ಬಳಸಿಕೊಂಡು ತನ್ನ ಜೀವನಕ್ಕೆ ಅವಶ್ಯವಾದವನ್ನು ಭೂಮಿಯಿಂದ ಪಡೆಯುವ ಹಕ್ಕು ಇವೆಲ್ಲವೂ ವ್ಯಕ್ತಿ ಹಕ್ಕುಗಳ ಕಲ್ಪನೆ ಮತ್ತು ಖಾಸಗಿ ಆಸ್ತಿಯ ಕಲ್ಪನೆಗಳನ್ನು ಬೆಳೆಸಲು ಪೂರಕವಾದ ವಾದಗಳಾದವು. ಶ್ರಮ ಸಂಪೂರ್ಣವಾಗಿ ವ್ಯಕ್ತಿಯ ಆಸ್ತಿಯಾಗಿರುವುದರಿಂದ ವ್ಯಕ್ತಿ ಅದನ್ನು ತನಗೆ ಇಷ್ಟವಾದ ರೀತಿಯಲ್ಲಿ ಬಳಸುವುದು ತಪ್ಪಲ್ಲವೆಂದು ಲೋಕೆ ವಾದಿಸಿದ. ಈ ವಾದ ಶ್ರಮದ ಮಾರಾಟಕ್ಕೆ ಮತ್ತು ಖರೀದಿಸಿದಾತ ಶ್ರಮವನ್ನು ಆತನ ಉದ್ದೇಶಕ್ಕೆ ಬಳಸಲು ಪೂರಕವಾದ ಪರಿಸರ ಸೃಷ್ಟಿಸಿದೆ. (ಮೆಕ್‌ಪರ್ಸನ್, ೧೯೬೨). ಅತಿಯಾದ ಸ್ವಾರ್ಥ, ತನ್ನ ಅಗತ್ಯಗಕ್ಕಿಂತ ಹೆಚ್ಚು ಶೇಖರಿಸಿಟ್ಟುಕೊಳ್ಳುವುದು, ಮತ್ತೊಬ್ಬರ ಬೇಕು ಬೇಡಗಳನ್ನು ಪರಿಗಣಿಸದಿರುವುದು ಮುಂತಾದ ಮನುಷ್ಯರ ಗುಣಗಳು ಡೇವಿಡ್ ಹ್ಯೂಮ್ ಪ್ರಕಾರ ಸಮಾಜವನ್ನು ನಾಶ ಮಾಡುವ ಗುಣಗಳು. ಸ್ವಾರ್ಥವನ್ನು ಮುಕ್ತವಾಗಿ ಬಿಡುವ ಬದಲು ಅದರ ಮೇಲೆ ಕಡಿವಾಣ ಹೇರುವುದು ಸ್ವಾರ್ಥವನ್ನು ತೃಪ್ತಿಗೊಳಿಸುವ ಉತ್ತಮ ಮಾರ್ಗವೆಂದು ಹ್ಯೂಮ್ ವಾದಿಸಿದ (ಡೇವಿಡ್ ಹ್ಯೂಮ್, ೧೯೮೭). ಇದೇ ರೀತಿಯಲ್ಲಿ ವ್ಯಕ್ತಿ ತನ್ನ ವ್ಯಕ್ತಿಗತ ಬೇಕುಬೇಡಗಳನ್ನು ಸಮಾಜದಿಂದ ದೂರ ಇರುವುದಕ್ಕಿಂತ ಚೆನ್ನಾಗಿ ಸಮಾಜದೊಂದಿಗೆ ಬದುಕುವುದರಿಂದ ಪೂರೈಸಿಕೊಳ್ಳಬಹುದೆಂದು ಹ್ಯೂಮ್ ವಾದಿಸಿದ.

ಡೇವಿಡ್ ಹ್ಯೂಮ್ ವಾದ ಮಾರುಕಟ್ಟೆ ಮೇಲಿನ ಕ್ಲಾಸಿನಕಲ್ ಎಕನಾಮಿಸ್ಟ್‌ಗಳ ಥಿಯರಿಗೆ ಸಾಕಷ್ಟು ಸಂಪನ್ಮೂಲ ಒದಗಿಸಿದೆ. ಸ್ವಾರ್ಥ ಮತ್ತು ಸಾಮಾಜಿಕ ಜವಾಬ್ದಾರಿ ಜೊತೆಜೊತೆಗಿರಬಹುದು ಎನ್ನುವುದನ್ನು ಹ್ಯೂಮ್‌ನ ವಾದ ಸೂಚಿಸುತ್ತದೆ. ಹ್ಯೂಮ್‌ನ ಮೇಲಿನ ವಾದ ಮತ್ತು ಆ್ಯಡಂ ಸ್ಮಿಥ್ ಮಂಡಿಸಿದ ಬುಚ್ಚರ್ ಮಾಂಸ ಮಾರುವುದು ಅಥವಾ ಬೇಕರ್ ಬ್ರೆಡ್ ಮಾರುವುದು ಸಮಾಜ ಉದ್ಧಾರ ಮಾಡಲು ಅಲ್ಲ ತಮ್ಮ ಸ್ವಾರ್ಥ ಸಾಧನೆಗಾಗಿ ಎನ್ನುವ ವಾದಗಳೊಂದಿಗೆ ಸಾಕಷ್ಟು ಹೋಲಿಕೆ ಇದೆ. ಮತ್ತೊಬ್ಬರ ಸ್ವಾರ್ಥವನ್ನು ತೃಪ್ತಿ ಪಡಿಸುವ ಮೂಲಕ ನಮ್ಮ ಸ್ವಾರ್ಥವನ್ನು ತೃಪ್ತಿಪಡಿಸಿಕೊಳ್ಳುವುದು ವಿನಿಮಯದ ಮೂಲ ಸೂತ್ರ ಎನ್ನುವ ಸ್ಮಿಥ್‌ನ ವಾದ ಕೂಡ ಸ್ವಾರ್ಥ ಮತ್ತು ಸಾಮಾಜಿಕ ಜವಾಬ್ದಾರಿಗಳು ಜೊತೆಗಿರುವುದನ್ನು ತೋರಿಸುತ್ತದೆ. ಥಾಮಸ್ ಹಾಬ್ಸ್‌ನ ವಿವೇಚನೆಯ ಸ್ವಾರ್ಥದ ಕಲ್ಪನೆ ಮತ್ತು ಹ್ಯೂಮ್‌ನ ಸ್ವಾರ್ಥ ಮತ್ತು ಸಾಮಾಜಿಕ ಜವಾಬ್ದಾರಿಗಳು ಜೊತೆಗಿರಬಹುದೆನ್ನುವ ವಾದಗಳು ಮಾರುಕಟ್ಟೆ ಎಕನಾಮಿಗೆ ಅವಶ್ಯವಿರುವ ವ್ಯಕ್ತಿಯನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ (ಸ್ಕಿನರ್, ೧೯೯೨). ಮಾರುಕಟ್ಟೆಯಲ್ಲಿ ವ್ಯವಹರಿಸುವ ವ್ಯಕ್ತಿ ತನ್ನ ಚರಿತ್ರೆಯಿಂದ ಬಂದ ಬಂಧನಗಳಿಂದ ಮುಕ್ತನಾಗಿರುತ್ತಾನೆ. ಮಾರುಕಟ್ಟೆಯಲ್ಲಿ ವ್ಯಕ್ತಿಯ ಲಿಂಗ, ಜಾತಿ, ಧರ್ಮಗಳು ಮುಖ್ಯವಾಗುವುದಿಲ್ಲ. ವ್ಯಕ್ತಿಯ ಬೇಕು ಬೇಡಗಳು ಮತ್ತು ಅವನ್ನು ಪೂರೈಸುವ ಸರಕುಸೇವೆಗಳು ಮಾತ್ರ ಮುಖ್ಯ. ಹೀಗೆ ವ್ಯಕ್ತಿವಾದ ಮತ್ತು ವ್ಯಕ್ತಿ ಸ್ವಾಯತ್ತತೆಗಳು ಲಿಬರಲಿಸಂನ ಬಹುಮುಖ್ಯ ಅಂಶಗಳು.

ವ್ಯಕ್ತಿ ಸಮಾಜದ ಕೇಂದ್ರ ಮತ್ತು ವ್ಯಕ್ತಿ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಯ ಬುನಾದಿ ಮೇಲೆ ಕಟ್ಟಿಕೊಳ್ಳುವ ಸಮಾಜ ಉತ್ತಮ ಸಮಾಜವೆಂದು ಲಿಬರಲಿಸಂ ಹೇಳುತ್ತದೆ. ವ್ಯಕ್ತಿಗಳು ಅವರವರ ಶಕ್ತಿಯನುಸಾರ ಬೆಳೆಯಲು ಪೂರಕವಾದ ವಾತಾವರಣ ಸೃಷ್ಟಿಸುವುದು ಸಮಾಜದ ಉದ್ದೇಶವಾಗಿರಬೇಕು. ವ್ಯಕ್ತಿಗಳಿಗೆ ಅವರ ಅಭಿವೃದ್ಧಿಯನ್ನು ಸಾಧಿಸಲು ಬೇಕಾದಷ್ಟು ಸ್ವಾತಂತ್ರ್ಯ ನೀಡುವುದು ಈ ಉದ್ದೇಶ ಸಾಧನೆಗೆ ಉತ್ತಮ ಮಾರ್ಗವೆನ್ನುವುದು ಲಿಬರಲಿಸಂನ ವಾದ. ಜಾನ್ ಲೋಕೆ ಪ್ರಕಾರ ವ್ಯಕ್ತಿಗೆ ಸ್ವಾತಂತ್ರ್ಯ ನೀಡುವ ಕಲ್ಪನೆಯೇ

ಸರಿಯಲ್ಲ. ಏಕೆಂದರೆ ವ್ಯಕ್ತಿ ಹುಟ್ಟಿನಿಂದಲೇ ಸ್ವತಂತ್ರ. ಮಾನವ ಹಕ್ಕುಗಳು ಹುಟ್ಟಿನಿಂದಲೇ ಬರುವುದರಿಂದ ಯಾವುದೇ ಸಮಾಜದ ಅಥವಾ ರಾಜ್ಯ ಅವುಗಳನ್ನು ನೀಡುವ ಅಥವಾ ನಿರಾಕರಿಸುವ ಪ್ರಶ್ನೆಯೇ ಹುಟ್ಟುವುದಿಲ್ಲ ಎನ್ನುವ ವಾದವನ್ನು ಲಿಬರಲಿಸಂ ಮುಂದಿಟ್ಟಿದೆ. ಪ್ರತಿಯೊಬ್ಬರೂ ವಿವೇಚನೆಯುಳ್ಳವರು ಮತ್ತು ಪ್ರತಿಯೊಬ್ಬರಿಗೂ ಅವರವರ ಬೇಕು ಬೇಡಗಳ ಬಗ್ಗೆ ಖಚಿತತೆ ಇದೆ. ಅವರ ಅಭಿವೃದ್ಧಿಗೆ ಪೂರಕವಾಗವು ಮಾರ್ಗವನ್ನೇ ಅವರವರೇ ಆಯ್ಕೆ ಮಾಡಿಕೊಳ್ಳುತ್ತಾರೆ. ಆದುದರಿಂದ ಸರಕಾರ ಅಥವಾ ಇನ್ನಾವುದೇ ಹೊರಗಿನ ಮೂಲಗಳು ಅವರ ಅಭಿವೃದ್ಧಿ ಬಗ್ಗೆ ಚಿಂತಿಸುವು ಅಗತ್ಯವಿಲ್ಲ. ಹಾಗೆಂದು ಸರಕಾರಕ್ಕೆ ಲಿಬರಲಿಸಂಲ್ಲಿ ಪಾತ್ರವೇ ಇಲ್ಲವೆಂದಲ್ಲ. ವ್ಯಕ್ತಿಗಳ ಅಭಿವೃದ್ಧಿಗೆ ಪೂರಕವಾದ ಪರಿಸರ ಸೃಷ್ಟಿಸುವುದು ಮತ್ತು ವ್ಯಕ್ತಿಗಳ ಹಕ್ಕಿನ ಉಲ್ಲಂಘನೆಯಾಗದಂತೆ ನೋಡಿಕೊಳ್ಳುವುದು ಸರಕಾರದ ಜವಾಬ್ದಾರಿ. ಇವೆಲ್ಲ ಲಿಬರಲಿಸಂ ಮುಂದಕ್ಕೆ ತಂದ ವಾದಗಳು. ಈ ಎಲ್ಲ ಸಾಮಾಜಿಕ, ಸಾಂಸ್ಕೃತಿಕ ಬದಲಾವಣೆಗಳು ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿಗೆ ಹಿನ್ನೆಲೆಯಾಗಿ ಕೆಲಸ ಮಾಡಿವೆ.

**ಭಾರತದ ಕತೆ:**

ಪಶ್ಚಿಮದ ಇಂತಹ ಪರಿಸರಕ್ಕೂ ಭಾರತದಲ್ಲಿ ಮುಕ್ತ ಮಾರುಕಟ್ಟೆ ಅರ್ಥಿಕ ನೀತಿಗಳು ಜಾರಿಯಲ್ಲಿರುವ ಸಂದರ್ಭದ ಸಾಮಾಜಿಕ, ಸಾಂಸ್ಕೃತಿಕ ಪರಿಸರಕ್ಕೂ ಏನಾದರೂ ಸಂಬಂಧ ಇದೆಯೇ? ಭಾರತದಲ್ಲಿ ಎಲ್ಲ ಒತ್ತು ಆರ್ಥಿಕ ಕ್ಷೇತ್ರದ ನಿಯಮಗಳನ್ನು ಸಡಿಲುಸುವುದರ ಮೇಲಿದೆ. ಆರ್ಥಿಕ ಉದಾರೀಕರಣ ಬಯಸುವ ವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಪೂರ್ಣ ವಿರುದ್ಧ ಇರುವ ಸಾಮಾಜಿಕ, ಸಾಂಸ್ಕೃತಿಕ ಪರಿಸರ ನಮ್ಮಲ್ಲಿವೆ. ಹದಿನೆಂಟನೇ ಶತಮಾನದ ಪಶ್ಚಿಮ ಯುರೋಪಿನಲ್ಲಿದ್ದಂತೆ ನಮ್ಮಲ್ಲೂ ಬಹುತೇಕ ಮತಮಂದಿರುಗಳು ಇಂದು ಬಲಾಢ್ಯರ ಪರವೇ ಇರುವುದು. ನಮ್ಮಲ್ಲಿ ಜಾತಿಗೊಂದು, ಧರ್ಮಕ್ಕೊಂದು ಮತಮಂದಿರಗಳಿವೆ ಮತ್ತು ಪ್ರತಿ ಜಾತಿ, ಧರ್ಮದ ಮತಮಂದಿರುಗಳು ಆಯಾಯ ಜಾತಿ, ಧರ್ಮದ ಬಲಾಢ್ಯರಪರ ಇವೆ. ಆದರೆ ಇವುಗಳ ಬಲಾಢ್ಯಪರ ಧೋರಣೆ ಬಿಡಿಬಿಡಿಯಾಗಿರುವುದರಿಂದ ಇಡಿಯಾದ ಬಲಾಢ್ಯಪರ ಧೋರಣೆ ಗೋಚರಿಸುತ್ತಿಲ್ಲ. ಈ ಮತಮಂದಿರುಗಳು ಸಾಂಸ್ಕೃತಿಕ ಸ್ವಾಯತ್ತತೆಯ ಹೆಸರಲ್ಲಿ ವ್ಯಕ್ತಿ ಸ್ವಾತಂತ್ರ್ಯವನ್ನು ನಿರಾಕರಿಸುವ ಹಲವು ನಿಲುವುಗಳನ್ನು ಪ್ರತಿಪಾದಿಸುತ್ತಿವೆ.

ಪಶ್ಚಿಮದಲ್ಲಿ ವಿಜ್ಞಾನ ಮುಂಚೂಣಿಗೆ ಬರುವುದರೊಂದಿಗೆ ಧರ್ಮದ ಪ್ರಾಬಲ್ಯವನ್ನು ಪ್ರಶ್ನಿಸುವ ಪ್ರವೃತ್ತಿ ಬೆಳೆಯಿತು. ನಮ್ಮಲ್ಲೂ ದೊಡ್ಡ ಸಂಖ್ಯೆಯಲ್ಲಿ ವಿಜ್ಞಾನಿಗಳಿದ್ದಾರೆ ಮತ್ತು ವಿಜ್ಞಾನವೂ ಇದೆ. ಆದರೆ ಮತಮಂದಿರಗಳ ಬಲಾಢ್ಯಪರ ಧೋರಣೆಯನ್ನು ಪ್ರಶ್ನಿಸುವ ಪ್ರವೃತ್ತಿ ಬೆಳೆಯಲೇ ಇಲ್ಲ. ಇದಕ್ಕೆ ಒಂದೆರಡು ಕಾರಣಗಳಿವೆ. ಒಂದು, ಪಶ್ಚಿಮದ ಸಾಂಸ್ಕೃತಿಕ ದಾಳಿಯಿಂದ ನಮ್ಮ ಸಂಸ್ಕೃತಿಯನ್ನು ರಕ್ಷಿಸುವ ಚಳವಳಿಗಳು ಬೆಳೆದವು. ಇವು ಮತಮಂದಿರುಗಳ ಧೋರಣೆಗಳನ್ನು ಪ್ರಶ್ನಿಸುವ ಜ್ಞಾನವಿಜ್ಞಾನಗಳನ್ನು ಪ್ರಶ್ನಿಸುವ ಪ್ರವೃತ್ತಿಯನ್ನು ಬೆಳೆಸಿದವು. ಮತಮಂದಿರಗಳ ಬಲಾಢ್ಯಪರ ಧೋರಣೆಯನ್ನು ವಿಮರ್ಶಿಸುವ ಸಿನಿಮಾ, ಕಲೆಸಾಹಿತ್ಯ, ಸಂಶೋಧನೆ ಎಲ್ಲವನ್ನು ಹತ್ತಿಕ್ಕುವ ಕೆಲಸವನ್ನು ಇಂತಹ ಚಳವಳಿಗಳು ಮಾಡುತ್ತಲೇ ಬಂದಿವೆ. ಎರಡು, ಮೇಲಿನ ಕಾರಣದಿಂದಾಗಿ ಮತ್ತು ಖಾಸಗಿ ಲಾಭಕ್ಕಾಗಿ ಇಂದು ಜ್ಞಾನಿವಿಜ್ಞಾನಿಗಳು ಅಧಿಕಾರದಲ್ಲಿರುವವರನ್ನು ಪ್ರಶ್ನಿಸುವುದಕ್ಕಿಂತ ಹೆಚ್ಚು ಆಸ್ಥಾನ ಪಂಡಿತರಾಗಲು ಪೈಪೋಟಿ ನಡೆಸುವ ಸ್ಥಿತಿ ನಿರ್ಮಾಣವಾಗಿದೆ. ಇಂತಹ ಸಾಂಸ್ಕೃತಿಕ ಪರಿಸರವನ್ನು ಬದಲಾಯಿಸುವ ಸಾಧ್ಯತೆ ರಾಜಕೀಯಕ್ಕಿದೆ. ಆದರೆ ರಾಜಕೀಯ ಇಂತಹ ಸಾಂಸ್ಕೃತಿಕ ಪರಿಸರವನ್ನು ಬದಲಾಯಿಸುವ ಬದಲು ಸಂಕುಚಿತ ಸಾಂಸ್ಕೃತಿಕ ಪರಿಸರವನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳಲು ಪೈಪೋಟಿ ನಡೆಸುತ್ತಿವೆ. ಅಧಿಕಾರಕ್ಕೆ ಬರಲು ಕೆಲವು ರಾಜಕೀಯ ಪಕ್ಷಗಳು ಜಾತಿಯ ಇನ್ನು ಕೆಲವು ಪಕ್ಷಗಳು ಧರ್ಮದ ಗುರುತಿನ ಅಥವಾ ಐಡೆಂಟಿಟಿ ರಾಜಕೀಯವನ್ನು ಆಶ್ರಯಿಸಿವೆ.

ಜಾತಿ, ಧರ್ಮಗಳ ಗುರುತಿನ ರಾಜಕೀಯ ದಲಿತರ, ಮಹಿಳೆಯರ, ಅಲ್ಪಸಂಖ್ಯಾತರ ವ್ಯಕ್ತಿ ಸ್ವಾತಂತ್ರ್ಯವನ್ನು, ಬದುಕಿನ ಸಾಧ್ಯತೆಗಳನ್ನು ಕುಂಠಿಸುತ್ತಿವೆ. ದೇಶಕ್ಕೆ ಸ್ವಾತಂತ್ರ್ಯ ಬಂದು ಏಳು ದಶಕಗಳಾಗುತ್ತಾ ಬಂದರೂ ದಲಿತರಿಗೆ ಇನ್ನೂ ಸ್ವಾತಂತ್ರ್ಯ ಬಂದಿಲ್ಲ. ಅಸ್ಪ್ರಶ್ಯತೆ ದಲಿತರ ಬದುಕನ್ನು ಸಂಪೂರ್ಣ ನುಂಗಿ ನೀರು ಕುಡಿಯುತ್ತಿದೆ. ಅಸ್ಪ್ರಶ್ಯತೆ, ಹೊರಗಿಡುವುದು, ಅಂಚಿನಲ್ಲಿಡುವುದು, ಶ್ರೇಣೀಕರಿಸುವುದು ಇವೆಲ್ಲ ಹಲವರಲ್ಲಿ ಸಾಮಾಜಿಕ ಅಸಾಮರ್ಥ್ಯಗಳನ್ನು

ಸೃಷ್ಟಿಸುತ್ತವೆ. ಅಸ್ಪ್ರಶ್ಯತೆ ವಿವಿಧ ರೂಪದಲ್ಲಿ ಪ್ರಕಟವಾಗುತ್ತಿದೆ. ಮನೆಯೊಳಗೆ ಪ್ರವೇಶ ನಿರಾಕರಿಸುವುದು, ಊರಿಂದ ಹೊರಗಿಡುವುದು, ಹೋಟೇಲ್‌ಗಳಲ್ಲಿ ದಲಿತರಿಗೆ ಕುಳಿತುಕೊಳ್ಳಲು ಪ್ರತ್ಯೇಕ ವ್ಯವಸ್ಥೆ ಮಾಡುವುದು, ಪ್ರತ್ಯೇಕ ಗ್ಲಾಸ್ ಇಡುವುದು, ಕ್ಷೌರಿಕರು ದಲಿತರಿಗೆ ಕ್ಷೌರ ತಿರಸ್ಕರಿಸುವುದು, ಡೋಬಿಗಳು ಬಟ್ಟೆ ತೊಳೆಯಲು ನಿರಾಕರಿಸುವುದು, ದೇವಸ್ಥಾನಗಳಲ್ಲಿ ಪ್ರವೇಶ ನಿರಾಕರಿಸುವುದು, ಬಾಡಿಗೆ ಮನೆ ಸಿಗದಿರುವುದು, ದಲಿತರು ಮನೆ ಕಟ್ಟಿಸಿ ಬಾಡಿಗೆ ಕೊಡಲು ಸಾಧ್ಯವಾಗದಿರುವುದು ಹೀಗೆ ಹಲವು ರೂಪಗಳಲ್ಲಿ ಅಸ್ಪ್ರಶ್ಯತೆ ದಲಿತರನ್ನು ಕಾಡುತ್ತಿದೆ. ಇವೆಲ್ಲವೂ ನಾವು ಕಟ್ಟಿಕೊಂಡ ಸಾಮಾಜಿಕ, ರಾಜಕೀಯ ಸಂಬಂಧಗಳಿಂದ ಸೃಷ್ಟಿಯಾಗುವ ಸಂಕಟಗಳು. ಇವು ದಲಿತರಲ್ಲಿ ದೊಡ್ಡ ಪ್ರಮಾಣದ ಸಾಮಾಜಿಕ ಅಸಾಮರ್ಥ್ಯವನ್ನು ಸೃಷ್ಟಿಸುತ್ತವೆ. ಈ ಅಸಾಮರ್ಥ್ಯಗಳು ಹೊಸತಾಗಿ ಸೃಷ್ಟಿಯಾಗುವ ಆರ್ಥಿಕ ಅವಕಾಶಗಳನ್ನು ಬಳಸಿಕೊಳ್ಳಲು ಅಡ್ಡಿಯಾಗುತ್ತವೆ, ರಾಜಕೀಯ ಅಧಿಕಾರ ಚಲಾಯಿಸಲು ತಡೆಯಾಗುತ್ತವೆ.

ದಲಿತರ ಬದುಕನ್ನು ಅಸ್ಪ್ರಶ್ಯತೆ ಹೇಗೆ ಹಿಂಡಿ ಹಿಪ್ಪೆ ಮಾಡುತ್ತದೋ ಅದೇ ರೀತಿಯಲ್ಲಿ ನಮ್ಮ ಸಂಸ್ಕೃತಿ ಮಹಿಳೆಗೆ ನೀಡುವ ಎರಡನೇ ದರ್ಜೆ ಸ್ಥಾನಮಾನ ಅವಳ ಬದುಕನ್ನು ನರಕಸದೃಶ ಮಾಡುತ್ತಿದೆ. ಮಹಿಳೆ ಪುರುಷನಿಗೆ ಸಮಾನಲ್ಲ ಎನ್ನುವ ನಂಬಿಕೆ ಹುಟ್ಟಿನಿಂದ ಸಾಯವವರೆಗೆ ಅವಳ ಬದುಕನ್ನು ಅತಂತ್ರಗೊಳಿಸುತ್ತಿದೆ. ಮಹಿಳೆಯ ವಾಖ್, ಅಭಿವ್ಯಕ್ತಿ ಸ್ವಾತಂತ್ರ್ಯಗಳ ಪ್ರಶ್ನೆಗಳನ್ನು ಬಿಡಿ ದಿನನಿತ್ಯದ ಬದುಕಿನ ಉಣ್ಣುವ, ತಿನ್ನುವ, ಪೂಜಿಸುವ, ಪ್ರೀತಿಸುವ, ಮದುವೆಯಾಗುವ, ಮಕ್ಕಳು ಹೆರುವ ಅಥವಾ ಹೆರದಿರುವ ಸ್ವಾತಂತ್ರ್ಯ ಕೂಡ ನಮ್ಮಲ್ಲಿ ಬಹುತೇಕ ಮಹಿಳೆಯರಿಗೆ ಇಲ್ಲವೆಂದರೆ ಆಶ್ಚರ್ಯವಾಗಬಹುದು (ಪ್ರೇಮ್ ಚೌದುರಿ, ೨೦೧೧). ಆದರೆ ಇದು ವಾಸ್ತವ. ಇಂತಹ ಎರಡನೇ ದರ್ಜೆ ಸ್ಥಾನಮಾನದೊಂದಿಗೆ ಸಂಸಾರದ ಖರ್ಚು ಸರಿದೂಗಿಸಲು ಇಂದು ಮಹಿಳೆ ಹೊರಗೆ ದುಡಿಯುವುದು ಅನಿವಾರ್ಯವಾಗುತ್ತಿದೆ. ಜಾಗತೀಕರಣ ಸೃಷ್ಟಿಸುವ ಬಹುತೇಕ ಉದ್ಯೋಗಗಳು ಸಂಬಳ, ಉದ್ಯೋಗ ಹಾಗು ಸಾಮಾಜಿಕ ಭದ್ರತೆಗಳಿಲ್ಲದ ಉದ್ಯೋಗಗಳು. ಮಾಲೀಕ ಕುಶಿ ಬಂದಾಗ ನೇಮಕ ಮಾಡಿ ಕುಶಿ ಬಂದಂತೆ ದುಡಿಸಿ ಕುಶಿ ಬಂದಾಗ ಮನೆಗೆ ಕಳುಹಿಸುವ ಉದ್ಯೋಗ. ಇವುಗಳೊಂದಿಗೆ ಮಹಿಳೆ ಲೌಂಗಿಕ ದೌರ್ಜನ್ಯಗಳನ್ನು ಎದುರಿಸಬೇಕಾಗುತ್ತದೆ. ಮಹಿಳೆ ಹೊರಗೆ ದುಡಿದು ಆದಾಯ ತರುವುದರಿಂದ ಅವಳ ಸಾಮಾಜಿಕ ಸ್ಥಾನಮಾನ, ರಾಜಕೀಯ ಅಧಿಕಾರಗಳಲ್ಲಿ ವಿಶೇಷ ಬದಲಾವಣೆಗಳಾಗುವುದಿಲ್ಲ. ಅಷ್ಟು ಮಾತ್ರವಲ್ಲ ಅವಳು ಮನೆ ಜವಾಬ್ದಾರಿಗಳನ್ನು ನಿರ್ವಹಿಸುವುದು ತಪ್ಪುವುದಿಲ್ಲ.

ತಳಸ್ತರಕ್ಕೆ ಸೇರಿದ ಹಲವು ಕುಟುಂಬಗಳಲ್ಲಿ ಗಂಡನಿಂದ ಉಪಕಾರಕ್ಕಿಂತ ಉಪದ್ರವೇ ಹೆಚ್ಚು. ಗಂಡನಿಗೆ ನಿಗದಿತ ಆದಾಯ ಇಲ್ಲ. ಹೆಂಡತಿ ದುಡಿದು ಗಳಿಸಿದ ಅಲ್ಪಸ್ವಲ್ಪ ಆದಾಯವನ್ನು ಕುಡಿದು ಖಾಲಿ ಮಾಡುವುದು. ಇವೆಲ್ಲ ಸಾಲದೆಂದು ಕುಡಿದು ಬಂದು ಹೆಂಡತಿಯನ್ನು ಮಾನಸಿಕ ಹಾಗೂ ದೈಹಿಕವಾಗಿ ಹಿಂಸಿಸುವುದು ಸಾಮಾನ್ಯವಾಗಿದೆ. ಇಂತಹ ವೈವಾಹಿಕ ಸಂಬಂಧಗಳಿಂದ ಸುಲಭದಲ್ಲಿ ಹೊರಗೆ ಬರುವ ವಿವಾಹ ವಿಚ್ಛೇಧನ ಕಾಯಿದೆ ಇಲ್ಲ. ವಿವಾಹ ಕಾಯಿದೆ ಅದರಲ್ಲೂ ಹಿಂದೂ ವಿವಾಹ ತಿದ್ದುಪಡಿಯಾಗಬೇಕೆಂದು ಮಹಿಳ ಸಂಘಟನೆಗಳು, ಸರಕಾರತೇತರ ಸಂಸ್ಥೆಗಳು ಹಲವು ವರ್ಷಗಳಿಂದ ಹೋರಾಟ ನಡೆಸುತ್ತಿವೆ. ಅವರ ಹೋರಾಟದ ಫಲವಾಗಿ ಹಿಂದಿನ ಯುಪಿಎ ಸರಕಾರ ಕಾಯಿದೆ ತಿದ್ದುಪಡಿ ಬಿಲ್ಲೊಂದನ್ನು (೨೦೧೩ರಲ್ಲಿ) ಸಿದ್ಧಗೊಳಿಸಿತ್ತು. ಆ ತಿದ್ದುಪಡಿ ಬಿಲ್ ಕಾಯಿದೆಯಾಗುತ್ತಿದ್ದರೆ ಮಹಿಳೆಯರ ವಿವಾಹ ಮತ್ತು ವಿಚ್ಛೇಧನಗಳು ಸುಲಭವಾಗುತ್ತಿತ್ತು. ಆದರೆ ಆ ತಿದ್ದುಪಡಿ ಇನ್ನೂ ಕೂಡ ಪಾರ್ಲಿಮೆಂಟಲ್ಲಿ ಮಂಡನೆಯಾಗಿಲ್ಲ. ಇವುಗಳ ಜೊತೆಗೆ ಲವ್ ಜಿಹಾದ್, ಮರ್ಯಾದೆ ಹತ್ಯೆಯಂತಹ ಬೆಳವಣಿಗೆಗಳು ಮಹಿಳೆಯರ ಬದುಕನ್ನು ಅಸಹನೀಯಗೊಳಿಸಿವೆ. ಜಾತಿ, ಧರ್ಮಗಳ ಪರಿಧಿಗಳನ್ನು ಮೀರಿ ಮಹಿಳೆ ತನಗೆ ಇಷ್ಟವಾದವರನ್ನು ಮದುವೆಯಾಗುವಂತಿಲ್ಲ, ಜಾತಿ, ಧರ್ಮದೊಳಗಿನ ಮದುವೆಯಿಂದ ಸುಖವಿಲ್ಲವೆಂದು ಸುಲಭದಲ್ಲಿ ಹೊರಗೆ ಬರುವಂತಿಲ್ಲ. ಹೀಗೆ ವಿವಾಹ ಮತ್ತು ವಿವಾಹ ವಿಚ್ಛೇಧನಗಳು ಬಿಗಿಯಾಗಿರುವುದರಿಂದ ಮಹಿಳೆಯನ್ನು ಮನೆಯೊಳಗೆ ಮತ್ತು ಹೊರಗೆ ಜೀತದಾಳುಗಳ ರೀತಿಯಲ್ಲಿ ದುಡಿಸುವುದು ಸುಲಭವಾಗಿದೆ. ಪಿತ್ರಾರ್ಜಿತ ಆಸ್ತಿಯಲ್ಲಿ ಮಹಿಳೆಯ ಪಾಲನ್ನು ಮೊಟಕುಗೊಳಿಸುವ ಸುಪ್ರೀಮ್ ಕೋರ್ಟ್‌ನ ಇತ್ತೀಚಿನ ತೀರ್ಪು ಮಹಿಳೆಯ ಸ್ವಾತಂತ್ರ್ಯವನ್ನು ಇನ್ನೂ ಮೊಟಕಗೊಳಿಸಬಹುದು.

ಮಹಿಳೆಯ ಸ್ವಾತಂತ್ರ್ಯವನ್ನು ಜಾತಿ, ಧರ್ಮಗಳ ದಪ್ಪ ಪರಿಧಿಗಳು ಮೊಟಕುಗೊಳಿಸಿದಂತೆ ಅಸಹಿಷ್ಣುತೆಯ ರಾಜಕೀಯ ತಳಸ್ತರದ ಜನರ ಬದುಕನ್ನು ಮೊಟಕುಗೊಳಿಸುತ್ತಿದೆ. ಲವ್ ಜಿಹಾದ್, ಗೋಹತ್ಯೆ ನಿಷೇಧ ಕಾಯಿದೆಗಳು ಅಸಹಿಷ್ಣುತೆಯ ರಾಜಕೀಯಕ್ಕೆ ಇತ್ತೀಚಿನ ಸೇರ್ಪಡೆಗಳು. ಇವುಗಳ ಉದ್ದೇಶ ಸಮಾಜವನ್ನು ಹಿಂದೂ ಮುಸ್ಲಿಮ್ ಎಂದು ಧ್ರುವೀಕರಿಸುವುದು. ಎಲ್ಲರನ್ನು ಒಟ್ಟು ಸೇರಿಸಿ ದೇಶ ಕಟ್ಟಬೇಕಾದ ರಾಜಕೀಯ ಪಕ್ಷಗಳು ತಮ್ಮ ತಕ್ಷಣದ ಲಾಭಕ್ಕಾಗಿ ಜನರನ್ನು ವಿಭಾಜಿಸುತ್ತಿದ್ದಾರೆ. ತಮ್ಮ ಅಧಿಕಾರ ದಾಹವನ್ನು ತೃಪ್ತಿ ಪಡಿಸಲು ರಾಜಕೀಯ ಪಕ್ಷಗಳು ಮುಸ್ಲಿಮರನ್ನು ಗಮನದಲ್ಲಿಟ್ಟುಕೊಂಡು ನಕರಾತ್ಮಕ ಕೋಮುವಾದವನ್ನು ಬೆಳೆಸುತ್ತಿವೆ. ಮುಸ್ಲಿಮರು ದೇಶಪ್ರೇಮಿಗಳಲ್ಲ, ಮುಸ್ಲಿಮರಿಗೆ ಹೆಚ್ಚು ಮಕ್ಕಳು, ಮುಸ್ಲಿಮ್ ವ್ಯಾಪಾರಸ್ಥರು ಮೋಸಗಾರರು ಇಂತಹ ಗುಣಗಳನ್ನು ಮುಸ್ಲಿಮರ ಮೇಲೆ ಆರೋಪಿಸಿ ನಾವು (ಹಿಂದೂಗಳು) ದೇಶಪ್ರೇಮಿಗಳು, ನಮಗೆ ಮಕ್ಕಳು ಕಡಿಮೆ, ನಮ್ಮ ವ್ಯಾಪಾರಸ್ಥರು ಮೋಸಗಾರರಲ್ಲ ಎನ್ನುವ ಭಾವನೆ ರೂಪಿಸುವುದು ನಡೆದಿದೆ. ಇದು ಮುಸ್ಲಿಮರ ಬದುಕನ್ನು ಅಸಹನೀಯಗೊಳಿಸಿದೆ (ಎಂ.ಚಂದ್ರ ಪೂಜಾರಿ, ೨೦೦೦). ಸಾಚಾರ್ ವರದಿ ಪ್ರಕಾರ ಶಿಕ್ಷಣ, ಆರೋಗ್ಯ, ಬ್ಯಾಂಕ್ ಸಾಲ ಇತ್ಯಾದಿಗಳಲ್ಲಿ ಮುಸ್ಲಿಮರ ಸ್ಥಿತಿ ದಲಿತರ ಸ್ಥಿತಿಗಿಂತಲೂ ಕೆಟ್ಟದಿದೆ.

ಸಮಾಜವನ್ನು ಜಾತಿ, ಧರ್ಮಗಳ ಹೆಸರಲ್ಲಿ ಧ್ರುವೀಕರಿಸಿದರೆ ವ್ಯವಸ್ಥೆಯಲ್ಲಿರುವ ಇತರ (ಬಡತನ, ಅಸಮಾನತೆ, ನಿರುದ್ಯೋಗ ಇತ್ಯಾದಿ) ವೈರುಧ್ಯಗಳು ಮುಂಚೂಣಿಗೆ ಬರುವುದೇ ಇಲ್ಲ. ದೊಡ್ಡ ಸಂಖ್ಯೆಯ ಜನರಲ್ಲಿ ಕೃಷಿ ಮಾಡಿ ಬದುಕಷ್ಟು ಭೂಮಿ ಇಲ್ಲ. ವ್ಯಾಪಾರ ಮಾಡಿ ಗಳಿಸುವಷ್ಟು ಬಂಡವಾಳ ಇಲ್ಲ. ಶಿಕ್ಷಣ, ಆರೋಗ್ಯಗಳು ಖಾಸಗೀಕರಣಗೊಂಡ ಕಾರಣ ಭೂಮಿ, ಬಂಡವಾಳ ಇಲ್ಲದವರಲ್ಲಿ ಶಿಕ್ಷಣ, ಆರೋಗ್ಯಗಳೂ ಇಲ್ಲ. ಇವರೆಲ್ಲ ಇಂದು ಭೂಮಿ, ಬಂಡವಾಳ, ಶಿಕ್ಷಣ, ಆರೋಗ್ಯ ಕ್ಷೇತ್ರಗಳಲ್ಲಿನ ಅಸಮಾನತೆ ಪರಿಹರಿಸಲು ಸಂಘಟಿತರಾಗಿ ಹೋರಾಡಬೇಕಿತ್ತು. ಇವರೆಲ್ಲ ಸಂಘಟಿತರಾಗಿ ಹೋರಾಡುವ ಬದಲು ಅಸಹಿಷ್ಣುತೆಯ ರಾಜಕೀಯದಿಂದಾಗಿ ಪರಸ್ಪರ ಕಚ್ಚಾಟದಲ್ಲಿ ತೊಡಗಿದ್ದಾರೆ. ತಳಸ್ತರದ ಜನರನ್ನು ಜಾತಿ, ಧರ್ಮಗಳ ಹೆಸರಲ್ಲಿ ಜಗಳಕ್ಕೆ ಹಚ್ಚಿ ನಮ್ಮ ಸಮಾಜದ ಒಂದು ಸಣ್ಣ ವರ್ಗ ಮೇಲಿನ ಎಲ್ಲ ಸವಲತ್ತುಗಳನ್ನು ತಮ್ಮದಾಗಿಸಿಕೊಂಡಿದೆ. ಇದೊಂದು ಬಗೆಯ ಹಗಲು ದರೋಡೆ. ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿ ನಿಂತಿರುವುದೇ ವ್ಯಕ್ತಿ ಸ್ವಾತಂತ್ರ್ಯದ ಮೇಲೆ. ಆದರೆ ನಮ್ಮ ಸಾಮಾಜಿಕ, ಸಾಂಸ್ಕೃತಿಕ ಹಾಗು ರಾಜಕೀಯಗಳು ವ್ಯಕ್ತಿ ಸ್ವಾತಂತ್ರ್ಯವನ್ನು ಸಂಪೂರ್ಣ ನಿರಾಕರಿಸುತ್ತಿವೆ. ಇಂತಹ ಪರಿಸರದಲ್ಲಿ ನಮ್ಮ ಸಮಾಜದ ಮಹಿಳೆಯರು, ದಲಿತರು, ಅಲ್ಪಸಂಖ್ಯಾತರು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲುಗೊಳ್ಳಬೇಕಾದರೆ ಅಧಿಕಾರಕ್ಕೆ ಬರುವ ನಾಯಕರ ಆದ್ಯತೆಗಳು ಬದಲಾಗಬೇಕಾಗಿದೆ. ಪರದೇಶಿ ಬಂಡವಾಳಕ್ಕಾಗಿ ಪ್ರಪಂಚ ಸುತ್ತುವ ಬದಲು ನಮ್ಮದೇ ಸಮಾಜದ ಸಾಂಸ್ಕೃತಿಕ ಪರಿಸರವನ್ನು ಸುಧಾರಿಸುವುದು ನಾಯಕರ ಆದ್ಯತೆಯಾಗಬೇಕಾಗಿದೆ.

**ಸಮರೋಪ:**

ನಿಯೋ ಲಿಬರಲ್ ಅಭಿವೃದ್ಧಿ ನೀತಿಗಳಿಂದ ಸರಕುಸೇವೆಗಳ ಉತ್ಪಾದನೆ ಹಾಗು ಪೂರೈಕೆ ಹೆಚ್ಚಾಗುತ್ತದೆ. ಸರಕುಸೇವೆಗಳ ಪೂರೈಕೆ ಹೆಚ್ಚಾದರೆ ಬಡತನ ನಿವಾರಣೆಯಾಗುತ್ತದೆಯೆಂದು ನಂಬಿಸಲಾಗಿತ್ತು. ಸುಮಾರು ಮೂರು ದಶಕಗಳ ಮಾರುಕಟ್ಟೆ ಅಭಿವೃದ್ಧಿ ನಂತರವೂ ಬಡತನ ಗುಣಾತ್ಮಕವಾಗಿ ಕಡಿಮೆಯಾಗಿಲ್ಲ. ಈ ಪಾಲಿಸಿಗಳು ಜಾರಿಗೆ ಬಂದ ನಂತರ ಉದ್ಯೋಗಗಳ ಸೃಷ್ಟಿಯಾಗಿವೆ. ಆದರೆ ಇವೆಲ್ಲವೂ ಅಸಂಘಟಿತ ಉದ್ಯೋಗಗಳು. ಅಂದರೆ ಮಾಲೀಕರು ಕುಶಿ ಬಂದಾಗ ನೇಮಕ ಮಾಡಿ ಕುಶಿ ಬಂದಷ್ಟು ಸಂಬಳ ಕೊಟ್ಟು ಕುಶಿ ಬಂದಾಗ ಮನೆಗೆ ಕಳುಹಿಸುವ ಉದ್ಯೋಗಗಳು. ಇವೇ ಪಾಲಿಸಿಗಳಿಂದ ತೆರಿಗೆ ಸಂಗ್ರಹ ಹೆಚ್ಚಾಗುತ್ತದೆ, ಹೆಚ್ಚಾದ ತೆರಿಗೆ ಸಂಗ್ರಹವನ್ನು ಶಿಕ್ಷಣ, ಆರೋಗ್ಯಗಳ ಮೇಲೆ ವಿನಿಯೋಜಿಸಲಾಗುವುದೆಂದು ನಂಬಿಸಲಾಗಿತ್ತು. ತೆರಿಗೆ ಸಂಗ್ರಹ ಹೆಚ್ಚಾಗಿದೆ. ಆದರೆ ಇದು ಅನುಕೂಲಸ್ಥರು ಕಟ್ಟುವ ನೇರ ತೆರಿಗೆಯಿಂದ ಹೆಚ್ಚಾಗಿರುವುದಲ್ಲ. ಅದರ ಬದಲು ಮೂರು ಹೊತ್ತಿನ ಊಟಕ್ಕೆ ಪರದಾಡುವವರಿಂದ ಸಂಗ್ರಹಿಸಿದ ಪರೋಕ್ಷ ತೆರಿಗೆಯಿಂದ ತೆರಿಗೆ ಸಂಗ್ರಹ ಹೆಚ್ಚಾಗಿದೆ. ಇಂತಹ ಪರೋಕ್ಷ ತೆರಿಗೆಯಿಂದ ಹೆಚ್ಚಾದ ತೆರಿಗೆ ಸಂಗ್ರಹವನ್ನು ಕೂಡ ಜನರಿಗೆ ಶಿಕ್ಷಣ, ಆರೋಗ್ಯಗಳ ಮೇಲೆ ಖರ್ಚು ಮಾಡಿಲ್ಲ. ಶಿಕ್ಷಣ, ಆರೋಗ್ಯಗಳ ಮೇಲೆ ಸರಕಾರ ಖರ್ಚು ಮಾಡುವ ಬದಲು ಖಾಸಗಿ

ಬಂಡವಾಳಿಗರು ಇವನ್ನು ಉದ್ದಿಮೆ ರೀತಿಯಲ್ಲಿ ಬೆಳೆಸುತ್ತಿದ್ದಾರೆ. ಅಂದರೆ ಮೂರು ಹೊತ್ತಿನ ಊಟಕ್ಕೆ ಪರದಾಡುವವರು ಪರೋಕ್ಷ ತೆರಿಗೆ ಸಂದಾಯ ಮಾಡುವುದರ ಜೊತೆಗೆ ಶಿಕ್ಷಣ, ಆರೋಗ್ಯಗಳನ್ನು ಮಾರುಕಟ್ಟೆ ದರದಲ್ಲಿ ಖರೀದಿಸಿ ಅನುಭವಿಸಬೇಕಾಗಿದೆ.

ಇವೆಲ್ಲವೂ ಮಾರುಕಟ್ಟೆ ಅಥವಾ ನಿಯೋ ಲಿಬರಲ್ ಪಾಲಿಸಿಗಳೇ ಸೃಷ್ಟಿಸಿದ ಸಮಸ್ಯೆಗಳಲ್ಲ. ಖಂಡಿತವಾಗಿಯೂ ಈ ಪಾಲಿಸಿಗಳ ಗರ್ಭದಲ್ಲೇ ಅಸಮಾನತೆಯನ್ನು ಸೃಷ್ಟಿಸುವ ಅಂಶಗಳಿವೆ. ಭೂಮಿ, ಹಣಕಾಸು, ಪ್ರಾಕೃತಿಕ ಸಂಪನ್ಮೂಲ, ಶಿಕ್ಷಣ, ಆರೋಗ್ಯಗಳನ್ನು ಕೆಲವರಲ್ಲೇ ಕ್ರೋಢೀಕರಣಗೊಳಿಸುವಲ್ಲಿ ನಿಯೋ ಲಿಬರಲ್ ಪಾಲಿಸಿಗಳ ಪಾತ್ರವೂ ಇದೆ. ಇವುಗಳೊಂದಿಗೆ ಈ ಪಾಲಿಸಿಗಳು ಅನುಷ್ಠಾನಗೊಳ್ಳುವ ರಾಜಕೀಯ, ಸಾಮಾಜಿಕ ಹಾಗು ಸಾಂಸ್ಕೃತಿಕ ಪರಿಸರಗಳ ಪಾತ್ರವೂ ಇದೆ. ನಮ್ಮ ದೇಶದ ಪ್ರಜಾಪ್ರಭುತ್ವ ಇದಕ್ಕೆ ಉತ್ತಮ ಉದಾಹರಣೆ. ಸಮಾಜದ ಬಹುತೇಕರ ಆಸಕ್ತಿಗಳನ್ನು ನಮ್ಮ ಪ್ರಜಾಪ್ರಭುತ್ವದಲ್ಲಿ ಪ್ರತಿನಿಧಿಸುತ್ತಿಲ್ಲ. ಕೋಟಿಗಟ್ಟಲೆಯಲ್ಲಿ ಖರ್ಚು ಮಾಡಿ ಚುನಾವಣೆ ಗೆಲ್ಲುವ ಪ್ರತಿನಿಧಿಗಳು ಮತ್ತು ಮೂರು ಹೊತ್ತಿನ ಊಟಕ್ಕೆ ಪರದಾಡುವ ಮತದಾರರ ಆಸಕ್ತಿಗಳ ನಡುವೆ ಹೊಂದಾಣಿಕೆಯೇ ಇಲ್ಲ. ಆದುದರಿಂದಲೇ ಇದನ್ನು ಸಂಕುಚಿತ ಪ್ರಜಾಪ್ರಭುತ್ವವೆಂದು ಗುರುತಿಸಿರುವುದು. ಸಂಕುಚಿತ ಪ್ರಜಾಪ್ರಭುತ್ವದ ಮೇಲೆ ಹಿಡಿತ ಹೊಂದಿರುವ ಮೇಲ್ವರ್ಗ ಅಭಿವೃದ್ಧಿ ಮತ್ತು ಮಾರುಕಟ್ಟೆಗಳನ್ನು ತನ್ನ ಆಸಕ್ತಿಗೆ ಪೂರಕವಾಗಿ ಕಟ್ಟಿಕೊಂಡಿದೆ. ಇವರು ಜಾರಿಗೊಳಿಸುವ ಅಭಿವೃದ್ಧಿ ನೀತಿಗಳಲ್ಲಿ ಮತ್ತು ಕಟ್ಟಿಕೊಂಡ ಮಾರುಕಟ್ಟೆಯಲ್ಲಿ ಬೇಡಿಕೆಗಿಂತ ಕಡಿಮೆ ಪೂರೈಕೆ ಇರುವ ಭೂಮಿ, ಹಣಕಾಸು, ಪ್ರಾಕೃತಿಕ ಸಂಪನ್ಮೂಲಗಳ ವ್ಯವಹಾರ ಮಾರುಕಟ್ಟೆ ನಿಯಮದಿಂದ ಹೊರಗಿದೆ. ಇವೆಲ್ಲವನ್ನು ಸರಕಾರವೇ ಮುಂದೆ ನಿಂತು ಅಗ್ಗದ ದರದಲ್ಲಿ ಅನುಕೂಲಸ್ಥರಿಗೆ ನೀಡುತ್ತಿದೆ. ಇದೇ ಸಂದರ್ಭದಲ್ಲಿ ತಳಸ್ತರದ ಜನರು ಮಾರುಕಟ್ಟೆ ದರದಲ್ಲಿ ಹಣಕಾಸು, ಭೂಮಿ, ಪ್ರಾಕೃತಿಕ ಸಂಪನ್ಮೂಲಗಳನ್ನು ಖರೀದಿಸುತ್ತಿದ್ದಾರೆ. ಬೇಡಿಕೆಗಿಂತ ಪೂರೈಕೆ ಹೆಚ್ಚಿರುವ ದುಡಿಯುವ ಜನರು ಮಾತ್ರ ಮಾರುಕಟ್ಟೆ ನಿಯಮನುಸಾರ ಬಿಕರಿಯಾಗುತ್ತಿದ್ದಾರೆ. ಅನುಕೂಲಸ್ಥರು ಸರಕಾರದ ಕೃಪೆಯಲ್ಲಿ ಬದುಕಿದರೆ ಅನಾನುಕೂಲಸ್ಥರು ಮಾರುಕಟ್ಟೆ ದರದಲ್ಲಿ ಖರೀದಿಸಿ ಬದುಕುತ್ತಿದ್ದಾರೆನ್ನುವುದೇ ಇವೆಲ್ಲದರ ಒಟ್ಟು ತಾತ್ಪರ್ಯ.

ಇಂದು ಎಲ್ಲ ಸಮುದಾಯಗಳಲ್ಲೂ ಬಡವರಿದ್ದಾರೆ. ಮೇಲ್ಜಾತಿಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಬಡವರಿದ್ದರೆ ತಳಸ್ತರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಡವರಿದ್ದಾರೆ. ಹಾಗೆಂದು ಎಲ್ಲ ಬಡವರ ಸ್ಥಿತಿಗತಿ ಒಂದೇ ಅಲ್ಲ. ಅಸ್ಪ್ರಶ್ಯತೆ ದಲಿತ ಬಡವರ ಸ್ಥಿತಿಯನ್ನು ಗಂಭೀರವಾಗಿ ಕಾಡುತ್ತಿದೆ. ದಲಿತರ ಬದುಕನ್ನು ಅಸ್ಪ್ರಶ್ಯತೆ ಹೇಗೆ ಹಿಂಡಿ ಹಿಪ್ಪೆ ಮಾಡುತ್ತದೋ ಅದೇ ರೀತಿಯಲ್ಲಿ ನಮ್ಮ ಮಹಾನ್ ಸಂಸ್ಕೃತಿ ಮಹಿಳೆಗೆ ನೀಡುವ ಎರಡನೇ ದರ್ಜೆ ಸ್ಥಾನಮಾನ ಅವಳ ಬದುಕನ್ನು ನರಕಸದೃಶ ಮಾಡುತ್ತಿದೆ. ಇವೆಲ್ಲವೂ ಅಭಿವೃದ್ಧಿಯ ಕೊಡುಗೆಯಲ್ಲ; ನಮ್ಮ ಸಂಸ್ಕೃತಿಯ ಕೊಡುಗೆಗಳು. ಆದರೆ ಚರಿತ್ರೆಯಿಂದ ಬಂದ ಇಂತಹ ಅಸಮಾನತೆಗಳನ್ನು ಸರಿಪಡಿಸುವ ಅಭಿವೃದ್ಧಿಯನ್ನು ಕಟ್ಟಿಕೊಳ್ಳಲಿಲ್ಲ. ಅದರ ಬದಲು ಚರಿತ್ರೆಯಿಂದ ಬಂದ ಜಾತಿ, ಲಿಂಗ, ಧರ್ಮ ಭೇದಗಳು ಸೃಷ್ಟಿಸುವ ಅಸಾಮರ್ಥ್ಯಗಳನ್ನು ಇನ್ನೂ ಸಂಕೀರ್ಣಗೊಳಿಸುವ ಅಭಿವೃದ್ಧಿಯನ್ನು ಜಾರಿಗ ತರಲಾಗಿದೆ. ಆದುದರಿಂದ ಈ ಸಮಸ್ಯೆಗಳಿಗೆ ಪರಿಹಾರ ಅಭಿವೃದ್ಧಿಯಲ್ಲಿ ಇಲ್ಲ. ಅಭಿವೃದ್ಧಿ ಮಾದರಿ ಅಥವಾ ಥಿಯರಿಯೊಂದು ಅದರಷ್ಟಕ್ಕೇ ಅದು ಚಲಿಸಿ ಜನರ ಬದುಕನ್ನು ಪ್ರಭಾವಿಸುವುದಿಲ್ಲ. ಸರಕಾರಗಳು ಅಭಿವೃದ್ಧಿ ಮಾದರಿಗಳನ್ನು ಅನುಷ್ಠಾನಗೊಳಿಸುವ ಮೂಲಕ ಈ ಮಾದರಿಗಳು ಜನರ ಮೇಲೆ ಪ್ರಭಾವ ಬೀರಲು ಸಾಧ್ಯವಾಗುತ್ತದೆ. ನಮ್ಮಲ್ಲೂ ಕೂಡ ಇದೇ ಆಗಿರುವುದು. ನಾವು ನೀವು ಮತ ಹಾಕಿ ಚುನಾಯಿತ ಸರಕಾರಗಳೇ ನಮ್ಮ ಸಮಾಜದ ಬಹುತೇಕರ ಆಸಕ್ತಿಗಳನ್ನು ಬಲಿ ಕೊಡುವ ಅಭಿವೃದ್ಧಿ ಪಾಲಿಸಿಗಳನ್ನು ಜಾರಿಗೆ ತರುತ್ತಿರುವುದು. ಈ ಸಮಸ್ಯೆಗೆ ಪರಿಹಾರ ಬೇಕಾದರೆ ನಮ್ಮ ಪ್ರಜಾಪ್ರಭುತ್ವದ ಗುಣಮಟ್ಟ ಸುಧಾರಿಸಬೇಕು. ಪ್ರಜಾಪ್ರಭುತ್ವದ ಗುಣಮಟ್ಟ ಸುಧಾರಿಸಬೇಕಾದರೆ ಜನರು ಜಾತಿ, ಧರ್ಮ ನೋಡಿ ಅಥವಾ ದುಡ್ಡು ತೆಗೆದುಕೊಂಡು ಮತ ಹಾಕುವುದು ಕಡಿಮೆಯಾಗಬೇಕಾಗಿದೆ. ಪ್ರಜಾಪ್ರಭುತ್ವದ ಗುಣಮಟ್ಟ ಸುಧಾರಿಸಿದರೆ ಅಭಿವೃದ್ಧಿ ಗುಣಮಟ್ಟ ಸುಧಾರಿಸಬಹುದು.

## ಪರಾಮರ್ಶನ ಪುಸ್ತಕಗಳು

೧ . ಮ್ಯಾಕ್ಸ್ ವೇಬರ್, ದಿ ಪ್ರೊಟೆಸ್ಟೆಂಟ್ ಎಥಿಕ್ ಅಂಡ್ ಸ್ಪಿರಿಟ್ ಆಫ್ ಕ್ಯಾಪಿಟಲಿಸಂ, ನ್ಯೂಯಾರ್ಕ್, ರೌಟ್‌ಲೆಡ್ಜ್, ೧೯೯೨

೨. ಡೇವಿಡ್ ಹಾರ್ವೇ, ಎ ಬ್ರೀಫ್ ಹಿಸ್ಟರಿ ಆಫ್ ನಿಯೋ ಲಿಬರಲಿಸಂ, ಲಂಡನ್: ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೨೦೦೫

೩. ವೂಲ್ಫಾಂಗ್ ಸಾಸ್, "ಒನ್ ವರ್ಲ್ಡ್," ಇನ್ ವೂಲ್ಫಾಂಗ್ ಸಾಸ್ (ಸಂ), ದಿ ಡೆವಲಪ್‌ಮೆಂಟ್ ಡಿಕ್ಸ್‌ನರಿ – ಎ ಗೈಡ್ ಟು ನೋಲೆಡ್ಜ್ ಎಸ್ ಪವರ್, ಹೈದರಾಬಾದ್: ಓರಿಯಂಟ್ ಲಾಂಗ್‌ಮೆನ್, ೨೦೦೦, ಪು.೧೩೭– ೧೫೪

೪. ಜೆರಾಲ್ಡ್ ಬತೌಡ್, "ಮಾರ್ಕೆಟ್," ಇನ್ ವೂಲ್ಫಾಂಗ್ ಸಾಸ್ (ಸಂ), ದಿ ಡೆವಲಪ್‌ಮೆಂಟ್ ಡಿಕ್ಸ್‌ನರಿ – ಎ ಗೈಡ್ ಟು ನೋಲೆಡ್ಜ್ ಎಸ್ ಪವರ್, ಹೈದರಾಬಾದ್: ಓರಿಯಂಟ್ ಲಾಂಗ್‌ಮೆನ್, ೨೦೦೦, ಪು.೯೪– ೧೧೭

೫. ವರ್ಲ್ಡ್ ಬ್ಯಾಂಕ್, ದಿ ಸ್ಟೇಟ್ ಇನ್ ಎ ಚೇಂಜಿಂಗ್ ವರ್ಲ್ಡ್: ವರ್ಲ್ಡ್ ಡೆವಲಪ್‌ಮೆಂಟ್ ರಿಪೋರ್ಟ್, ನ್ಯೂಯಾರ್ಕ್ ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೧೯೯೭

೬. ಭಾರತ ಸರಕಾರ, ದಿ ರೈಟ್ ಟು ಫೇರ್ ಕಾಂಪನ್‌ಸೇಶನ್ ಆ್ಯಂಡ್ ಟ್ರಾನ್ಸ್‌ಪರೆನ್ಸಿ ಇನ್ ಲ್ಯಾಂಡ್ ಎಕ್ವಿಸಿಶನ್, ರಿಹೆಬಿಲಿಟೇಶನ್ ಆ್ಯಂಡ್ ರಿಸೆಟ್ಲಮೆಂಟ್, ನ್ಯೂಡೆಲ್ಲಿ, ೨೦೧೩

೭. ಭಾರತ ಸರಕಾರ, ನ್ಯಾಶನಲ್ ಕಮಿಶನ್ ಫಾರ್ ಎಂಟರ್‌ಪ್ರೈಸಸ್ ಇನ್ ದಿ ಅನ್‌ಆರ್ಗನೈಸ್ಡ್ ಸೆಕ್ಟರ್ಸ್ – ರಿಪೋರ್ಟ್ ಆನ್ ಫಿನಾನ್ಸಿಂಗ್ ಆಫ್ ಅನ್‌ಆರ್ಗನೈಸ್ಡ್ ಸೆಕ್ಟರ್ಸ್, ನ್ಯೂಡೆಲ್ಲಿ, ೨೦೦೭

೮. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ, ಬಜೆಟ್ ಡಾಕ್ಯುಮೆಂಟ್ ಆಫ್ ಇಂಡಿಯಾ ಅಂಡ್ಯ ಸ್ಟೇಟ್ ಗವರ್ನ್‌ಮೆಂಟ್ಸ್, ೨೦೧೪

೯. ಭಾರತ ಸರಕಾರ, ನ್ಯಾಶನಲ್ ಕಮಿಶನ್ ಫಾರ್ ಎಂಟರ್‌ಪ್ರೈಸಸ್ ಇನ್ ದಿ ಅನ್‌ಆರ್ಗನೈಸ್ಡ್ ಸೆಕ್ಟರ್ಸ್ – ಚ್ಯಾಲೇಂಜ್ ಆಫ್ ಎಂಪ್ಲಾಯಿಮೆಂಟ್ ಇನ್ ಇಂಡಿಯಾ, ಎನ್ ಇನ್‌ಫಾರ್ಮಲ್ ಎಕನಾಮಿ ಪರ್ಸ್ಪೆಕ್ಟಿವ್, ೨೦೦೯

೧೦. ಭಾರತ ಸರಕಾರ, ಪಾರ್ಲಿಮೆಂಟರಿ ಕಮಿಟಿ ರಿಪೋರ್ಟ್ ಅನ್ ದಿ ಫಂಕ್ಷನಿಂಗ್ ಆಫ್ ದಿ ಮೆಡಿಕಲ್ ಕೌನ್ಸಿಲ್ ಅಫ್ ಇಂಡಿಯಾ, ೨೦೧೬

೧೧. ಕ್ರೆಡಿಟ್ ಸೂಸಿ, ಗ್ಲೋಬಲ್ ವೆಲ್ತ್ ಡಾಟಾ ಬುಕ್, ೨೦೧೪

೧೨. ಅತುಲ್ ಕೊಹ್ಲಿ, ಡೆಮಾಕ್ರಸಿ ಅಂಡ್ ಡಿಸ್‌ಕಂಟೆಂಟ್: ಇಂಡಿಯಾಸ್ ಗ್ರೋಯಿಂಗ್ ಕ್ರೈಸಿಸ್ ಆಫ್ ಅನ್‌ಗವರ್ನ್‌ಮೆಬಿಲಿಟಿ, ನ್ಯೂಯಾರ್ಕ್: ಕೇಂಬ್ರಿಡ್ಜ್ ಯುನಿವರ್ಸಿಟಿ ಪ್ರೆಸ್, ೧೯೯೧

೧೩. ಅಶುತೋಷ್ ವಾರ್ಶ್ನಿ, ಬ್ಯಾಟ್ಲ್ಸ್ ಆಫ್ ವನ್ – ಇಂಡಿಯಾಸ್ ಇಂಪ್ರೊಬೆಬ್ಲ್ ಡೆಮಾಕ್ರಸಿ, ನ್ಯೂಡೆಲ್ಲಿ: ಪೆಂಗ್ವಿನ್ ಬುಕ್ಸ್, ೨೦೧೩

೧೪. ಸಿ.ಬಿ.ಮೆಕ್‌ಪರ್ಸನ್, ದಿ ಪೊಲಿಟಿಕಲ್ ಥಿಯರಿ ಆಫ್ ಪೊಸೆಸ್ಸೀವ್ ಇಂಡಿವಿಜ್ಯುವಲಿಸಂ, ಆಕ್ಸ್‌ಫರ್ಡ್: ಕ್ಲೇರೆಂಡನ್ ಪ್ರೆಸ್, ೧೯೬೨ ಇನ್ ಎ.ಇಸ್ಕೋಬರ್, ಎನ್‌ಕೌಂಟರಿಂಗ್ ಡೆವಲಪ್‌ಮೆಂಟ್

– ದಿ ಮೇಕಿಂಗ್  ಅಂಡ್ ಅನ್‌ಮೇಕಿಂಗ್ ಆಫ್ ದಿ ಥರ್ಡ್ ವರ್ಲ್ಡ್, ಪ್ರಿನ್ಸ್‌ಟನ್: ಪ್ರಿನ್ಸ್‌ಟನ್ ಯುನಿವರ್ಸಿಟಿ ಪ್ರೆಸ್, ೧೯೯೫

೧೬. ರಿಚರ್ಡ್ ಪೀಟ್ ಅಂಡ್ ಇಲೈನ್ ಹೆಟ್‌ವಿಕ್, ಥಿಯರಿಸ್  ಆಫ್ ಡೆವಲಪ್‌ಮೆಂಟ್ – ಕಂಟೆನ್ಸ್‌ನ್, ಆರ್‌ಗ್ಯುಮೆಂಟ್ಸ್, ಅಲ್ಟರ್‌ನೆಟಿವ್ಸ್, ನ್ಯೂಯಾರ್ಕ್: ದಿ ಗಿಲ್‌ಫೋರ್ಡ್ ಪ್ರೆಸ್, ೨೦೦೯

೧೭. ಸ್ಟಿಫನ್ ವರ್ಲ್ಯಾಂಡ್, ಸ್ಕೋಲೆಸ್ಟಿಟಿಸಂ ಅಂಡ್ ವೆಲ್‌ಫೇರ್ ಎಕನಾಮಿಕ್ಸ್, ನೋಥ್ರೆ ಡೇಮ್: ಯುನಿವರ್ಸಿಟಿ ಆಫ್ ನೋಥ್ರೆ ಡೇಮ್ ಪ್ರೆಸ್, ೧೯೬೭ ಇನ್ ಹೆರಿ ಲ್ಯಾಂಡ್ರೆತ್ ಅಂಡ್ ಡೇವಿಡ್ ಕೊಲೆಂಡರ್, ಹಿಸ್ಟರಿ ಆಫ್ ಎಕನಾಮಿಕ್ ಥಾಟ್, ಬೋಸ್ಟನ್: ಹೌಟನ್ ಮಿಫ್ಲಿನ್ ಕಂ, ೧೯೮೫

೧೮. ಲಾರಿ ಎಸ್ ಟಾಡ್, ದಿ ಆರ್ಕಿಯಲಾಜಿ ಅಫ್ ಎಕನಾಮಿಕ್ ಐಡಿಯಾಸ್, ಡ್ಯೂಕ್ ಯುನಿವರ್ಸಿಟಿ ಪ್ರೆಸ್,  ೧೯೮೭ ಇನ್ ಹೆರಿ ಲ್ಯಾಂಡ್ರೆತ್ ಅಂಡ್ ಡೇವಿಡ್ ಕೊಲೆಂಡರ್, ಹಿಸ್ಟರಿ ಆಫ್ ಎಕನಾಮಿಕ್ ಥಾಟ್,  ಬೋಸ್ಟನ್: ಹೌಟನ್ ಮಿಫ್ಲಿನ್ ಕಂ, ೧೯೮೫

೧೯. ಡೇವಿಡ್ ಹ್ಯೂಮ್ (ಸಂ), ಎಸ್ಸೇಸ್: ಮೋರಲ್, ಪೊಲಿಟಿಕಲ್ ಅಂಡ್ ಲಿಟರರಿ, ಯುನಿವರ್ಸಿಟಿ ಅಫ್ ಇಂಡಿಯಾನ ಪ್ರೆಸ್, ೧೯೮೭ ಇನ್ ಎ.ಇಸ್ಕೋಬರ್, ಎನ್‌ಕೌಂಟರಿಂಗ್ ಡೆವಲಪ್‌ಮೆಂಟ್ – ದಿ ಮೇಕಿಂಗ್ ಅಂಡ್ ಅನ್‌ಮೇಕಿಂಗ್ ಆಫ್ ದಿ ಥರ್ಡ್ ವರ್ಲ್ಡ್, ಪ್ರಿನ್ಸ್‌ಟನ್: ಪ್ರಿನ್ಸ್‌ಟನ್ ಯುನಿವರ್ಸಿಟಿ ಪ್ರೆಸ್, ೧೯೯೫

೨೦. ಸ್ಕಿನ್ನರ್, " ಪೊಲಿಟಿಲ್ ಎಕನಾಮಿ: ಆಡಂ ಸ್ಮಿಥ್ ಅಂಡ್ ಈಸ್ ಪ್ರಿಡಿಸಿಸೆರ್ಸ್," ಇನ್ ಪಿ. ಜಾನ್ಸ್ ಅಂಡ್  ಸ್ಕಿನ್ನರ್ (ಸಂ), ಆಡಂ ಸ್ಮಿಥ್ ರಿವೀವ್ಡ್, ಎಡಿನ್‌ಬರೋ ಯುನಿವರ್ಸಿಟಿ ಪ್ರೆಸ್, ೧೯೯೨ ಇನ್ ಎ.ಇಸ್ಕೋಬರ್, ಎನ್‌ಕೌಂಟರಿಂಗ್ ಡೆವಲಪ್‌ಮೆಂಟ್ – ದಿ ಮೇಕಿಂಗ್ ಅಂಡ್ ಅನ್‌ಮೇಕಿಂಗ್ ಆಫ್ ದಿ ಥರ್ಡ್ ವರ್ಲ್ಡ್, ಪ್ರಿನ್ಸ್‌ಟನ್: ಪ್ರಿನ್ಸ್‌ಟನ್ ಯುನಿವರ್ಸಿಟಿ ಪ್ರೆಸ್, ೧೯೯೫

೨೧. ಪ್ರೇಮ್ ಚೌಧುರಿ, ಪೊಲಿಟಿಕಲ್ ಎಕಾನಮಿ ಆಫ್ ಪ್ರೊಡಕ್ಷನ್ ಅಂಡ್ ರಿಪ್ರೊಡಕ್ಷನ್ – ಕಾಸ್ಟ್, ಕಸ್ಟಮ್ಸ್ ಅಂಡ್ ಕಮ್ಯುನಿಟಿ ಇನ್ ನೋರ್ಥ್ ಇಂಡಿಯಾ, ನ್ಯೂಡೆಲ್ಲಿ: ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ೨೦೧೧

೨೨. ಬಿ.ಆರ್. ಅಂಬೇಡ್ಕರ್, ಎನಿಹಿಲೇಶನ್ ಆಫ್ ಕಾಸ್ಟ್, ನ್ಯೂಡೆಲ್ಲಿ: ನವಯಾನ ಪ್ರಬ್ಲಿಷಿಂಗ್ ಪ್ರೈವೆಟ್ ಲಿಮಿಟೆಡ್, ೨೦೧೩

೨೩. ಎಂ.ಚಂದ್ರ ಪೂಜಾರಿ, ದಲಿತ ಮಾನವ ಅಭಿವೃದ್ಧಿ, ಬೆಂಗಳೂರು: ಕ್ರಿಯಾ ಪ್ರಕಾಶನ್, ೨೦೧೬

೨೪. ನೀರಾ ಚಂದೋಕೆ, ವೈ ಪೀಪ್‌ಲ್ ಶುಡ್ ನಾಟ್ ಬಿ ಪೂವರ್, ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲೀ, ೪೭

(೧೪), ೨೦೧೨, ಪು.೪೧–೫೦

೨೫.  ಎಂ.ಚಂದ್ರ ಪೂಜಾರಿ, ಯಾಕೀಗ ಭೂಮಿ ಪ್ರಶ್ನೆ? ವಿದ್ಯಾರಣ್ಯ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೧೦

೨೬. ಕೆ.ಪಿಕಣ್ಣನ್, ಇಂಟರೋಗೆಟಿಂಗ್ ಇನ್‌ಕ್ಲುಸಿವ್ ಗ್ರೋಥ್ – ಪವರ್ಟಿ ಆ್ಯಂಡ್ ಇನ್ವಿಕ್ವಾಲಿಟಿ ಇನ್ ಇಂಡಿಯಾ,

ನ್ಯೂಡೆಲ್ಲಿ: ರೌಟ್‌ಲೆಡ್ಜ್, ೨೦೧೪

೨೭. ಹೆರಿ ಲ್ಯಾಂಡ್ರೆತ್ ಅಂಡ್ ಡೇವಿಡ್ ಕೊಲೆಂಡರ್, ಹಿಸ್ಟರಿ ಆಫ್ ಎಕನಾಮಿಕ್ ಥಾಟ್, ಬೋಸ್ಟನ್:

ಹೌಟನ್ ಮಿಫ್ಲಿನ್ ಕಂ, ೧೯೮೫

೨೮. ಮಜೀದ್ ರೆಹನಾಮೆ, “ಪವರ್ಟಿ,” ಇನ್ ವೂಲ್ಫಾಂಗ್ ಸಾಸ್, ದಿ ಡೆವಲಪ್‌ಮೆಂಟ್ ಡಿಕ್ಸ್‌ನರಿ, ನ್ಯೂಡೆಲ್ಲಿ: ಓರಿಯಂಟ್ ಲಾಂಗ್‌ಮೆನ್,

೨೦೦೦, ಪು. ೨೧೧–೩೫

# Language, Choice and Multilingualism in Karnataka

**Dr. B. Shakira Jabeen.**
Associate Professor and Head of the Department,
Nehru Memorial College, Sullia

**Abstract**

*This paper analyses the complexity of the issue of Language in Karnataka under four focal points- Multilingual nature of the Kannada people, Unification, Gokak agitation and the Supreme Court Verdict on the Medium of Instruction. An attempt is made to see the reasons for such a change. The paper attempts to posit the language choice within a socio –linguistic framework.*

***(Keywords:** Multilingualism, Unification and Gokak agitation –concepts that are explained in the course of the paper.)*

**Introduction- land, People and languages:**

Karnataka is the name of a linguistically administered State in South India. From the year 1956 - 1964 it was called Mysore State which in turn emerged out of the princely state of Mysore. The present Karnataka is about 1, 91,791sq kms in area in the Deccan Plateau. It shares its borders with Maharashtra, Andhra Pradesh, Tamil Nadu and Kerala. The Arabian Sea forms its coastline on the western side. Karnataka is one of the 29 States of independent India. The 2015 Census pegs the population of Karnataka at 6,50,61069.

Philologists have categorized Kannada as belonging to the Dravidian language family. The word 'dravida' refers to territory, ethnicity and language. The territory it refers to is to the South of Vindhyas. As a term that denotes ethnicity, it refers to the people who are believes to be of Dravidian race. It also refers to the language group called Dravidian. Kannada , Telugu, Tamil, Tulu and Malayalam are believed to belong to this language family -"The name Dravidian is derived from the Sanskrit word- 'dravida' which is derived from an older version –' dramila', 'damila' which in turn is identical with the name Tamil" .In reality the term refers only to Tamil and does not include the other speech communities. Pampa in his ' *Vikramarjuna Vijaya'* refers to the armies of various countries- "Magadha, Sourashtra, Varata Lata Karnataka… Malaya Maalava Nepala…Kashmeera Koushikandhra Dravila…". These are references to prove that 'dravida' and 'Karnataka' are two different entities as far as language is concerned. Quoting Shamba Joshi, K.V.Srinivasa Murthy writes- 'Herbert Risley made the mistake of using the term 'dravida' as a cover term to refer to the people of South of India". In the same volume K.V.S.Murthy makes a mention that Alooru Venkatarayaru had brought this to the notice of the Central Govt. and had

made a request to add Karnataka to the National Anthem. The land and the people have had an independent entity from ancient times. The Kannada people are believed to be one of the 'vaduga' referred to in the Shangam literature. It is believed that Karnataka is home to people of diverse racial background.

In the past sixty years, there are at least three different points in the language attitude of the people of this state. An effort is made here to address the issue with its multiple dimensions with four reference points. They are-

1. Multilingaulism
2. Unification and its inclusive narrative
3. Gokak Agitation
4. Supreme Court verdict on Medium of Instruction

**Multilingualism:**

The whole of South India irrespective of whether it was under Madras Presidency or the Princely rule was multilingual. This multilingualism is different from the Western idea of bilingualism, trilingualism and multilingualism where the second and the third languages are learnt after learning mother tongue or the home language. There the learning takes place in a controlled setting like a school. Multilingualism in South India in general and the old Mysore area (Princely state of Mysore) in particular, is totally different. Here a child under normal circumstances picks up at least three languages simultaneously, before he enters school. Be it home, school or administration, the approach to language has been multilingual here. C.P. Brown, an officer under the British during 1820-1854, gives a picture of the language scene- "Governmental business in South India is chiefly transacted in the language of the Hindus, either Tamil, Telugu, Kannadi ( Kannada), Malayalam, Marata( Marathi); while the Mussalmans still speak Hindustani ( as well as the local native tongue…". The Fifteenth Century poet Srinatha praises his patron Ananya of Areti family having control over-" Arabic, Turkish, Oriya, kannada, Telugu, the barbarous languages of the Sakas, Sind and the Sauvira, the Karhata language and many other exotic languages". Srinatha gives a multilingual description of his own poetry- " In its maturity, my poetry is considered Sanskrit, the method of my utterance is felt to be Telugu; it doesn't matter what people call it! My poetry in truth is Karnataka language". Srinatha refers to the being of multiple languages and their use as normal occurance. This also refers to the give and take that took place between languages that resulted in the stylistic resemblance. Srinatha is not comparing one language with the other or positing one above the other. The Vijayanagar Kings, who ruled over multilingual geographical space were polyglots. Krishnadevaraya " patronized poets who composed in Telugu, Kannada, Sanskrit, and Tamil and ruled territory that now lies in Karntaka, Andhra Pradesh, Kerala and Tamil Nadu" . " The Nayaka courts of the late sixteenth through eighteenth centuries, which succeeded the Vijayanagara dynasty, produced a vast literature in Telugu, Tamil, an Sanskrit clearly aimed at

multilingual audience". In the Seventeenth Century, Rani Belavadi Mallammaji and her brother "were taught Kannada, Marathi, Urdu and Sanskrit." Linguistic boundaries were amoeba type- fluid. The coastal Andhra included " some regions that are today part of the neighboring Oriya linguistic state where Telugu inscriptions have been found. Simialrly, Rayalseema once included regions that are dominated by Kannada-tongue - speakers and are now in the neighboring Kannada linguistic state of Karnataka; These facts attest to the complex multilingualism out of which present –day –mother tongue commitments and geo –political reorganization have grown". The Kannada administrative territory was formed out of the multilingual space mentioned above.

The prevalence of multiple languages resulted in "polyglossia" with such individuals typically navigating multiple linguistic codes and scripts".The effect of knowing and using multiple languages right from childhood has not been studied to its full extent**.** The making of the linguistic states was a paradigm shift from multilingual to unilingual in administration, judiciary and education. True to the multilingual ethos of the state, single language loyalty in all domains is resisted in Karnataka. We need a different theoretical tool to study the language attitude of Kannada people. With 162 languages, Karnataka is the most multilingual state in south India.

**2.Unification and its inclusive narrative:**

Karnataka was coming together of not only the scattered Kannada speaking territories but also of multiple languages- Tulu, Kodava, Konkani, Byary, Gowda Kannda , Havyaka Kannada, Urdu, Banjara and people speaking many more languages. When the rest the of the independent India was redrawing the cartography on unilingual lines, Karnataka was formed by unifying the scattered Kannada speaking people and other languages speaking people who identified themselves with 'Kannada' which was more than language. Kannada was a worldview. Karnataka did not see the kind of riots Andhra witnessed as a run up to the formation of the linguistic administrative territory. What was missing in Mysore /Karnataka was the binary of Kannada v/s Hindi, Kannada v/s Sanskrit or us v/s them. In the absence of such a binary which was central to the language movement in Andhra Pradesh and Tamil Nadu, the movement for Unification is a potential topic of study in a multilingual country like India. Karnataka did not display the vehemence and violence that Andhra showed in demanding a linguistic state. This prompted Alooru Venkataraya to say –" Karantaka has been created through nonviolence". Unlike any other linguistically administered state, Karnataka was formed on an inclusive narrative. The narrative was based on the socio linguistic ground reality of the Kannada territory. "Neither in Mysore country nor in Karnataka country are there only Kannada speakers……the principle of building up a state on the basis of language alone is not correct". H.S. Siddaiah was referring to a larger issue that can form the basis of a state like Karnataka. What is the larger issue which can bind people together? This needs a revisit in the wake of the formation of two Telugu states.

Language alone has not held people under one administrative territory. Karnataka needed a narrative that could describe the existence of multiple languages speaking people under one umbrella. This inclusive narrative had guarded people against linguism.

Karnataka did not make an effort to be a part of the Dravidian identity which the Tamil Nadu was successfully establishing. The Kannada movement was not against either Hindi or Sanskrit. There was a need to be correct within the ambit of the constitution on the one hand and be accommodative of the multilingual situation on the other. The Kannada identity was a narrative and not a counter narrative as the Dravida movement was. The Kannada movement played a matured accommodating role with Sanskrit. " Sanskrit is like a mother to Kannadda" . The enrichment of Kannada language with Sanskrit phonological and syntactical features, the Sanskrit literary models on which Kannada poetry was enriched, is what D.V. Gundappa had on his mind when he referred to a filial bond between Kannada and Sanskrit. Kannada played an accommodating role with Tulu, Kodava, Konkani, Byari and other languages too. The making of Karnataka has to be seen as expansion of an already existing identity - "Mysoreans were excessively conscious of their identity as Mysoreans". The identity that was being nurtured was a multilingual, multi cultural multi dimensional, development oriented worldview. There have been concrete attempts to explain this inclusive worldview.

Aluru Venkatarao summed up his notion of Kannada on the occasion of Unification of Karnataka in 1956- " In short, we should not forget that Karnataka is much broader an entity than Kannada. Not only the speakers of dialects, we should also not forget the minorities who speak other (neighboring) languages- in the construction of united Karnataka. This is a principle to be kept in mind. In other words, Kannada has the dominant status. But knowledge is welcome from all sides..." Karnataka is the name that encompasses all the languages. Kannada as a blanket term, is reason enough to be tolerant and soft towards the other languages. Aluru Venkataraya called this ' Kannadathwa'- spirit of Kannada, the 'thisness', 'swabhava'of Kannada people. Explaining what 'karnatakatwa' meant to him, Aluru writes-" My notion of karnatakatwa is universal". "It can be called regional nationalism. It's not political, neither it is purely religious. It is culture specific and language is it's foundation" . Yet, Aluru's ' karnatakatwa' was pushed to the background when the people suspected that the meaning of the term was moving towards being exclusive- vaidic, brahminical and Sanskrit oriented. It was unacceptable to a people who had a tradition of inclusion. Aluru must be credited with beginning the tradition of naming the inclusive socio- linguistic life of Kannada people.

The next attempt at describing the same idea as 'Kanndatana' by B.M. Shree. There are others like Deputy Chennabasappa, Shantakavi, Hattangadi Narayana Rayaru, Panje Mangesha Rayaru, Govinda Pai and many more who toiled to spread awareness about language and the culture it encompassed. Strangely, many who

worked relentlessly for the Unification and the continuation of an inclusive linguistic culture did not have Kannada as their mother tongue.

Kuvempu's call to 'be kannada' is another attempt at inclusive narrative. Kuvempu's idea transcends language and geography- to 'be kannada' it is not essential to live in Karnataka. To him, Kannada is a mindset which could be practiced anywhere. This mindset would make a person global/universal-'vishwa manava'. Accordingly, someone who is 'Kannada' becomes a global citizen whose spirit was boundless. Ham.Pa. Ngaraj writes about the unique quality of the Kannada mindset-coordination, inclusiveness, religious tolerance,charitable, heroic,generous, sacrificing/renouncing…" Girish Karnad referred to 'Kannada culture' being against violence to a T.V.Channel during the protest against M.M.Kalburgi's murder on 30-8-2015. Dr. Rajendra Chennry expressed his " concern about the society in Karnataka becoming forgetful of the great tradition of free intellectual enquiry which shaped modern Kannada culture". Both Karnad and Chenny were very close to Aluru's description of Kannadatwa-"There is no room for violence in Karnataka. The notion of Karntakatwa is all encompassing…". The inclusive narrative would embrace diversity within its fold.

It is imperative at this point in time to understand this great idea of Kanndathwa/ kanndathana/ be kannada. "There is an urgent need to search for the Kannada model". Efforts to replicate the Telugu or the Tamil language models would rob Kannada of its essence of being Kannada. The language model that has been followed in Karnataka, the merits of the model that includes linguistic diversity will have to be spelt out. The Kannada people have scuttled monolingual policies if they go against the ethos of a multilingual mindset. People have set domains for languages- Sanskrit is used in religious occasions in temples, homes and marriages and in invocation during formal functions. Kannada marriage ceremony popularized by Kuvempu- 'manthra mangalya' is also performed in some marriages. Tamil, Telugu, Hindustani and Kannada are a pallet of choice in music. Sanskrit and English pepper formal Kannada speeches and conversation. Tamil, Telugu and Malayalam, Hindi and good Kannada films are watched, Kannada Newspapers are favoured , a large number of English newspapers also sell, English medium schools are preferred over Kannada schools. Multilingualism and the resultant mindset- multilinguality has enabled the people to glide from language to language, mix languages, switch code, substitute phonemes and morphemes, intermix syntax and choose different languages for different functions and look wanting when forced to speak/use one language! The various outfits that drum for Kannada in all domains of life are in reality forcing a unilingual model that is borrowed from the neighboring states which in reality was introduced by the West. Modern Karnataka is fit to be called a linguistic marvel- a laboratory of multilingualism.

The inclusive narratives did not come in the way of the implementation of Kannada in Administration and Judiciary. The Karnataka Official Language Act-1963 is the

legislature made by the Government of Karnataka to declare Kannada as the Official Language of the State. The Act also ruled that English to be continued to be used for official purposes until the Government otherwise directs. In the year 1980, the state Government ordered that Kannada will be the official administrative language. Punitive action against the officials who did not use Kannada ensured the use of it for all official purposes.

Kannada is the language in the domain of Judiciary in the lower courts. The Constitution is very clear about the Language to be used in the higher courts- High Courts and Supreme Courts. Art.348 states that the language of these courts has to be English. As per Article 348 of the Constitution of India the language of the higher courts has to be English. The implementation of the Official Language in the domains of Administration and Judiciary in the State can be termed a success story- given the multilingual landscape of the State. The billboards have a stipulated rule for the use of script- Kannada followed by English. …. The rule is followed dutifully where the English name is written in Kannada script. People of kannada have willingly accepted these changes. There is no resistance or debate on the use of Kannada in administration or judiciary. But the **Language of Edu**cation has been a debatable issue in Karnataka whose average literacy rate, as per the 2011 Census of India was 75.60%.

**3.Gokak Agitation:**

The Unified Karnataka, true to its multilingual ethos and the inclusive narrative- 'Karnatakathwa/ Kannadathana/ be kannada', coined by the writers, was easy going with the issue of Medium of Instruction. Karantaka had inherited a multilingual media education. The task of providing education for all could not be realized without the help of private educational institutions. Between 1960 -1987, the Government of Karnataka allowed English medium schools to be opened. This is in addition to the English medium schools that existed before the Unification. It was at the Secondary School level that there were Seven languages offered as First languages. Sanskrit was one of them. There was a huge disparity in the corpus planning of Sanskrit texts visa vie other languages offered. Students began letters of Sanskrit alphabets in Class VIII. Sanskrit was made ultra easy with an option to write answers in English, Kannada or Hindi. Majority of the students opted for Sanskrit as they could score 90+ marks effortlessly which in turn would catapult them to a better rank. Kannada, on the other hand was made quite a hard nut to crack with Old Kannada, Middle Kannada and large chunks of grammar. Students whose mother tongue was Kannada found the texts difficult. On learning of the dwindling number of students opting for Kannada, the then Chief Minister Devaraj Urs began the debate on Language in education by ordering the removal of Sanskrit from the list of First Languages and relegated it to the level of Third language at the Secondary level. The move was defended on the grounds that Sanskrit was not a mother tongue and it was not studied at the primary level. The next Chief minister Mr. Gundu Rao reverted the order- brought Sanskrit

back on the list of First Languages as " the Udupi Swamijis made a request to the CM that Sanskrit should be given importance in education.". This move triggered widespread opposition in Karnataka. The Government set up a Committee under the Chairmanship of V.K. Gokak to look into the language issue and submit a report.

Gokak Committee submitted its report on the status of Sanskrit and Kannada in Education at the Secondary level. According to the Report, the Three Language Formula was proposed. The focus of Gokak agitation was the status of Kannada in education. To press the Govt. to implement the Gokak report, there was unprecedented widespread agitation all over Karnataka. Be it Unification or the Gokak agitation, the people who were prominent in these two agitations were writers of Kannada. "Sham. Ba. Joshi was the President of the Task Force of the Gokaka agitation. Basavaraj Kattiamni, Dr. R. C. Hiremat, Chennaveera kanavi, Dr. R.U. Dharwadkar,Dr. S.M. Vrishabhendra swamy, V.S. Hiregowda and others were the Vice –Presidents. Prof. Chandrashekhar Patil M.M. Kalburgi, Gurulinga Kapase were the Secretaries". It is interesting to note that there is a long tradition of writers being the torch bearers of language related issues in Karnataka. The outcome of the agitation was the Government order dated 30-4-1982. Based on the Gokak report, the order made Kannada/ Mother tongue as the First language at the Secondary level. Patil Puttappa who spearheaded the agitation,told Gokak in Hubballi –" You have designed a formula that can boost the growth of all regional languages of India. Your report is not only applicable to Karnataka but to all the other states of India. All that one has to do is to substitute the word 'Kannada' with their own regional language". The Gokak Report was in keeping with the Three language Formula proposed by the Kothari Commission Report and the National Education Policy of 1968.

In a bid to provide the prime of place for Kannada at the Primary level, the government issued an order dated 20-7-1982, making Kannada the sole first language for the Secondary schools. It also stated that 'the teaching of Kannada from first standard will commence from the academic year 1983' The order was in keeping with the *Resolution* adopted by the Provincial Education Minister's Conference held in August 1949 which states- " The Medium of Instruction and examination in the Junior basic stage must be the mother tongue of the child and, where the mother tongue is different from the regional and state language , arrangements must be made for instruction in the mother tongue…The mother tongue will be the language declared by the parent and guardian to be mother tongue."The implementation of the order poses multiple problems as the linguistically reorganized states continue to have a multilingual population. Without the political will to implement multilingual education, the states would find it difficult to impart education in multiple languages. The problem is simply a fall out of the linguistic reorganization of states which catapulted language to be an identity marker within the larger frame of a new nation state. The complications are due to the desire of leaders to see one language being used in all domains which is not in the genetic profile of Kannada people. Yet, the

Gokak Report was an opportunity to impart education in Kannada which was lost due to two factors-

a. Desire for higher education

b. Private providers of education

**a .Desire for higher education:** The Gokak agitation ultimately gave Kannada the status of First language carrying 125 marks at the SSLC level. As the literacy rate increased in Karnataka, so did the demand for English as Medium of instruction. Post Unification, most of the leaders who came to prominence settled in Bangalore and sent their children to English medium schools. The direct correlation between western education and the job opportunities, coupled with the raising standard of the agrarian communities triggered a desire to be educated". In Karnataka " it was the middle castes such as the Lingayats and Vokkaligas who tried to assert their economic strength and aspire for opportunities in education, employment and politics". The Dalit and backward community writes and leaders professed salvation through English. Students preferred to opt for English as a medium even at primary level as they found the switch over to English at Class V onwards smoother.

Educational institutions were set up as a means to strengthen caste. Successive governments too pandered to demands made by caste groups. At the time of the Unification, there was Karnataka Lingayat Education Society ( K L E S)set up in the year 1916 and the Vokkalliga Sangha set up in 1906, running colleges and hostels. The rise of these communities in education and their desire to unseat the Brahmins from cornering majority of government jobs and the tacit support of the Maharaja of Mysore that resulted in the implementation of the Miller's Committee report – providing 50% of the posts to the non- Brahmins, are issues that are inter woven in a complex manner with the choice of a Medium of Instruction. Education in English is a means for the upward mobility of these communities whose aim is not basic education but higher education. Their aim is to fill up the posts in various professional colleges set up by their respective communities, and the lure of job opportunities in the US and Europe for the IT. The issue of MI in Karnataka has to be viewed through the prism of all these socio-economic, socio- linguistic factors. The Reformative action by the Government in terms of reserved seats, scholarships and loans for education has triggered similar desire for a globally accepted MI among the Scheduled Castes and the OBCs.

The role of language in Education cannot be studied only from the point of view of language preferences based on caste. The preference for English education transcends caste boundaries. Though the demand for starting educational institutions and the sanction of permission for such institutions is based on caste, it is the desire for technical and medical education that is prompting parents to opt for English medium. The mushrooming of engineering colleges in every nook and corner of Karnataka coupled with the job opportunities for the engineers in the IT and ITES, the

prestige factor attached to going to foreign countries- areall factors that reflect a people who are out to achieve upward mobility through higher education. There is also an imbalance in the number of jobs generated and the number of educated youngsters vying for these jobs. A good grip over the spoken form of English language becomes the litmus test for selection of a candidate. The existence of 1652 languages in the country itself creates a need for a language which is perceived as neutral.

**Profile of the Private providers of education:** The private providers of education who had spread their roots in Karnataka were eager to provide primary education in English in exchange of a fee. Missionaries, Caste Associations, mathas of all caste, Big Business houses like the Birla, U.B. Group, Ambanis, Various Clubs like the Rotary International and Lions, Municipal Corporations, Bar Council, Defense Services, Private Individuals of all communities, Politicians of all hues, Trusts, NGOs and the Government are providing education at various levels in Karnataka . Some of the Former Ministers, MLAs and Parliamentarians are also providers of education in Karnataka. Any reading of language issues in Karnataka cannot neglect this development- the blurring line between the private and the government.

The Business of education has more or less united all the stakeholders. The associations like the COMED –K and Management associations are not on caste lines. Lingayats, Brahmins, Muslims, Christians, Jains, Dalits and other providers of education share the same platform. In the act of giving and receiving education in English medium, the parents and the students are with the managements. Any move the Government makes to introduce checks and balance regarding the medium of education under pressure from writers and members of the various Kannada organizations, the private providers have gone to court seeking redress.

**4.The Supreme court Verdict:**

The Supreme Court verdict was on a case in which the Government and the Parent Teachers Association and the Private providers of education were involved. The Kannada people who fought for the supremacy of Kannada in the field of education during the Gokak agitation, have demanded for a right to send their children to English medium schools. The legal battle and the verdict that followed is a metaphor for the changing times.

On the side of the state of Karnataka , Commissioner of Public Instruction and Fifteen educationists of Karntaka – all pressing for primary education- Class I- IV in Kannada Medium on the grounds that it was the mother tongue of majority of the people and it was the language in which the children were comfortable with.

This group was fighting a legal battle against Private Schools management Association and the Parents Association. A cursory glance at a few focal points as a run up to the verdict would lend clarity to a very complex issue.

- On 2-7-2008-A Full bench of the Karnataka High Court heard the Writ Petition No.14363 of 1994 and quashed those clauses (No 2,3,6 &8) that brought the recognized unaided schools under the Language policy of the state. Thus, the High Court restricted the Government order of 29-4-1994 to the Schools run by the Government and the Government Aided Schools.
- On 3-7-2009- a Division Bench of the High Court asked the Government to comply with the judgment of 2-7-2008.
- 22-1-2012- A single judge directed the State Government to grant permission to a petitioner to run English Medium school from Class I-IV.
- This writ petition was challenged the Government before the Division Bench of the High Court.
- 21-2-2012- The High Court dismissed the Writ Petition filed by the Government.

**It is against this order of dismissal by the High Court that the ' State of Karnataka and the Commissioner of Public Instruction, Bangalore filed a Special Leave Petition before the Supreme Court.**

**A division Bench of the Supreme Court heard the petition.** On 5-7-2013, and by an order referred 5 Questions for consideration by the Constitution Bench. The answer to those 5 questions is what the Supreme Court verdict is made of.

The 5 Questions and the answers in short are-

1.What does Mother tongue mean? If it referred to as the language in which the child is comfortable with , then who will decide the same?

The answer by the Constitution bench was- Mother tongue in the context of the Constitution would mean the language of linguistic minority in the state and it is the parent or the guardian of the child who will decide what the mother tongue of the child is. The Constitution nowhere provides that the mother tongue is the language in which the child is comfortable with,… we can not either expand the power of the state or restrict the fundamental right by saying that mother tongue is the language in which the child is comfortable with.

2.Whether a student or a parent has a right to choose a medium of instruction at primary stage?

As an answer the bench came to the conclusion that " the freedom of speech and the expression will include the right of a child to be educated in the medium of instruction of his choice… a child, and on his behalf his parent or guardian , has the right to choose the medium of instruction at the primary school stage under Article 19(1)(a) and not under Article 21 or 21A of the Constitution.

3.Does the imposition of mother tongue in any way affect the fundamental rights under Article 14, 19, 29 and 30 of the Constitution?

The answer to this question referred to Art. 29(1) –' Protection of interests of the minorities' and Art. 30(1) which guarantees the 'Right of minorities to establish and administer educational institutions of their choice' . Under this Article 'the linguistic minorities have a right to choose the medium of instruction' The Constitution Bench held that ' the imposition of mother tongue affects the fundamental rights under Articles 19, 29 an 30 of the Constitution.

4. Whether the Government recognized schools are inclusive of both Govt. aided schools and private and unaided schools?.

As an answer to this question the Bench held that " the Government recognized schools will not only include government aided schools but also unaided schools which have been granted recognition".

5. Whether the State can by virtue of Article 350-A of the Constitution compel the linguistic minorities to choose their mother tongue only as medium of instruction in primary schools?

Art. 350 A directs the State to facilitate instruction in mother tongue for the linguistic minority groups. The Court held that "State had no power under Art. 350 A of the Constitution to compel the linguistic minorities to choose their mother tongue only as medium of instruction in primary schools".

Interesting take away from this verdict is-

- It dissociated the official language and the language of education there by making language choice domain specific.
- Taking cognizance of the changes in the society, it takes the language of education out of the traditional baggage and puts it directly under the global market.
- Education gets directly associated with employment, Englsih as a Medium of Instruction is perceived to be a means to that end.

The four focal points taken up for discussion in this paper – Multilingualism, Unification, Gokak agitation and the Supreme Court verdict mark four different language attitude by the people of Karnataka. They are-

i. The Unification was an inclusive movement.

ii. The Gokak agitation is a Kannada movement. Such an agitation for the supremacy of Kannada is unprecedented in Karnataka. The agitation was to establish Kannada in the sphere of education.

iii. The response of the Kannada people to the Supreme Court verdict on the

medium of Instruction forces one to revisit the Gokak agitation. There was not a whimper from the general public against the ruling of the Apex court.

How do we account for this change in attitude? Globalization, English language and the non parochial attitude of the Kannada people have been blamed for these shifting language loyalties. There are practical difficulties in studying this change of attitude without a theoretical platform to posit it. Gokak agitation for Kannada in education and the Supreme Court verdict where the state lost to the private providers of English education do not gel with each other. The language attitude has moved from a narrative of unifying multilingual mind set to the demand for supremacy of Kannada in the domain of education to the rejection of Kannada as a medium of instruction. The reasons for this language promiscuity among the people of Karnataka is also due to the **Linguistic globalization** that has set in.

Globalization, in reality should have thrown up multiple language choices. Multipolarity which is a norm in post modern world, does not seem to apply to language. Globalization seems like the globalization of English in certain domains. Spread of English in the post colonial era is a strange phenomenon. Heather Murray interpreted Globalization of English-"The increasing intrusion of the English language into the lives of town and city dwellers all over the world… it also skews the socio – economic order in favour of those who are proficient in English". But how widespread is the use of English among our youth is a topic not worked on. For the youth of this country, English has brought tremendous opportunities. Linguistic globalization is a pan Indian and pan world phenomenon. Yet, using one language for all domains goes against the multilingual ethos of the Kannada people. Hence, the language choices they have made to accommodate multiple languages, needs more academic attention.

**Conclusion:**

Kannada people have exhibited multiple choice of language. They have accepted Kannada in administration and judiciary. They have moved from Kannada as first language to English as Medium of Instruction because it is convenient and profitable. It should not be construed that they reject one language for the other. Today there is a need to know English along with other languages. The modern nation state's endeavor to make the people handle all functions of life - administration, Judiciary and education, rituals and entertainment in one single language will not be a success with multilingual people. People of Karnataka have made domain specific language choice- " English for economic progress, and, normally mother tongue for cultural purposes and as a token of identity." The policy makers will have to accommodate the people's linguistic aspirations as "language policy exists within a complex set of social, political, economic, religious, demographic, educational and cultural factors that make up the full ecology of human life". In Karnataka, the policy makers too

seem to have understood that there can be a domain specific choice of language-going by their near silence on the Supreme Court verdict.

**Acknowledgement:**

(I am indebted to Prof. N. Krishnaswamy of CIEFL for inspiring many like me to see the language issue from a non Western point of view and prodding me to work on this topic. I am indebted to Dr, J, Sadananda of Kuvempu Univerrsity for helping me to see this issue of language choice within a framework.)

**Contributor:**

Dr. Shakira Jabeen B is the Head of the Department of English at Nehru Memorial College, Sullia, Karnataka. She is an alumnus of CIEFL- Hyderabad, Dept. of Political Science, Kuvempu University- Shivmogga and a former faculty of RIESI, Bangalore. Her area of research is 'Language Policy'. Her other areas of interest are - Socio linguistics, Cultural Studies, Theory and ELT. (khan.shakira @gmail.com)

**Notes and References:**

1. R. Narasimhacharya. History of Kannada Language, Prasaranga, Mysore University, 1934:10.
2. As In K.V. Srinivasa Murthy. Kannada Chintane Mattu Parampare, Allama Prabhu Jana Kalyana Samsthe, 2000:280
3. Brown, C.P. *Misra Bhasha Nighantu*, Madras Christian Knowledge Society Press, 1854 as In Lisa Mitchel, *Language Emotions, and Politics in South India*, Permanent Black, India,2010:5 .
4. Srinatha. *Sri Bhimasena Puranamu* , as In Narayana Rao et al, *Textures of Time: Writing History in South India 1600-1800*, Permanent Black, Delhi,2001:20, In. Lisa Michel. Language emotion and Politics in South India, Permanent Black, 2010:130.
5. Aluru Venkatarayaru. *Karnatakadad Gatavaibhava*,Samaja Pustakalaya, Dharwad,1968:151.
6. Lisa Mitchel, *Language , Emotions and Politics in South India*, Permanent Black, India,2010:41.
7. Velcheru Narayana Rao et al. Symbols of Substance: Court and state in Nayaka period Tamilnadu, Delhi: Oxford University Press, 1992:334 as In Lisa Mitchell.2010:10.
8. Dr. Jyothsna kamath. *Education in Karnataka through the Ages,* The Mythic society, Bangalore, 2009:132.
9. Lisa Mitchell.2010:42
10. Lisa Mitchel, *Language , Emotions and Politics in South India*, Permanent Black, India,2010:130
11. Adya Ramacharya. Karnataka Ekikarana in H.S. Krishnaswamy Iyyangar(Ed.) Avalokana 1985:210
12. H.S.Sidddaiah.Mysore Legislative Assembly Debate 13 (1955):993
13. D.V.Gundappa. Sahithya Shakthi. Kavyalaya Prakashakaru, Mysore,1950:173.
14. C.R.Govindaraju.United Karnataka. KannadaUniversity,Hampi,2009:23
15. Janaki Nair. *Language and the Right to the City*. EPW-Vol xxxv. No, 47. Nov 18, 2000
16. *Jayakarnataka, Vol.7-1: 133*
17. *As quoted by Venkatesha Salangi. Alooru Venkatarayaru. Kannda Sahithya*

*Parishat,1970:159*

18. Ham.Pa. Nagaraj. Karnataka Samskriti,H.S. Krishnaswamy (Ed.)Avalokana, Directorate of Kannada and Culture,1985:292
19. Rajendra chenny. No Tolerance of intolerance , The Hindu, 6-9-2015
20. Based on the information provided by Venkatasha salangi. *Aluru Venkatarayaru,* Kannada Sahithya parishat,1970:133-160
21. A. Murigeppa. In Rahmath Tarikere. Karnatakada Sufigalu, Kannada University, Hampi,2008:3
22. Censusindia.gov.in/2011 prov_totals.
23. Patil Puttappa. Gokak Chaluvali, In Vijay Punacha Tambanda(ed.) . Samakaleena KarnatakaCharitreya Vividha Ayamagalu, Vol.VI, Kannada University, Hampi,2010:202
24. ibid:207
25. ibid:272-273
26. B. Mallikarjun. Evolution of Language Policy in Karnataka, In K.S
27. Rajyashree & U.N. Singh(Ed.) Papers in Applied Llingusitics, CIIL,2001:130
28. AIR SCW ,No.20, Dated 30-5-2014:2920
29. Rekha Kaul. Caste, Class and Education, Sage Publications, New delhi,1993:28
30. ibid
31. Civil Appeal Nos 5166-5190 of 2013 as cited in 2014 AIR SCW 2913
32. Writ Petition No. 290 of 2009
33. Writ Appeal No. 2740 of 1997
34. Shakira Jabeen B, Language of education in Karnataka and the Supreme Court Verdict, Asian Journal of development matters, Vol.9, No.1, June 2015
35. Civil Appeal Nos. 5166-5190 of 2013 as cited in 2014 AIR SCW 2913
36. 2014 AIR SCW 2908, dated 30- 6- 2014 , para 32.G
37. AIR SCW 2014:2924
38. The Constitution of India, Karnataka Law Journal Publications, Bangalore,2013:31
39. AIR SCW 2014:2928
40. ibid: 2930
41. ibid

42. Shakira Jabeen B. Language of education in Karnataka and the Supreme Court Verdict, Asian Journal of development matters, Vol.9, No.1, June 2015
43. In a review of Claus Guntzmann and Frauke Intemann(eds.) The Globalization of Englsih and the English Language Classroom,Gunter Narr Verlag, Tubingen, 2005
44. B. Mallikarjun.Lingusitc Dimension of Globalization in India,In.Udaya Narayana Singh et al (Ed.) Language, Society and Culture,CIIL&MGIHU,2004:157
45. Bernard Spolsky. Language Policy, Cambridge University Press, 2004:ix

# ವಿಕೇಂದ್ರೀಕರಣದಲ್ಲಿ ಗ್ರಾಮ ಪಂಚಾಯತಿಗಳ ಕಾರ್ಯನಿರ್ವಹಣೆ

**ಡಾ. ಎಂ. ಯರಿಸ್ವಾಮಿ**

ಸಹ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಸಾರಾಂಶ**

ವಿಕೇಂದ್ರೀಕರಣ ವ್ಯವಸ್ಥೆಯ ಬುನಾದಿಯಾಗಿರುವ ಗ್ರಾಮ ಪಂಚಾಯತಿಗಳ ಕಾರ್ಯನಿರ್ವಹಣೆ ಕುರಿತು ಅಧ್ಯಯನ ಮಾಡಿಲಾಗಿದ್ದು ಇದೊಂದು ಸಂಶೋಧನ ಲೇಖನವಾಗಿದೆ. ತಳಮಟ್ಟದಲ್ಲಿ ಕಾರ್ಯನಿರ್ವವಹಿಸುತ್ತಿರುವ ಗ್ರಾಮಪಂಚಾಯತ್ ಸ್ವಾತಂತ್ರ್ಯನಂತರ ಸಮಾಜದ ಕೆಳವರ್ಗಗಳ ಕಲ್ಯಾಣಕ್ಕಾಗಿ ಬಡವರ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಜಾರಿಗೆ ತರಲಾಯಿತು. ಈ ಕಾರ್ಯಕ್ರಮಗಳ ಮುಖ್ಯ ಉದ್ದೇಶ ಕೆಳವರ್ಗಗಳ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆ. ಆದರೆ ಈ ಕಾರ್ಯಕ್ರಮಗಳು 'ನಿರೀಕ್ಷಿತ ಫಲವನ್ನು 'ನೀಡಲಿಲ್ಲ ನಮ್ಮಲ್ಲಿನ ವಿಕೇಂದ್ರೀಕರಣಕ್ಕೆ ಎರಡು ಮುಖಗಳಿವೆ. ಒಂದು ಮೇಲ್‌ಸ್ತರದಲ್ಲಿ ರೂಪುಗೊಳ್ಳುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ತಳಮಟ್ಟದ ಜನರಿಗೆ ತಲುಪಿಸುವುದು. ಎರಡು, ತಳಮಟ್ಟದ ಜನರನ್ನು ಸಶಕ್ತೀಕರಣಗೊಳಿಸುವುದು. ಒಂದನೇ ಉದ್ದೇಶ ಈಡೇರಿದರೆ ಎರಡನೆ ಉದ್ದೇಶ ಈಡೇರುತ್ತದೆ ಎನ್ನುವ ನಂಬಿಕೆ ಇದೆ. ಅಂದರೆ ತಳಮಟ್ಟದ ಜನರ ಮುಖ್ಯ ಸಮಸ್ಯೆ ಇಂದು ಕೂಡ ಮೂಲಭೂತ ಸೌಲಭ್ಯಗಳ – ಕುಡಿಯುವ 'ನೀರು, ನೈರ್ಮಲ್ಯ, ವಸತಿ, ಉದ್ಯೋಗ ಮತ್ತು ಶಿಕ್ಷಣ ಇತ್ಯಾದಿಗಳ – ಕೊರತೆ. ಇವುಗಳನ್ನು ಅವರು ಹೊಂದಿದರೆ ಅಥವಾ ಹೊಂದಲು ಶಕ್ತರಾದರೆ ಇತರ ಕ್ಷೇತ್ರದಲ್ಲಿ ಸಶಕ್ತೀಕರಣಗೊಳ್ಳಲು ಅವರಿಗೆ ಅನುಕೂಲವಾಗುತ್ತದೆ ಎನ್ನುವ ಗ್ರಹಿಕೆ ಇದೆ. ಮೇಲೆ ವಿವರಿಸಿದ ಗ್ರಹಿಕೆಯನ್ನು ಯಥಾ ರೀತಿಯಲ್ಲಿ ಒಪ್ಪಿಕೊಂಡು, ಅವು ಎಷ್ಟರ ಮಟ್ಟಿಗೆ ತಳಮಟ್ಟದಲ್ಲಿ ಕಾರ್ಯರೂಪಕ್ಕೆ ಬಂದಿದೆ ಅಥವಾ ಪಂಚಾಯತ್ ತನ್ನ ಜವಾಬ್ದಾರಿಯನ್ನು ಎಷ್ಟು ಸಮರ್ಪಕವಾಗಿ ನಿಭಾಯಿಸಿದೆ ಎಂದು ವಿಶ್ಲೇಷಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶ. ಗ್ರಾಮಪಂಚಾಯಿತಿಯ ಪಾರ್ಯನಿರ್ವಃಣೆ ಹೇಗಿದೆ. ಜತೆಗೆ ಹಲವಾರು ವಿಚಾರಗಳಲ್ಲಿ ತಳಮಟ್ಟದ ಜನರ ಸಹಭಾಗಿತ್ವವನ್ನು ನಿರೀಕ್ಷಿಸಲಾಗುತ್ತದೆ.

ಇಂದಿಗೂ ಬಹುತೇಕ ಗ್ರಾಮಗಳಲ್ಲಿ ಸಾಮಾಜಿಕವಾಗಿ ಸಾಕಷ್ಟು ವೈತ್ಯಾಸ, ಭೇದ ಭಾವನೆಗಳು, ಭಿನ್ನಾಬಿಪ್ರಾಯಗಳು ಇದ್ದು ಮತ್ತು ರಾಜಕೀಯ ಅರಿವು ಮತ್ತು ಭಾಗವಹಿಸುವಿಕೆ ಬಗ್ಗೆ ಸಾಕಷ್ಟು ಪರಿಹಾರಗಳನ್ನು ಮತ್ತು ಸೂಕ್ತ ಸಲಹೆಗಳನ್ನು ಕೊಡಲಾಗಿದೆ.

- ಕೆಳಸಮುದಾಯಗಳ ಪಂಚಾಯಿತಿ ಸದಸ್ಯರಲ್ಲಿರುವ ಕೀಲರಿಮೆ ಅವರಲ್ಲಿರುವ ರಾಜಕೀಯ ಅಧಿಕಾರದ ಪ್ರಯೋಗದ ಬಗ್ಗೆ ತಿಳಿವಳಿಕೆ ಮೂಡಬೇಕು.
- ಎಲ್ಲಾ ಕೆಳಜಾತಿಗಳ ಪಂಚಾಯಿತಿ ಸದಸ್ಯರಲ್ಲಿ ಹೊಂದಾಣಿಕೆ ಏರ್ಪಡಬೇಕು ಅಂದರೆ ಮಾದಿಗ, ಚೆಲುವಾದಿ. ಬೊವಿ. ಲಂಬಾಣಿ, ಬುಡಕಟ್ಟು, ಮತ್ತು ಹಿಂದುಳಿದ ಸಮುದಾಯದವರು ಒಗ್ಗೂಡಬೇಕು.
- ಮುಖ್ಯವಾಗಿ ಕೆಳಜಾತಿಗಳ ಪಂಚಾಯಿತಿ ಸದಸ್ಯರಲ್ಲಿ ರಾಜಕೀಯ ಅಧಿಕಾರದ ಪ್ರಯೋಗದ ಮನೋಭಾವನೆಗಳು ಬೆಳೆಯಬೇಕು.
- ಕೆಳಜಾತಿಗಳ ಪಂಚಾಯಿತಿ ಸದಸ್ಯರಲ್ಲಿ ಆಂತರಿಕ ಭಿನ್ನಾಭಿಪ್ರಾಯಗಳನ್ನು ಬಿಟ್ಟು ನನ್ನ ಜನ ,ನನ್ನ ಕೇರಿ

ಎನ್ನುವ ಭಾವನೆಗಳು ಮೂಡಬೇಕು

- ಕೆಳಜಾತಿಗಳ ಪಂಚಾಯಿತಿ ಸದಸ್ಯರು ಸಂಘಟಿತ ಹೋರಾಟವನ್ನು ಮಾಡಬೇಕು ರಾಜಕೀಯ ನಿತಿ ನಿರ್ಧಾರಗಳಲ್ಲಿ ತೆಗೆದುಕೊಳ್ಳಬೇಕು.

- ಕೆಳಜಾತಿಗಳ ಪಂಚಾಯಿತಿ ಸದಸ್ಯರಿಗೂ ಮತ್ತು ಜನತೆಗೂ ರಾಜಕೀಯ ಶಿಕ್ಷಣದ ಅಗತ್ಯತೆ ಹೆಚ್ಚು ಇದೆ.

- ಪಂಚಾಯತ್ ಸಭೆಗಳಲ್ಲಿ ಮತ್ತು ಗ್ರಾಮಸಭೆಗಳಲ್ಲಿ ಕೆಳಜಾತಿಗಳ ಪಂಚಾಯಿತಿ ಸದಸ್ಯರು ಒಗ್ಗೂಡಿ ತನ್ನ ಜಾತಿ/ಕೇರಿಯ/ವಾರ್ಡ್‌ನ ಜನತೆಯ ಸಬಲೀಕಣಕ್ಕಾಗಿ ಜಾಗೃತಿ ವಹಿಸಬೇಕು.

- ಕೆಳಜಾತಿಗಳ ಪಂಚಾಯಿತಿ ಸದಸ್ಯರು ಮೇಲ್ವರ್ಗದ ಕೈಗೊಂಬೆಗಳಾಗಿ ಕಾರ್ಯನಿರ್ವಹಿಸಬಾರದು.

- ಪಂಚಾಯಿತಿ ಕಾಯ್ದೆ, ಕಾನೂನು,  ಶಿಕ್ಷಣ, ಮತ್ತು ಇಂತಹ ತರಬೇತಿ ಕಾರ್ಯಕ್ರಮಗಳನ್ನು ಸರ್ಕಾರ ಯೋಜಿಸಬೇಕು.

(**ಮುಖ್ಯಪದಗಳು:** ವಿಕೇಂದ್ರೀಕರಣ, ಗ್ರಾಮ ಪಂಚಾಯತಿ, ರಾಜಕೀಯ, ಅಭಿವೃದ್ಧಿ, ಸಾಮಾಜಿಕ ಪರಿವರ್ತನೆ, ಆಡಳಿತ, ಜಾತಿವಾರು ಪ್ರಾತಿನಿಧ್ಯ, ಭಾಗವಹಿಸುವಿಕೆ, ಪಕ್ಷಗಳು, ಯೋಜನೆಗಳು)

**ಪ್ರಸ್ತಾವನೆ:**

ವಿಕೇಂದ್ರೀಕರಣ ವ್ಯವಸ್ಥೆಯ ಬುನಾದಿಯಾಗಿರುವ ಗ್ರಾಮ ಪಂಚಾಯತಿಗಳ ಕಾರ್ಯನಿರ್ವಹಣೆ ಕುರಿತು ಅಧ್ಯಯನ ಮಾಡಿಲಾಗಿದ್ದು ಇದೊಂದು ಸಂಶೋಧನ ಲೇಖನವಾಗಿದೆ. ತಳಮಟ್ಟದಲ್ಲಿ ಕಾರ್ಯನಿರ್ವವಹಿಸುತ್ತಿರುವ ಗ್ರಾಮಪಂಚಾಯತ್ ಸ್ವಾತಂತ್ರಾ ್ಯನಂತರ ಸಮಾಜದ ಕೆಳವರ್ಗಗಳ ಕಲ್ಯಾಣಕ್ಕಾಗಿ ಅನೇಕ ಅಭಿವೃದ್ಧಿಪರ ಕಾರ್ಯಕ್ರಮಗಳನ್ನು ಜಾರಿಗೆ ತರಲಾಯಿತು. ಈ ಕಾರ್ಯಕ್ರಮಗಳ ಮುಖ್ಯ ಉದ್ದೇಶ ಕೆಳವರ್ಗಗಳ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆ ಹಾಗೂ ಬಡವರ ಉದ್ಧಾರ ಎಂಬುವ ನಂಬಿಕೆ ಈ ಸಂಸ್ಥೆಗಳ ರಚನೆಯಲ್ಲಿತ್ತು.  ಆದರೆ ಈ ಕಾರ್ಯಕ್ರಮಗಳು 'ನಿರೀಕ್ಷಿತ ಫಲವನ್ನು 'ನೀಡಲಿಲ್ಲ. ಪರಿಣಾಮವಾಗಿ ಅಭಿವೃದ್ಧಿಯ ಲಾಭಗಳು ಜನ ಸಾಮಾನ್ಯರಿಗೆ ಯಾಕೆ ತಲುಪುತ್ತಿಲ್ಲ ಎನ್ನುವುದರ ಅಧ್ಯಯನಕ್ಕೆ ಬಲವಂತ್‌ರಾಯ್‌ಮೆಹ್ತಾ ಅವರ ಅಧ್ಯಕ್ಷತೆಯಲ್ಲಿ ೧೯೫೭ರಲ್ಲಿ  ಒಂದು ಸಮಿತಿ ನೇಮಕವಾಯಿತು. ತಳಮಟ್ಟದ ಆಡಳಿತ ಊಳಿಗಮಾನ್ಯ ಲಕ್ಷಣಗಳಿಂದ ಕೂಡಿದೆ. ಸರಕಾರ ಜಾರಿಗೆ ತಂದ ಅಭಿವೃದ್ಧಿ ಕಾರ್ಯಕ್ರಮಗಳ ಲಾಭಗಳು ಸ್ಥಳೀಯ ಮೇಲ್ವರ್ಗಗಳ ಮೂಲಕವೇ ಹಾದು ಜನ ಸಾಮಾನ್ಯರಿಗೆ ತಲುಪಬೇಕಾಗಿದೆ.  ಆದುದರಿಂದ ಯೋಜನೆಯ ಫಲಗಳು 'ತಲುಪಬೇಕಾದವರಿಗೆ  ತಲುಪುತ್ತಿಲ್ಲ ಎಂದು ಸಮಿತಿ ಗುರುತಿಸಿತು.  ಈ  ಸಮಸ್ಯೆಗಳ ಪರಿಹಾರಕ್ಕೆ ಮೂರು ಹಂತದ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಜಾರಿಗೆ ತರಲು ಸಮಿತಿ ಶಿಫಾರಸ್ಸು ಮಾಡಿತು. ಜತೆಗೆ ಈ ಪಂಚಾಯತ್ ವ್ಯವಸ್ಥೆಯ ಮೂಲಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕೆಂದು ಸಮಿತಿ ಸಲಹೆ ನೀಡಿತು.೧  ಕೆಲವು ಸಣ್ಣ ಪುಟ್ಟ ಬದಲಾವಣೆಗಳೊಂದಿಗೆ ಈ ಸಮಿತಿಯ ಶಿಫಾರಸ್ಸುಗಳು ಜಾರಿಗೆ ಬಂದವು. ಕೆಲವು ಅಭಿವೃದ್ಧಿ ಕಾರ್ಯಕ್ರಮಗಳು ಪಂಚಾಯತಿ ವ್ಯವಸ್ಥೆ ಮೂಲಕ ಹಾದು ಬರಲು ಆರಂಭವಾದವು. ಸುಮಾರು ೭೦ರ ದಶಕದವರೆಗೆ ಈ ಕಾರ್ಯಕ್ರಮದ ವಿಕೇಂದ್ರೀಕರಣ ಪ್ರಕ್ರಿಯೆ ಮುಂದುವರಿಯಿತು. ಆದಾಗ್ಯೂ  ತಳಮಟ್ಟದ  ಜನರ ಬದುಕು ವಿಶೇಷ ಪರಿವರ್ತನೆಗಳನ್ನು ಕಾಣಲಿಲ್ಲ.

ಆ ಸಂದರ್ಭದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಪುನರ್ ಸಂಘಟಿಸುವ ಅವಶ್ಯಕತೆಯನ್ನು ಅಂದಿನ ಕೇಂದ್ರ ಸರಕಾರ ಮನಗಂಡಿತು. ಜಾರಿಯಲ್ಲಿದ್ದ ಪಂಚಾಯತಿ ವ್ಯವಸ್ಥೆಯನ್ನು ಅಧ್ಯಯನ ಮಾಡಿ ಸುಧಾರಣೆಗೆ ಅಗತ್ಯವಿರುವ ಸಲಹೆ ಸೂಚನೆಗಳನ್ನು 'ನೀಡಲು ೧೯೭೭ರಲ್ಲಿ ಅಶೋಕಮೆಹ್ತಾ  ಸಮಿತಿಯನ್ನು ನೇಮಕ

ಮಾಡಲಾಯಿತು. ಕೇಂದ್ರ ಮತ್ತು ರಾಜ್ಯದಿಂದ ಈ ಸಂಸ್ಥೆಗಳಿಗೆ ಅನುದಾನವಿಲ್ಲ, ಸ್ಥಳೀಯ ಸಂಪನ್ಮೂಲ ಸಂಗ್ರಹಕ್ಕೆ ಅವಕಾಶವಿಲ್ಲ, ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಪ್ರಶ್ನೆಯೇ ಇರಲಿಲ್ಲ, ಹೀಗೆ ಸಂಪನ್ಮೂಲ ಮತ್ತು ಅಧಿಕಾರಗಳಿಲ್ಲದೇ ಪಂಚಾಯತಿ ವ್ಯವಸ್ಥೆ ತಳಮಟ್ಟದಲ್ಲಿ ಭದ್ರವಾಗಿ ನೆಲೆಯೂರಲಿಲ್ಲ ಎಂದು ಸಮಿತಿ ವರದಿ ಮಾಡಿತು. ಈ ಎಲ್ಲಾ ದೋಷಗಳ 'ನಿವಾರಣೆಗೆ ಎರಡು ಹಂತದ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಜಾರಿಗೆ ತರಲು ಸಮಿತಿ ಶಿಫಾರಸ್ಸು ಮಾಡಿತು. ಗ್ರಾಮೀಣ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿಯಾಗಬೇಕಾದರೆ ನಿಜವಾದ ಅರ್ಥದಲ್ಲಿ ಅಧಿಕಾರದ ವಿಕೇಂದ್ರೀಕರಣ ಆಗಬೇಕು ಎಂದು ಸಮಿತಿ ಪ್ರತಿಪಾದಿಸಿತು. ಸಮಿತಿಯ ಶಿಫಾರಸ್ಸಿನಂತೆ ದೇಶಾದ್ಯಂತ ಎರಡು ಹಂತದ ಪಂಚಾಯತ್ ವ್ಯವಸ್ಥೆಯನ್ನು ಜಾರಿಗೊಳಿಸಲಾಯಿತು.೨ ಈ ಕಾಯ್ದೆಯಂತೆ ತಳಮಟ್ಟದಲ್ಲಿ ಮಂಡಲಪಂಚಾಯತ್ ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಪರಿಷತ್ತನ್ನು ರಚಿಸಲಾಯಿತು. ಮಂಡಲಪಂಚಾಯತಿಗಳಿಗೆ ಹೆಚ್ಚು ಅಧಿಕಾರ ಮತ್ತು ಕಾರ್ಯಗಳನ್ನು ವಹಿಸಲಾಯಿತು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಣಕಾಸು ನೆರವನ್ನು ಈ ಸಂಸ್ಥೆಗಳಿಗೆ ಒದಗಿಸಿದವು. ಮೊಟ್ಟಮೊದಲ ಬಾರಿಗೆ ಗ್ರಾಮಸಭೆಯನ್ನು ನಡೆಸುವಂತೆ ಸಮಿತಿ ಶಿಫಾರಸ್ಸು ಮಾಡಿತು.

ಎರಡು ಹಂತದ ಪಂಚಾಯತ್‌ರಾಜ್ ವ್ಯವಸ್ಥೆ ಜಾರಿಯಲ್ಲಿದ್ದರೂ ಯೋಜನೆಗಳು ಹಿಂದಿನ ರೀತಿಯಲ್ಲಿ ರಾಜ್ಯ ಮತ್ತು ಕೇಂದ್ರದಲ್ಲಿ ರೂಪಿತಗೊಳ್ಳುತ್ತಿದ್ದವು. ಜೊತೆಗೆ ಅವಧಿಗೆ ಸರಿಯಾಗಿ ಪಂಚಾಯತಿ ಚುನಾವಣೆಗಳು ನಡೆಯುತ್ತಿರಲಿಲ್ಲ. ೧೯೮೪ರಲ್ಲಿ ನೇಮಕಗೊಂಡ ಜಿ.ವಿ.ಕೆ.ರಾವ್ ಸಮಿತಿಯು ಜಿಲ್ಲೆಯು ಯೋಜನೆಯ ಮೂಲಘಟಕವಾಗಿರಬೇಕು ಮತ್ತು ಅವಧಿಗೆ ಸರಿಯಾಗಿ ಪಂಚಾಯತಿ ಚುನಾವಣೆಗಳನ್ನು ನಡೆಸಬೇಕು ಎಂದು ಶಿಫಾರಸ್ಸು ಮಾಡಿತು. ೧೯೮೬ರಲ್ಲಿ ನೇಮಕವಾದ ಎಲ್. ಎಂ. ಸಾಂಗ್ವಿ ಸಮಿತಿಯು ಪಂಚಾಯತ್ ಸಂಸ್ಥೆಗಳಿಗೆ ಹೆಚ್ಚಿನ ಹಣಕಾಸನ್ನು ಒದಗಿಸಿ ಪ್ರಜಾಸತ್ತಾತ್ಮಕ ಸಂಸ್ಥೆಗಳಾಗಿ ಕಾರ್ಯನಿರ್ವಹಿಸ ಬೇಕು ಎಂದು ಸಲಹೆ "ನೀಡಿತು. ಹೀಗೆ ಕೆಲವು ಸಮಿತಿಗಳ ಶಿಫಾರಸ್ಸುಗಳು ವಿಕೇಂದ್ರೀಕರಣವನ್ನು ಬಲಯುತಗೊಳಿಸುವಲ್ಲಿ ಪ್ರಯತ್ನಿಸಿದವು. ಇಷ್ಟೆಲ್ಲ ಸಮಿತಿಗಳ ಮತ್ತು ಶಿಫಾರಸ್ಸುಗಳ ನಡುವೆಯೂ ಪಂಚಾಯತ್‌ರಾಜ್ ವ್ಯವಸ್ಥೆ ಅದರ ಮೂಲ ಉದ್ದೇಶಕ್ಕೆ ಅನುಗುಣವಾಗಿ ಕಾರ್ಯನಿರ್ವಹಿಸಲು ವಿಫಲವಾಗಿತ್ತು. ಅಂದರೆ "ನಿಜವಾದ ಅರ್ಥದಲ್ಲಿ ಅಭಿವೃದ್ಧಿ ಆಡಳಿತದ ವಿಕೇಂದ್ರೀಕರಣ ಅಥವಾ ತಳಮಟ್ಟದ ಜನರು ತಮ್ಮ ಬೇಕು ಬೇಡಗಳಿಗೆ ಅನುಗುಣವಾದ ಯೋಜನೆಗಳನ್ನು ಪಡೆಯುವಂತಹ ವ್ಯವಸ್ಥೆ ಜಾರಿಗೆ ಬರಲಿಲ್ಲ.

ಪಂಚಾಯತಿಯನ್ನು ಅದರ ಮೂಲ ಉದ್ದೇಶಕ್ಕೆ ಅನುಗುಣವಾಗಿ ಸಂಘಟಿಸುವ ದೃಷ್ಟಿಯಿಂದ ೧೯೯೨ರಲ್ಲಿ ""ಜನತೆಗೆ ಅಧಿಕಾರ" ' ಎಂಬ ಘೋಷಣೆಯೊಂದಿಗೆ ಸಂವಿಧಾನದ ೭೩ನೇ ತಿದ್ದುಪಡಿ ಆಯಿತು. ಈ ತಿದ್ದುಪಡಿ ಅನ್ವಯ ಗ್ರಾಮ, ತಾಲೂಕು ಮತ್ತು ಜಿಲ್ಲಾ ಮಟ್ಟಗಳಲ್ಲಿ ಚುನಾಯಿತ ಸಂಸ್ಥೆಗಳನ್ನು ರಚಿಸುವುದು, ಪ್ರತಿ ಐದು ವರ್ಷಗಳಿಗೊಮ್ಮೆ ಚುನಾವಣೆಗಳನ್ನು ನಡೆಸಲು ಪ್ರತ್ಯೇಕ ಚುನಾವಣಾ ಆಯೋಗದ ರಚನೆ, ಆಯಾ ಪಂಚಾಯತಿ ಪ್ರದೇಶದಲ್ಲಿರುವ ಪರಿಶಿಷ್ಟ ಜಾತಿ/ಪಂಗಡ ಜನಸಂಖ್ಯೆ ಪ್ರಮಾಣಕ್ಕನುಗುಣವಾಗಿ ಸ್ಥಾನಗಳ ಮೀಸಲಾತಿ, ಮಹಿಳೆಯರಿಗೆ ಶೇಕಡ ೩೩ ರಷ್ಟು ಸ್ಥಾನಗಳ ಮೀಸಲು, ಸ್ಥಳೀಯ ಸಂಸ್ಥೆಗಳಿಗೆ ಕೇಂದ್ರ ಮತ್ತು ರಾಜ್ಯದಿಂದ ಅನುದಾನ, ಸಂಪನ್ಮೂಲ ಕ್ರೋಢೀಕರಣ, ಹಣಕಾಸು ವ್ಯವಸ್ಥೆ ನಿರ್ವಹಣೆಗೆ ರಾಜ್ಯ ಹಣಕಾಸು ಆಯೋಗ ರಚನೆ, ಪ್ರತಿ ಜಿಲ್ಲೆಯಲ್ಲೂ ಯೋಜನಾ ಸಮಿತಿಗಳ ರಚನೆ ಮತ್ತು ಈ ಕಾಯ್ದೆಯ ಇತರ ವಿಷಯಗಳೊಂದಿಗೆ ಎಲ್ಲಾ ರಾಜ್ಯಗಳಲ್ಲೂ ಸಮಾನ ಸ್ವರೂಪದ ಪಂಚಾಯತ್ ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸಬೇಕೆಂದು ಕಡ್ಡಾಯಗೊಳಿಸಲಾಯಿತು.೪ ಈ ಎಲ್ಲಾ ಅಂಶಗಳೊಂದಿಗೆ ಇಂದು ಎಲ್ಲಾ ರಾಜ್ಯಗಳಲ್ಲಿ ಪಂಚಾಯತಿಗಳು ಸಂವಿಧಾನಿಕವಾಗಿ ರಚನೆಗೊಂಡಿವೆ. ಕರ್ನಾಟಕದಲ್ಲೂ ಇದೇ ಮಾದರಿಯಲ್ಲಿ ೧೯೯೩ರಲ್ಲಿ ಪಂಚಾಯತ್‌ರಾಜ್ ಕಾಯ್ದೆಯನ್ನು ಜಾರಿಗೆ ತರಲಾಯಿತು. ಸಂವಿಧಾನದ ೭೩ನೇ ತಿದ್ದುಪಡಿಯಿಂದ ಗ್ರಾಮಪಂಚಾಯತಿಗಳು ಇಂದು ಆಧುನಿಕ ಪಂಚಾಯತಿಗಳಾಗಿವೆ. ಇಲ್ಲಿ ಎಲ್ಲಾ ವರ್ಗಗಳ ಪ್ರತಿನಿಧಿಕರಣವಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಸಂಸ್ಥೆಗಳಿಗೆ ಅನುದಾನಗಳನ್ನು ಒದಗಿಸುತ್ತಿವೆ ಹಾಗೂ ಸ್ಥಳೀಯ ಸಂಪನ್ಮೂಲದ ಸಂಗ್ರಹಕ್ಕೆ ಅವಕಾಶ ಇದೆ.

**೧.೧.ಅಧ್ಯಯನದ ಉದ್ದೇಶಗಳು:**

ನಮ್ಮಲ್ಲಿನ ವಿಕೇಂದ್ರೀಕರಣಕ್ಕೆ ಎರಡು ಮುಖಗಳಿವೆ. ಒಂದು ಮೇಲ್‌ಸ್ತರದಲ್ಲಿ ರೂಪುಗೊಳ್ಳುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ತಳಮಟ್ಟದ ಜನರಿಗೆ ತಲುಪಿಸುವುದು. ಎರಡು, ತಳಮಟ್ಟದ ಜನರನ್ನು ಸಶಕ್ತೀಕರಣಗೊಳಿಸುವುದು. ಒಂದನೇ ಉದ್ದೇಶ ಈಡೇರಿದರೆ ಎರಡನೆ ಉದ್ದೇಶ ಈಡೇರುತ್ತದೆ ಎನ್ನುವ ನಂಬಿಕೆ ಇದೆ. ಅಂದರೆ ತಳಮಟ್ಟದ ಜನರ ಮುಖ್ಯ ಸಮಸ್ಯೆ ಇಂದು ಕೂಡ ಮೂಲಭೂತ ಸೌಲಭ್ಯಗಳ – ಕುಡಿಯುವ 'ನೀರು, ನೈರ್ಮಲ್ಯ, ವಸತಿ, ಉದ್ಯೋಗ ಮತ್ತು ಶಿಕ್ಷಣ ಇತ್ಯಾದಿಗಳ – ಕೊರತೆ. ಇವುಗಳನ್ನು ಅವರು ಹೊಂದಿದರೆ ಅಥವಾ ಹೊಂದಲು ಶಕ್ತರಾದರೆ ಇತರ ಕ್ಷೇತ್ರದಲ್ಲಿ ಸಶಕ್ತೀಕರಣಗೊಳ್ಳಲು ಅವರಿಗೆ ಅನುಕೂಲವಾಗುತ್ತದೆ ಎನ್ನುವ ಗ್ರಹಿಕೆ ಇದೆ. ಮೇಲೆ ವಿವರಿಸಿದ ಗ್ರಹಿಕೆಯನ್ನು ಯಥಾ ರೀತಿಯಲ್ಲಿ ಒಪ್ಪಿಕೊಂಡು, ಅವು ಎಷ್ಟರ ಮಟ್ಟಿಗೆ ತಳಮಟ್ಟದಲ್ಲಿ ಕಾರ್ಯರೂಪಕ್ಕೆ ಬಂದಿದೆ ಅಥವಾ ಪಂಚಾಯತ್ ತನ್ನ ಜವಾಬ್ದಾರಿಯನ್ನು ಎಷ್ಟು ಸಮರ್ಪಕವಾಗಿ ನಿಭಾಯಿಸಿದೆ ಎಂದು ವಿಶ್ಲೇಷಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶ. ಕೆಳವರ್ಗದವರ ಸಶಕ್ತೀಕರಣ ಪ್ರಕ್ರಿಯೆ ಪರಿಣಾಮಕಾರಿಯಾಗಿ ಜಾರಿ ಬರುವುದಕ್ಕಾಗಿ ಹಲವು ಸಾಂಸ್ಥಿಕ ರಚನೆಗಳನ್ನು ಮಾಡಲಾಗಿದೆ. ಜತೆಗೆ ಹಲವಾರು ವಿಚಾರಗಳಲ್ಲಿ ತಳಮಟ್ಟದ ಜನರ ಸಹಭಾಗಿತ್ವವನ್ನು ನಿರೀಕ್ಷಿಸಲಾಗುತ್ತದೆ. ಹೀಗೆ ಪಂಚಾಯತಿಯ ಕಾರ್ಯಕ್ಷಮತೆಯ ವಿಶ್ಲೇಷಣೆ ಅನಿವಾರ್ಯವಾಗಿ ಸಂಬಂಧಿತ ಇತರ ವಿಚಾರಗಳ ವಿಶ್ಲೇಷಣೆಯೂ ಆಗಿದೆ. ಈ ಎಲ್ಲದರ ಹಿನ್ನೆಲೆಯಲ್ಲಿ ಅಧ್ಯಯನ ಉದ್ದೇಶಗಳನ್ನು ಈ ಕೆಳಗಿನಂತೆ ನಿರ್ವಚಿಸಿಕೊಳ್ಳಲಾಗಿದೆ.

೧. ತಳಮಟ್ಟದ ಜನರ ಸಶಕ್ತೀಕರಣಕ್ಕೆ ಅನಿವಾರ್ಯವೆಂದು ತಿಳಿದಿರುವ ಮೂಲಭೂತ ಸೌಲಭ್ಯಗಳನ್ನು ಉದ್ದೇಶಿತ ವರ್ಗಕ್ಕೆ ತಲುಪಿಸುವಲ್ಲಿ ಗ್ರಾಮ ಪಂಚಾಯತಿ ಸಾಧಿಸಿರುವ ಕಾರ್ಯನಿರ್ವಹಣೆಯನ್ನು ಪರೀಕ್ಷಿಸುವುದು

೨. ಪಂಚಾಯತ್ ವ್ಯವಸ್ಥೆಯ ಆಂತರಿಕ ಅಂಶಗಳಾದ ಗ್ರಾಮಸಭೆ, ತೆರಿಗೆ ಸಂಗ್ರಹ, ಜನರ ಮತ್ತು ಪ್ರತಿನಿಧಿಗಳ ಅರಿವು ಮತ್ತು ಭಾಗವಹಿಸುವಿಕೆ ಇತ್ಯಾದಿಗಳು ಪಂಚಾಯತಿಯ ಕಾರ್ಯಕ್ಷಮತೆ ಯನ್ನು ಯಾವ ರೀತಿ ಪ್ರಭಾವಿಸಿದೆ ಎಂದು ಗುರುತಿಸುವುದು.

೩. ಪಂಚಾಯತ್ ವ್ಯವಸ್ಥೆ ಕಾರ್ಯನಿರ್ವಹಿಸುವ ಸಾಮಾಜಿಕ ಹಾಗೂ ಆರ್ಥಿಕ ಪರಿಸರ ಪಂಚಾಯತಿಯ ಕಾರ್ಯಕ್ಷಮತೆಯನ್ನು ಹೇಗೆ ಪ್ರಭಾವಿಸಿದೆ ಎಂದು ವಿಶ್ಲೇಷಿಸುವುದು.

೪. ಪಂಚಾಯತ್ ಕಾರ್ಯಕ್ಷಮತೆಯಲ್ಲಿ ಪಂಚಾಯತ್ ವ್ಯವಸ್ಥೆ ಮತ್ತು ಅದು ಕಾರ್ಯ ನಿರ್ವಹಿಸುವ ಪರಿಸರ ಇವೆರಡರಲ್ಲಿ ಯಾವುದೂ ಹೆಚ್ಚು ಪ್ರಭಾವಿಸಿದೆ ಎಂದು ಕಂಡು ಹಿಡಿಯುವುದು.

೫. ಮೇಲೆ ಸೂಚಿಸಿದ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ಅಗತ್ಯವಿದ್ದರೆ ಪಂಚಾಯತಿಯ ಕಾರ್ಯಕ್ಷಮತೆಯನ್ನು ಸುಧಾರಿಸಲು ಸೂಕ್ತ ಕ್ರಮಗಳನ್ನು ಸೂಚಿಸುವುದು

**೧.೨.ಅಧ್ಯಯನ ವಿಧಾನ:**

ಅಧ್ಯಯನದ ಉದ್ದೇಶಗಳನ್ನು ಪರೀಕ್ಷಿಸಲು ಈ ಕೆಳಗಿನ ಅಂಕಿ ಅಂಶಗಳು ಮತ್ತು ಮಾಹಿತಿಗಳು ಅಗತ್ಯ. ಒಂದು, ಪಂಚಾಯತಿಯ ಮೂಲಭೂತ ಕಾರ್ಯಗಳಿಗೆ ಸಂಬಂಧಿಸಿದ ಮಾಹಿತಿ. ಕುಡಿಯುವ'ನೀರಿನ ಪೂರೈಕೆ, ಗ್ರಾಮೀಣ ನೈರ್ಮಲ್ಯೀಕರಣ, ವಸತಿ ಮತ್ತು ಬಡತನ 'ನಿರ್ಮೂಲನಾ ಕಾರ್ಯಕ್ರಮ ಜಾರಿ ಪಂಚಾಯತಿ ವ್ಯಾಪ್ತಿಗೆ ಬರುವ ಮುಖ್ಯ ಜವಾಬ್ದಾರಿಗಳು. ಇವುಗಳ ಜತೆಗೆ ಶಿಕ್ಷಣ ಕೂಡ ಸೇರಿದೆ. ಆದರೆ ಶಿಕ್ಷಣಕ್ಕೆ ಸಂಬಂಧಿಸಿದ ಕೆಲವು ಅಂಚಿನ ಜವಾಬ್ದಾರಿಗಳನ್ನು ನೋಡಿಕೊಳ್ಳುವುದು ಮಾತ್ರ ಪಂಚಾಯತಿಯ ಕೆಲಸವಾಗಿದೆ ಅಥವಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪಂಚಾಯತಿಯ ಜವಾಬ್ದಾರಿ ತುಂಬಾ ಸೀಮಿತವಾಗಿದೆ. ಎರಡು, ಪಂಚಾಯತ್ ವ್ಯವಸ್ಥೆಯಲ್ಲಿ ನೇರವಾಗಿ ಪಾಲುಗೊಳ್ಳುವ ಜನ ಪ್ರತಿನಿಧಿಗಳು, ಪದಾಧಿಕಾರಿಗಳು, ಅಧಿಕಾರಿಗಳು

ಮತ್ತು ಅಭಿವೃದ್ಧಿ ಯೋಜನೆಗಳ ಫಲಾನುಭವಿಗಳು ಮುಂತಾದವರ ಹಿನ್ನೆಲೆ ಮತ್ತು ಅಭಿಪ್ರಾಯಗಳು. ಮೂರು, ಪಂಚಾಯತ್ ವ್ಯವಸ್ಥೆ ಕಾರ್ಯನಿರ್ವಹಿಸುತ್ತಿರುವ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಪರಿಸರಕ್ಕೆ ಸಂಬಂಧಿಸಿದ ಮಾಹಿತಿ. ಈ ಮೂರು ವಿಚಾರಗಳಿಗೆ ಸಂಬಂಧಿಸಿದ ಮಾಹಿತಿ ಯನ್ನು ಸ್ಥೂಲವಾಗಿ ಎರಡು ಮೂಲಗಳಿಂದ ಪಡೆಯಲಾಗಿದೆ. ಒಂದು ಆನುಷಂಗಿಕ, ಇನ್ನೊಂದು ಪ್ರಾಥಮಿಕ ಮಾಹಿತಿ. ಅಧ್ಯಯನದಲ್ಲಿ ಉಪಯೋಗಿಸಿದ ಆನುಷಂಗಿಕ ಮಾಹಿತಿಗಳ ಮೂಲ ಇಂತಿವೆ. ಒಂದು, ಜಿಲ್ಲಾಪಂಚಾಯತ್, ತಾಲೂಕು ಪಂಚಾಯತ್ ಮತ್ತು ಗ್ರಾಮಪಂಚಾಯತ್ ದಾಖಲೆಗಳು. ಮೂಲಭೂತ ಸೌಲಭ್ಯಗಳ ಪೂರೈಕೆ ಕುರಿತ ಅಂಕಿ–ಅಂಶಗಳು, ತೆರಿಗೆ ಸಂಗ್ರಹ, ವಾರ್ಷಿಕ ಬಜೆಟ್, ಗ್ರಾಮಸಭೆಗಳ ಸಂಖ್ಯೆ, ಹಾಜರಾದ ಸದಸ್ಯರ ಸಂಖ್ಯೆ, ಕೈಗೊಂಡ 'ನಿರ್ಣಯಗಳು ಇತ್ಯಾದಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಈ ದಾಖಲೆಗಳು ಒದಗಿಸಿವೆ. ಶಿಕ್ಷಣ, ಕುಡಿಯುವ ನೀರು, ಸಾರ್ವಜನಿಕ' ಕಾಮಗಾರಿ ಇತ್ಯಾದಿಗಳಿಗೆ ಸಂಬಂಧಿಸಿದ ಅಂಕಿ–ಅಂಶಗಳನ್ನು ಆಯಾ ಇಲಾಖೆಗಳಿಂದ ಸಂಗ್ರಹಿಸಲಾಗಿದೆ. ಎರಡು, ಸೆನ್ಸಸ್ ದಾಖಲೆಗಳು. ಗ್ರಾಮಗಳ ಜನಸಂಖ್ಯೆ, ಸಾಕ್ಷರತೆ, ವಿವಿಧ ವಲಯಗಳಲ್ಲಿ ತೊಡಗಿಸಿಕೊಂಡಿರುವ ಕೆಲಸಗಾರರ ಸಂಖ್ಯೆ ಇತ್ಯಾದಿಗಳನ್ನು ಈ ಮೂಲಗಳಿಂದ ಪಡೆಯಲಾಗಿದೆ. ಗ್ರಾಮ ಪಂಚಾಯತಿ ಒಂದರಲ್ಲಿ ಇರಬೇಕಾದ ಮೂಲಭೂತ ಸೌಲಭ್ಯಗಳ ಸಂಖ್ಯೆ ಮತ್ತು ವಾಸ್ತವದಲ್ಲಿ ಇರುವ ಸಂಖ್ಯೆಗಳನ್ನು ವಿವಿಧ ಇಲಾಖೆಗಳು ಒದಗಿಸಿದ ದಾಖಲೆಗಳಿಂದ ಪಡೆಯಲಾಗಿದೆ. ಮೂರು, ಪ್ರಕಟಿತ ಮತ್ತು ಅಪ್ರಕಟಿತ ಸಂಶೋಧನಾ ಪ್ರಬಂಧಗಳು, ಲೇಖನಗಳು ಮತ್ತು ವಿಚಾರ ಸಂಕಿರಣಗಳಲ್ಲಿ ಮಂಡಿತವಾದ ಬರಹಗಳು. ಸ್ಥಳೀಯ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಬದುಕಿಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಶೋಧನಾ ಪ್ರಬಂಧಗಳು ಮತ್ತು ಲೇಖನಗಳಿಂದ ಪಡೆಯಲಾಗಿದೆ. ದೇಶದ ಇತರ ಕಡೆಗಳಲ್ಲಿನ ಪಂಚಾಯತಿಗಳ ಕಾರ್ಯಕ್ಷಮತೆ ಕುರಿತ ಮಾಹಿತಿಯನ್ನು ಲೇಖನಗಳಿಂದ ಮತ್ತು ಪುಸ್ತಕಗಳಿಂದ ಪಡೆಯಲಾಗಿದೆ.

ಎರಡು, ಪ್ರಾಥಮಿಕ ಮಾಹಿತಿ ಮೂಲ. ಅಧ್ಯಯನಕ್ಕೆ ಅವಶ್ಯವಾದ ಪ್ರಾಥಮಿಕ ಮಾಹಿತಿಯನ್ನು ಚುನಾಯಿತ ಪ್ರತಿನಿಧಿಗಳಿಂದ, ಗ್ರಾಮೀಣ ಜನತೆಯಿಂದ ಮತ್ತು ಅಧಿಕಾರಿಗಳಿಂದ ಪ್ರಶ್ನಾವಳಿಗಳ ಮೂಲಕ ಸಂಗ್ರಹಿಸಲಾಗಿದೆ. ಸಂದರ್ಶನ ಸೂಚಿಯ ಅನ್ವಯ ಪ್ರಶ್ನೆಗಳನ್ನು ಕೇಳಲಾಗಿದ್ದು ಮಾಹಿತಿದಾರರು 'ನೀಡಿರುವ ಉತ್ತರವನ್ನು ಅವರ ಸಮ್ಮುಖದಲ್ಲಿ ತುಂಬಲಾಗಿದೆ. ಮೂಲಭೂತ ಅವಶ್ಯಕತೆಗಳ ಬಗ್ಗೆ, ಗ್ರಾಮಸಭೆ, ಪಂಚಾಯತ್ ಯೋಜನೆ, ವಿತರಣೆ, ವಾರ್ಷಿಕ ಬಜೆಟ್, ಮುಂತಾದ ಅಂಶಗಳ ಜೊತೆಗೆ ಚುನಾಯಿತ ಪ್ರತಿನಿಧಿಗಳ ಮತ್ತು ಗ್ರಾಮೀಣ ಜನತೆಯ ಅರಿವು ಹಾಗೂ ಭಾಗವಹಿಸುವಿಕೆ ಬಗ್ಗೆ ಪ್ರಶ್ನೆಗಳನ್ನು ರಚಿಸಲಾಗಿದೆ. ಇಲ್ಲಿ ಚುನಾಯಿತ ಪ್ರತಿನಿಧಿಗಳನ್ನು ಮತ್ತು ಜನತೆಯನ್ನು ನೇರವಾಗಿ ಸಂದರ್ಶಿಸುವುದರ ಮೂಲಕ ಇವರ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ.

ಬಳ್ಳಾರಿ ಜಿಲ್ಲೆಯ ಹೊಸಪೇಟೆ ಮತ್ತು ಕೂಡ್ಲಿಗಿ ತಾಲೂಕುಗಳಿಗೆ ಅಧ್ಯಯನವನ್ನು ಸೀಮಿತಗೊಳಿಸಲಾಗಿದೆ. ಹೊಸಪೇಟೆ ತಾಲೂಕು ಜಿಲ್ಲೆಯಲ್ಲಿ ಅತಿ ಹೆಚ್ಚು 'ನೀರಾವರಿ ಪ್ರದೇಶವನ್ನು ಹೊಂದಿದ್ದು, ಜಿಲ್ಲೆಯ ಅಭಿವೃದ್ಧಿ ಹೊಂದಿದ ತಾಲೂಕುಗಳಲ್ಲಿ ಒಂದಾಗಿದೆ. ಕೂಡ್ಲಿಗಿ ತಾಲೂಕು ಜಿಲ್ಲೆಯಲ್ಲಿ ಅತಿ ಹೆಚ್ಚು ಒಣಭೂಮಿ ಪ್ರದೇಶವನ್ನು ಹೊಂದಿದ್ದು, ಜಿಲ್ಲೆಯ ಹಿಂದುಳಿದ ತಾಲೂಕುಗಳಲ್ಲಿ ಒಂದಾಗಿದೆ. ಹಾಗಾಗಿ ಜಿಲ್ಲೆಯ 'ನೀರಾವರಿ ಮತ್ತು ಒಣಭೂಮಿ ಪ್ರದೇಶವೆಂದು ವಿಂಗಡಿಸಿ ಅಧ್ಯಯನಕ್ಕೆ ಎರಡು ತಾಲೂಕುಗಳನ್ನು ಆರಿಸಿಕೊಳ್ಳಲಾಗಿದೆ. ಇದೇ ಮಾದರಿಯಲ್ಲಿ ಪ್ರತಿ ತಾಲೂಕಿನಲ್ಲಿ ಎರಡು ಗ್ರಾಮಪಂಚಾಯತಿಗಳನ್ನು ಆಯ್ದುಕೊಳ್ಳಲಾಗಿದೆ. ಹೊಸಪೇಟೆ ತಾಲೂಕು ೨೩ ಗ್ರಾಮ ಪಂಚಾಯತಿಗಳನ್ನು ಹೊಂದಿದ್ದು, ಇದರಲ್ಲಿ ತಾಲೂಕಿಗೆ ಹತ್ತಿರವಿರುವ 'ನೀರಾವರಿ ಪ್ರದೇಶವಾದ ನಾಗೇನಹಳ್ಳಿ ಗ್ರಾಮಪಂಚಾಯತಿಯನ್ನು ಮತ್ತು ತಾಲೂಕಿಗೆ ದೂರವಿರುವ ಒಣಭೂಮಿ ಪ್ರದೇಶ ಬೈಲುವದ್ದಿಗೆರೆ ಗ್ರಾಮಪಂಚಾಯತಿಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಕೂಡ್ಲಿಗಿ ತಾಲೂಕು ೩೩ ಗ್ರಾಮ ಪಂಚಾಯತಿಗಳನ್ನು ಹೊಂದಿದ್ದು, ಈ ತಾಲೂಕು ಸಂಪೂರ್ಣ ಒಣಭೂಮಿ ಪ್ರದೇಶವಾಗಿದೆ. ಆದಕಾರಣ ಹೆಚ್ಚು ಕೆರೆ'ನೀರು ಮತ್ತು ಪಂಪ್‌ಸೆಟ್ ಹೊಂದಿರುವ ಹಿರೇಹೆಗ್ಡಾಳ್ ಪಂಚಾಯತಿಯನ್ನು 'ನೀರಾವರಿ ಪ್ರದೇಶವೆಂದು

ಪರಿಗಣಿಸಲಾಗಿದೆ. ಇದು ತಾಲೂಕಿಗೆ ಹತ್ತಿರವಿರುವ ಪ್ರದೇಶ ಕೂಡ ಆಗಿದೆ. ಹಿರೇಹೆಗ್ಡಾಳ್ ಗ್ರಾಮಪಂಚಾಯತಿಯನ್ನು ಮತ್ತು ತಾಲೂಕಿಗೆ ದೂರವಿರುವ ಒಣಭೂಮಿ ಪ್ರದೇಶವಾದ ಉಜ್ಜಿನಿ ಗ್ರಾಮಪಂಚಾಯತಿಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ನಾಲ್ಕು ಗ್ರಾಮಪಂಚಾಯತಿಗಳು ಬೇರೆ ಬೇರೆ ಅಂಶಗಳಿಂದ ಭಿನ್ನವಾಗಿವೆ. ಆದ್ದರಿಂದ ಇದೊಂದು ಸ್ಪಷ್ಟವಾದ ತುಲನಾತ್ಮಕವಾದ ಅಧ್ಯಯನವಾಗಿದೆ. ಪ್ರತಿ ಪಂಚಾಯತಿಯ ಎಲ್ಲಾ ಚುನಾಯಿತ ಪ್ರತಿನಿಧಿಗಳನ್ನು ಮತ್ತು ಗ್ರಾಮಪಂಚಾಯತಿಯ ಒಟ್ಟು ಕುಟುಂಬಗಳಲ್ಲಿ ಶೇ.೧೦ರಷ್ಟು ಕುಟುಂಬಗಳನ್ನು ಸಂದರ್ಶಿಸಲಾಗಿದೆ. ಇದರಲ್ಲಿ ಜಾತಿವಾರು ಮತ್ತು ಲಿಂಗವಾರು ಮಾದರಿ ಬರುವಂತೆ ಆಯ್ಕೆ ಮಾಡಲಾಗಿದೆ. ಒಟ್ಟು ಅಧ್ಯಯನಕ್ಕೆ ನಾಲ್ಕು ಪಂಚಾಯಿತಿಗಳಿಂದ ೫೫ ಜನ ಪಂಚಾಯತ್ ಸದಸ್ಯರು ಮತ್ತು ೪೮೦ ಕುಟುಂಬಗಳನ್ನು ಸಂದರ್ಶಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ.

**೧.೩. ಗ್ರಾಮಪಂಚಾಯಿತಿಯ ಕಾರ್ಯನಿರ್ವಹಣೆ:**

ಗ್ರಾಮಪಂಚಾಯತಿಗಳು ತಳಮಟ್ಟದಲ್ಲಿ ತನಗೆ ವಹಿಸಿರುವ ಪ್ರಕಾರ್ಯಗಳಾದ ಕುಡಿಯುವ ನೀರು, ನೈರ್ಮಲೀಕರಣ ಮತ್ತು ಬಡತನ 'ನಿರ್ಮೂಲನಾ ಕಾರ್ಯಕ್ರಮವಾದ ಜವಾಹರ್ ಗ್ರಾಮಸಮೃದ್ಧಿ ಯೋಜನೆಯನ್ನು ಹೇಗೆ ಅನುಷ್ಠಾನವನ್ನು ಮಾಡಿವೆ. ಗ್ರಾಮಸಭೆಗಳ ಮೂಲಕ ವಸತಿ ಯೋಜನೆಗಳ ವಿತರಣೆಯನ್ನು ಮತ್ತು ಶಿಕ್ಷಣದ 'ನಿರ್ವಹಣೆಯನ್ನು ಹೇಗೆ 'ನಿರ್ವಹಿಸಿದೆ ಎಂಬುದನ್ನು ಹಿಂದಿನ ಅಧ್ಯಾಯಗಳಲ್ಲಿ ನೋಡಲಾಗಿದೆ. ಒಣಭೂಮಿ ಮತ್ತು 'ನೀರಾವರಿ ಪಂಚಾಯತಿಗಳಲ್ಲಿ ಈ ಮೂಲಭೂತ ಅವಶ್ಯಕತೆಗಳ ಪೂರೈಕೆ ಮತ್ತು 'ನಿರ್ವಹಣೆಯನ್ನು ತೌಲನಿಕವಾಗಿ ಚರ್ಚಿಸಲಾಗಿದ್ದು ಇದರ ಮೂಲಕ ಗ್ರಾಮಪಮಭಾಯಿತಿಯ ಕಾರ್ಯನಿರ್ವಹಣೆ ಹೇಗಾಗಿದೆ ಎಂಬುದನ್ನು ಗುರುತಿಸಲಾಗಿದೆ.

ಗ್ರಾಮಪಂಚಾಯತಿಗೆ ವಹಿಸಿರುವ ಮೇಲಿನ ಪ್ರಕಾರ್ಯಗಳನ್ನು ಯಾವ ರೀತಿ 'ನಿರ್ವಹಿಸಿದೆ ಎಂಬುದನ್ನು ಕೆಲವು ಸೂಚ್ಯಂಕಗಳ ಮೂಲಕ ಗುರುತಿಸಲು ಪ್ರಯತ್ನಿಸಲಾಗಿದೆ. ಕಾರ್ಯಕ್ಷಮತೆಯನ್ನು ಮಾಪನ ಮಾಡಲು ಮುಖ್ಯ ಸೂಚ್ಯಂಕಗಳನ್ನು ಇಲ್ಲಿ ಬಳಸಲಾಗಿದೆ. ಇದರಲ್ಲಿ ಒಂದು ಪಂಚಾಯತ್ ವ್ಯವಸ್ಥೆಗೆ ಸಂಬಂಧಪಟ್ಟಂತೆ ಇದೆ. ಪಂಚಾಯತ್ ವ್ಯವಸ್ಥೆಯ ಆಂತರಿಕ ಅಂಶಗಳಾದ ಜಾತಿವಾರು ಪ್ರಾತಿನಿಧ್ಯ, ಗ್ರಾಮಸಭೆ, ತೆರಿಗೆ ಸಂಗ್ರಹ, ತಾಲೂಕು ಮತ್ತು ಜಿಲ್ಲಾ ಪಂಚಾಯತ್ ಸದಸ್ಯರ ಪಾತ್ರ, ಸದಸ್ಯರ ಮತ್ತು ಜನರ ಅರಿವು/ಭಾಗವಹಿಸುವಿಕೆ ಪಂಚಾಯತಿಯ ಕಾರ್ಯಕ್ಷಮತೆಯನ್ನು ಯಾವ ರೀತಿ ಪ್ರಭಾವಿಸಿದೆ ಎಂದು ಪರೀಕ್ಷಿಸಿಲಾಗಿದೆ ರಾಜಕೀಯ ಪಕ್ಷ, ತೆರಿಗೆ ಸಂಗ್ರಹ, ವಿವಿಧ ಜಾತಿಗಳ ಪ್ರಾತಿನಿಧ್ಯ ಮತ್ತು ಭಾಗವಹಿಸುವಿಕೆ. ಗ್ರಾಮಪಂಚಾಯತಿಗಳ ಕಾರ್ಯಕ್ಷಮತೆಯನ್ನು ಗುರುತಿಸಲು ಪಂಚಾಯತ್ ವ್ಯವಸ್ಥೆಯ ಕೆಲವು ಮುಖ್ಯ ಅಂಶಗಳನ್ನು ಸೂಚ್ಯಂಕಗಳನ್ನಾಗಿ ಬಳಸಲಾಗಿದೆ. ಗ್ರಾಮಪಂಚಾಯತಿಗಳ ಜಾತಿವಾರು ಪ್ರಾತಿನ್ಧಿಧ್ಯ, ಗ್ರಾಮಸಭೆ ಮತ್ತು ತೆರಿಗೆ ಸಂಗ್ರಹ ಈ ಮೂರು ಅಂಶಗಳು ಅರಿವು/ಭಾಗವಹಿಸುವಿಕೆಯ ಸೂಚ್ಯಂಕಗಳೆಂದು ಗ್ರಹಿಸಲಾಗಿದೆ.

**೧.೪.ಜಾತಿವಾರು ಪ್ರಾತಿನಿಧ್ಯ:**

ಅಧ್ಯಯನ ಕೈಗೊಂಡ ಪಂಚಾಯತಿಗಳಲ್ಲಿ ಜಾತಿವಾರು ಪ್ರಾತಿನಿಧ್ಯ ಮತ್ತು ಅದರ ಪ್ರಭಾವ ಗ್ರಾಮ ಪಂಚಾಯತಿಗಳ ಕಾರ್ಯಕ್ಷಮತೆಯ ಮೇಲೆ ಹೇಗಿದೆ ಎನ್ನುವುದನ್ನು ನೋಡಿದ್ದೇವೆ. ಮೇಲಿನ ವಿವರಗಳ ಪ್ರಕಾರ ಆಯಾ ಜಾತಿವಾರು ಪ್ರಾತಿನಿಧ್ಯದಿಂದ ಆ ಜಾತಿಗಳ ಹಿತಾಸಕ್ತಿಗಳು, ಬೇಡಿಕೆಗಳು ನೇರವಾಗಿ ಯಾವ ಪಂಚಾಯತಿಗಳಲ್ಲಿ ಆಗಿಲ್ಲ. ಈ ಪ್ರಾತಿನಿಧ್ಯದಿಂದ ಆಯಾ ವಾರ್ಡಿನ ಕಾಮಾಗಾರಿಗಳು ಮಾತ್ರ ಅನುಷ್ಠಾನಗೊಂಡಿವೆ. ಮೀಸಲಾತಿಯ ಪ್ರಕ್ರಿಯೆಯಿಂದ ಕೆಳಜಾತಿ–ವರ್ಗಗಳು ಕೆಲವು ಪಂಚಾಯತಿಯಲ್ಲಿ ಹೆಚ್ಚು ಪ್ರಾತಿನಿಧ್ಯವನ್ನು ಪಡೆದುಕೊಂಡಿವೆ. ಈ ಪ್ರಕಾರ ಇಲ್ಲದಿದ್ದರೆ ತಾಂತ್ರಿಕ ಲೋಪವಾಗುತ್ತವೆ. ಇದು ಮೇಲ್ನೋಟಕ್ಕೆ ಕಾಣುವ ಲೋಪವಾಗಿದೆ. ಇದನ್ನು ಯಾರಾದರೂ ಕೂಡ ಪ್ರಶ್ನಿಸಬಹುದು. ಆದುದರಿಂದ ಯಾವ ಪಂಚಾಯತಿಯೂ ಈ 'ನಿಯಮಗಳನ್ನು ಮುರಿಯಲು ಪ್ರಯತ್ನಿಸುವುದಿಲ್ಲ. ಇದನ್ನೆ ತಾಂತ್ರಿಕ ಪ್ರತಿನಿಧಿಕರಣ

ಎಂದು ಹೇಳಿದ್ದಾರೆ. ಈ ಪ್ರತಿನಿಧಿಕರಣವನ್ನು ಅಧ್ಯಯನ ಕೈಗೊಂಡ ಪಂಚಾಯತಿಯಲ್ಲಿ ಯಾರು ಮುರಿದಿಲ್ಲ. ಬೈಲುವದ್ದಿಗೆರೆ ಮತ್ತು ಹಿರೇಹೆಗ್ಡಾಳ್‌ನಲ್ಲಿ ಹೆಚ್ಚು ಮೇಲ್ವರ್ಗಗಳು ಇದ್ದರೂ ಸಹ ಮೀಸಲಾತಿಯಿಂದ ಕೆಳಜಾತಿಯವರೇ ಅಧ್ಯಕ್ಷರಾಗಿದ್ದಾರೆ. ಕೆಳಜಾತಿ ಅಧ್ಯಕ್ಷರಾಗಿರುವ ಹಿರೇಹೆಗ್ಡಾಳ್ ಪಂಚಾಯತಿಯಲ್ಲಿ ಕೆಲವು ಈ ಜಾತಿಗಳ ಕಾರ್ಯಕ್ರಮಗಳು ಚೆನ್ನಾಗಿ ಅನುಷ್ಠಾನಗೊಂಡಿವೆ. ಈ ಪಂಚಾಯತಿಯ ಅಧ್ಯಕ್ಷರು ಪದವೀಧರರಾಗಿದ್ದು, ದಲಿತ ಸಂಘರ್ಷ ಸಮಿತಿಯಲ್ಲಿ ಕೆಲಸಮಾಡಿದವರಾಗಿದ್ದಾರೆ. ಹಾಗಾಗಿ ಗ್ರಾಮಪಂಚಾಯತಿಯಲ್ಲಿ  ಕೆಲವು ಪರಿಶಿಷ್ಟರ ಯೋಜನೆಗಳು ಅನುಷ್ಠಾನ ಗೊಂಡಿವೆ. ಉದಾಹರಣೆಗೆ ಹೆಚ್ಚು ಪರಿಶಿಷ್ಟರ ಯೋಜನೆಗಳಲ್ಲಿ ವಸತಿಗಳನ್ನು ನಿರ್ಮಿಸಲಾಗಿದೆ. ಅದೇ ಬೈಲುವದ್ದಿಗೆರೆಯಲ್ಲಿ ಪರಿಶಿಷ್ಠ ಪಂಗಡಕ್ಕೆ ಸೇರಿದ ಮಹಿಳೆ ಅಧ್ಯಕ್ಷರಾಗಿದ್ದು, ಈ ಸದಸ್ಯೆ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ದುರ್ಬಲರಾಗಿರುವುದರಿಂದ ಪರಿಶಿಷ್ಟರ ಕಾರ್ಯಗಳು ಸರಿಯಾಗಿ ಜಾರಿಗೊಂಡಿಲ್ಲ. ಇನ್ನೂ ನಾಗೇನಹಳ್ಳಿಯಲ್ಲಿ ಹೆಚ್ಚು  ಪರಿಶಿಷ್ಟರನ್ನು ಹೊಂದಿದ್ದರೂ ಸಹ  ಮೇಲ್ವರ್ಗದವರೇ ಅಧ್ಯಕ್ಷರಾಗಿದ್ದಾರೆ. ಆದರೆ ಕೆಳಜಾತಿ/ವರ್ಗದ ಸದಸ್ಯರು ಹೆಚ್ಚಾಗಿದ್ದಾರೂ ಇಲ್ಲಿ ಕೆಳಜಾತಿಗಳ ಸದಸ್ಯರ ಭಾಗವಹಿಸುವಿಕೆ ಸರಿಯಿಲ್ಲವಾದ್ದರಿಂದ ಇಲ್ಲಿಯೂ ಸಹ ಪರಿಶಿಷ್ಟರ ಕಾರ್ಯಕ್ರಮಗಳು ಕಡಿಮೆ ಅನುಷ್ಠಾನಗೊಂಡಿವೆ. ಉಜ್ಜಿನಿಯಲ್ಲಿ ಮೇಲ್ವರ್ಗಗಳೇ ಹೆಚ್ಚು ಇದ್ದು ಲಿಂಗಾಯ್ತರೆ ಪಂಚಾಯತಿ ಅಧ್ಯಕ್ಷರಾಗಿದ್ದಾರೆ. ಹಾಗಾಗಿ ಪರಿಶಿಷ್ಟರ ಕಾರ್ಯಕ್ರಮಗಳು  ಇಲ್ಲಿ ಕಡಿಮೆ ಅನುಷ್ಠಾನಗೊಂಡಿವೆ.

ಒಟ್ಟಾರೇ 'ನೀರಾವರಿ ಪ್ರದೇಶದ ಗ್ರಾಮಪಂಚಾಯತಿಗಳ ಕಾರ್ಯಕ್ಷಮತೆಯ ಒಣಭೂಮಿ ಪ್ರದೇಶದ ಪಂಚಾಯತಿಗಳಿಗಿಂತ ಉತ್ತಮವಾಗಿದೆ. ಆರ್ಥಿಕ ಮತ್ತು ಸಾಮಾಜಿಕ ಅಂಶಗಳು ಪಂಚಾಯತಿಯಲ್ಲಿ ಭಾಗವಹಿಸುವಿಕೆಯಲ್ಲಿ ಹೆಚ್ಚು ಪ್ರಭಾವ ಬೀರಿರುವುದರಿಂದ  'ನೀರಾವರಿ ಪ್ರದೇಶದ ಪಂಚಾಯತಿಗಳ ಕಾರ್ಯಕ್ಷಮತೆ ಒಣಭೂಮಿ ಪ್ರದೇಶದ ಪಂಚಾಯತಿಗಳಿಗೆ ಹೋಲಿಸಿದರೆ ಉತ್ತಮವಾಗಿದೆ.ಅಂದರೆ ಪಂಚಾಯತಿ ವ್ಯವಸ್ಥೆಯ ಮೇಲೆ ಅಯಾ ಪ್ರದೇಶದ ಆರ್ಥಿಕ ಮತ್ತು ಸಾಮಾಜಿಕ ಅಂಶಗಳು ಹೆಚ್ಚು ಪರಿಣಾಮ ಬೀರಿರುವುದು ಅಧ್ಯಯನದಿಂದ ಕಂಡುಬಂದಿದೆ. ಹಾಗಾಗಿ ಜಾತಿವಾರು ಪ್ರಾತಿನಿಧ್ಯದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಅಂಶಗಳು ಹೆಚ್ಚು ಪ್ರಭಾವ ಬೀರಿರುವುದು ಅಧ್ಯಯನದಿಂದ ಕಂಡುಬಂದಿದೆ.

ಅಧ್ಯಯನ ಕೈಗೊಂಡ ಗ್ರಾಮಪಂಚಾಯತಿಗಳಲ್ಲಿ ಕಳೆದ ಐದು ವರ್ಷಗಳಿಂದ ನಡೆದ ಗ್ರಾಮಸಭೆಗಳ ವಿವರಣೆಯನ್ನು ಈಗಾಗಲೇ ನೋಡಿದ್ದೇವೆ. ಗ್ರಾಮಸಭೆಯ ಬಗ್ಗೆ ಅರಿವು ಮತ್ತು ಭಾಗವಹಿಸುವಿಕೆ ಯಾವ ಪಂಚಾಯತಿಯಲ್ಲಿ ಚೆನ್ನಾಗಿದೆ ಮತ್ತು  ಚೆನ್ನಾಗಿಲ್ಲ ಎಂಬುದನ್ನು ನೋಡಲಾಗಿದೆ. ಆ ಮೂಲಕ ಗ್ರಾಮಪಂಚಾಯತಿಗಳ  ಕಾರ್ಯಕ್ಷಮತೆ ಮಾಪನ ಮಾಡಲಾಗಿದೆ. ಗ್ರಾಮಸಭೆಯನ್ನು ಯಾವ ಪಂಚಾಯತಿಯು ಚೆನ್ನಾಗಿ ಆಯೋಜಿಸಿದೆಯೊ ಅಂತಹ ಪಂಚಾಯತಿಯಲ್ಲಿ ಭಾಗವಹಿಸುವಿಕೆ ಚೆನ್ನಾಗಿದೆ. ಅಂದರೆ ಎಲ್ಲ ವರ್ಗದ ಜನರು ಪ್ರವೇಶಿಸುವ ಸಾರ್ವಜನಿಕ ಸ್ಥಳಗಳಲ್ಲಿ ಏರ್ಪಡಿಸಿದ ಗ್ರಾಮಸಭೆಗಳಲ್ಲಿ ಹೆಚ್ಚು ಭಾಗವಹಿಸುವಿಕೆ ಇದೆ. ಗ್ರಾಮಪಂಚಾಯತಿಯ ಏನೆಲ್ಲ ಕಾರ್ಯ ಮಾಡುತ್ತದೆ ಎಂಬುದರ ಬಗ್ಗೆ ಊರವರಿಗೆ ಗ್ರಾಮಸಭೆಯಿಂದ ಗೊತ್ತಾಗುತ್ತಿದೆ. ಆದರೆ ಫಲಾನುಭವಿಯ ಅಂತಿಮ ಆಯ್ಕೆ ಯಾವ ಗ್ರಾಮಪಂಚಾಯತಿಯ ಆಗಿಲ್ಲ.  ಆರ್ಥಿಕ ಮತ್ತು ಸಾಮಾಜಿಕವಾಗಿ ಉತ್ತಮ ಸ್ಥಿತಿಯಲ್ಲಿರುವ ಗ್ರಾಮಗಳಲ್ಲಿ, ಹೆಚ್ಚು ಮೇಲ್ವರ್ಗಗಳು ಇರುವ ಗ್ರಾಮಗಳಲ್ಲಿ ಅರಿವು ಮತ್ತು ಭಾಗವಹಿಸುವಿಕೆ ಉತ್ತಮವಾಗಿದೆ. ಇಲ್ಲಿ ಗ್ರಾಮಪಂಚಾಯತಿಯ ಕಾರ್ಯಕ್ಷಮತೆಯು ಸಹ ಚೆನ್ನಾಗಿದೆ. ಅಭಿವೃದ್ಧಿ ವಿತರಣೆಗಳು ಈ ಪಂಚಾಯತಿಗಳಲ್ಲಿ  ಉದ್ದೇಶಿತ ವರ್ಗಕ್ಕೆ ಹೆಚ್ಚಿನದಾಗಿ ತಲುಪಿವೆ.

'ನೀರಾವರಿ ಮತ್ತು ಒಣಭೂಮಿ ಪಂಚಾಯತಿ ಪ್ರದೇಶಗಳಲ್ಲಿ ನಡೆದ ಗ್ರಾಮಸಭೆಗಳನ್ನು ತೌಲನಿಕವಾಗಿ ನೋಡಿದಾಗ, ಒಣಭೂಮಿ ಪಂಚಾಯತಿಗಳಲ್ಲಿ ನಡೆದ ಗ್ರಾಮಸಭೆಗಳಿಗಿಂತ ನೀರಾವರಿ ಪಂಚಾಯತಿಗಳಲ್ಲಿ ನಡೆದ ಗ್ರಾಮಸಭೆಗಳು ಉತ್ತಮವಾಗಿವೆ. 'ನೀರಾವರಿ ಪಂಚಾಯತಿಗಳಾದ ನಾಗೇನಹಳ್ಳಿ ಮತ್ತು ಹಿರೇಹೆಗ್ಡಾಳ್‌ನ ಪಂಚಾಯತಿ ವ್ಯಾಪ್ತಿಯ ಗ್ರಾಮಗಳು 'ನೀರಾವರಿ ಪ್ರದೇಶಗಳಾಗಿವೆ. ಆರ್ಥಿಕ ಮತ್ತು ಸಾಮಾಜಿಕ ಅಂಶಗಳು ಒಣಭೂಮಿ ಪಂಚಾಯತಿಗಳಿಗಿಂತ ಉತ್ತಮವಾಗಿವೆ. ಈ ಅಂಶಗಳು ಭಾಗವಹಿಸುವಿಕೆ ಮೇಲೆ ಪ್ರಭಾವ ಬೀರಿವೆ. ಹಾಗೆಯೇ ಪಂಚಾಯತ್ ಸದಸ್ಯರ ಮತ್ತು ಊರವರ ಅರಿವು ಮತ್ತು ಭಾಗವಹಿಸುವಿಕೆ ಸಹ ಒಣಭೂಮಿ

ಪಂಚಾಯತಿಗಳಿಗಿಂತ ಆಶಾದಾಯಕವಾಗಿದೆ. ಪಂಚಾಯತಿ ವ್ಯಾಪ್ತಿಯ ಗ್ರಾಮಗಳಿಗಿಂತ ಹೆಚ್ಚು ಗ್ರಾಮಸಭೆಗಳನ್ನು ಪಂಚಾಯತಿ ಕೇಂದ್ರ ಸ್ಥಳದಲ್ಲಿ ಮಾಡಲಾಗಿದೆ. ಪಂಚಾಯತಿ ಇರುವ ಸ್ಥಳಗಳಲ್ಲಿ ಹೆಚ್ಚು ಕಾಲ ಗ್ರಾಮಸಭೆಯನ್ನು ಮಾಡಿದರೆ, ಗ್ರಾಮಗಳಲ್ಲಿ ಕಡಿಮೆ ಅವಧಿಯಲ್ಲಿ ಗ್ರಾಮಸಭೆಗಳನ್ನು ಮಾಡಲಾಗುತ್ತದೆ. ಇದರ ಬಗ್ಗೆ ಎಲ್ಲ ಪಂಚಾಯತಿಗಳಲ್ಲಿ ಊರವರು ಹೆಚ್ಚು ಅತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ. ಕಾಮಗಾರಿಗಳು ಮತ್ತು ವಸತಿಗಳ ಹಂಚಿಕೆ ಸಹ ಪಂಚಾಯತಿ ಇರುವ ಕೇಂದ್ರ ಸ್ಥಳಗಳಲ್ಲಿ ಅಧಿಕವಾಗಿ ಅನುಷ್ಠಾನಗೊಂಡಿದೆ.

ಕೆಲವು ಪಂಚಾಯತಿ ವ್ಯಾಪ್ತಿಯ ಗ್ರಾಮಗಳಲ್ಲಿ ಗ್ರಾಮಸಭೆಗಳೆ ನಡೆದಿಲ್ಲ. ನಾಗೇನಹಳ್ಳಿ ಪಂಚಾಯತಿಗೆ ಸೇರಿದ ಬೆಳಗೊಡು ಮತ್ತು ಕಳ್ಳಿರಾಂಪುರದಲ್ಲಿ ಮತ್ತು ಉಜ್ಜಿನಿ' ಪಂಚಾಯತಿಯ ಬೆನಕನಹಳ್ಳಿ ಮತ್ತು ಬೈರದೇವರಗುಡ್ಡದಲ್ಲಿ ಒಂದು ಬಾರಿಯು ಗ್ರಾಮಸಭೆ ನಡೆದಿಲ್ಲ. ಹಿರೇಹೆಗ್ಡಾಳ್ ಪಂಚಾಯತಿ ವ್ಯಾಪ್ತಿಗೆ ಸೇರಿದ ಸಾಣೇಹಳ್ಳಿ, ಬೊಪ್ಪಲಪುರಗಳಲ್ಲಿ ವರ್ಷಕ್ಕೆ ಒಂದು ಬಾರಿ ಗ್ರಾಮಸಭೆ ನಡೆಸಿದ್ದಾರೆ. ಆದರೆ ಬೈಲುವದ್ದಿಗೆರೆ ಪಂಚಾಯತಿಯ ಎಲ್ಲ ಗ್ರಾಮಗಳಲ್ಲಿ ಗ್ರಾಮಸಭೆಗಳನ್ನು ನಡೆಸಿದ್ದಾರೆ. ಪಂಚಾಯತಿ ಕೇಂದ್ರ ಸ್ಥಳದಲ್ಲಿ ಆಯೋಜಿಸಿರುವ ಗ್ರಾಮಸಭೆಗಳ ಬಗ್ಗೆ ನಮಗೆ ಮಾಹಿತಿ ಸಿಗುವುದಿಲ್ಲ. ಗ್ರಾಮದ ಪಂಚಾಯತಿ ಸದಸ್ಯರು ತಿಳಿಸುವುದಿಲ್ಲ ಎಂದು ಈ ಗ್ರಾಮಗಳ ಜನತೆ ಅತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ.

**೧.೫..ಗ್ರಾಮಸಭೆ:**

ನಾಲ್ಕು ಗ್ರಾಮಪಂಚಾಯತಿಗಳ ಗ್ರಾಮಸಭೆಗಳ ಆಯೋಜನೆ ಅರಿವು, ಭಾಗವಹಿಸುವಿಕೆ ಮತ್ತು ಯೋಜನೆಗಳ ವಿತರಣೆಯ ಆಧಾರದ ಮೇಲೆ ಅಂಕಗಳನ್ನು ಕೊಡಲಾಗಿದೆ. ಯಾವ ಪಂಚಾಯತಿಯೊಂದರಲ್ಲಿ ಈ ಮೂರು ಅಂಶಗಳು ಚೆನ್ನಾಗಿದ್ದರೆ ಅಂತಹ ಪಂಚಾಯತಿ ಹೆಚ್ಚು ಅಂಕಗಳನ್ನು ಪಡೆದಿದೆ. ಹೀಗೆ ಯಾವ ಪಂಚಾಯತಿಯು ಹೆಚ್ಚು ಅಂಕಗಳನ್ನು ಪಡೆಯುತ್ತದೆಯೋ ಆ ಪಂಚಾಯತಿಯ ಕಾರ್ಯಕ್ಷಮತೆ ಉತ್ತಮವಾಗಿದೆ ಎಂದು ನಿರ್ಧರಿಸಲಾಗಿದೆ. ಅಧ್ಯಯನದ ಪಂಚಾಯತಿಗಳಲ್ಲಿ 'ನೀರಾವರಿ ಪ್ರದೇಶ ಪಂಚಾಯತಿ ಯಾದ ಹಿರೇಹೆಗ್ಡಾಳ್ ಹೆಚ್ಚು ಅಂಕಗಳನ್ನು ಪಡೆದು ಒಂದನೇ ಸ್ಥಾನದಲ್ಲಿದೆ ಅಂದರೆ, ಗ್ರಾಮಸಭೆಯಿಂದ ಹೆಚ್ಚು ಮನೆಗಳನ್ನು ಪರಿಶಿಷ್ಟರಿಗೆ, ಬಡತನರೇಖೆ ಕೆಳಗಿರುವ ಕುಟುಂಬಗಳಿಗೆ ಹಂಚಿದ್ದಾರೆ. ಇಲ್ಲಿ ಲಿಂಗಾಯ್ತರೆ ಹೆಚ್ಚು ಇರುವುದರಿಂದ ಅರಿವು ಭಾಗವಹಿಸುವಿಕೆ ಸಹ ಉತ್ತಮವಾಗಿದೆ. ನಾಗೇನಹಳ್ಳಿ ಪಂಚಾಯತಿಯು ಎರಡನೆ ಸ್ಥಾನದಲ್ಲಿದೆ. ಈ ಪಂಚಾಯತಿಯು 'ನೀರಾವರಿ ಪ್ರದೇಶವಾಗಿದ್ದು ಇಲ್ಲಿ ಹೆಚ್ಚು ಪರಿಶಿಷ್ಟರೆ ಇರುವುದರಿಂದ ಅರಿವು ಮತ್ತು ಭಾಗವಹಿಸುವಿಕೆ ಹಿರೇಹೆಗ್ಡಾಳ್ ಗ್ರಾಮಪಂಚಾಯತಿಗಿಂತ ಕಡಿಮೆ ಇದೆ. ಈ ಎರಡು 'ನೀರಾವರಿ ಪಂಚಾಯತಿಗಳನ್ನು ಹೋಲಿಕೆ ಮಾಡಿದರೆ ಹಿರೇಹೆಗ್ಡಾಳ್ ಮೊದಲ ಸ್ಥಾನದಲ್ಲಿದ್ದು ನಾಗೇನಹಳ್ಳಿ ಎರಡನೇ ಸ್ಥಾನದಲ್ಲಿದೆ. ನಾಲ್ಕು ಪಂಚಾಯತಿಗಳಲ್ಲಿ ಈ ಎರಡು ಪಂಚಾಯತಿಗಳು ಗ್ರಾಮಸಭೆಗಳು ಉತ್ತಮ ರೀತಿಯಲ್ಲಿ ನಡೆದರೆ ಒಣಭೂಮಿ ಪಂಚಾಯತಿ ಗಳಾದ ಬೈಲುವದ್ದಿಗೆರೆ ಮತ್ತು ಉಜ್ಜಿನಿ' ಪಂಚಾಯತಿಗಳು ನಂತರದ ಸ್ಥಾನದಲ್ಲಿವೆ.

ಬೈಲುವದ್ದಿಗೆರೆ ಗ್ರಾಮಪಂಚಾಯತಿಯ ಗ್ರಾಮಸಭೆಗಳು ಮೂರನೇ ಸ್ಥಾನ ಹೊಂದಿದ್ದರೆ, ಉಜ್ಜಿನಿಯು ನಾಲ್ಕನೇ ಸ್ಥಾನ ಹೊಂದಿದೆ. ಒಣಭೂಮಿ ಪಂಚಾಯತಿಯಾದರೂ ಬೈಲುವದ್ದಿಗೆರೆಯಲ್ಲಿ ಹೆಚ್ಚು ಜನರು ಭಾಗವಹಿಸಿದ್ದಾರೆ. ಉಜ್ಜಿನಿಯಲ್ಲಿ ಹೆಚ್ಚು ಸಾಕ್ಷರತೆಯನ್ನು ಹೊಂದಿದ್ದರೂ ಭಾಗವಹಿಸುವಿಕೆ ಕಡಿಮೆ ಇದೆ. ಹೀಗೆ ಗ್ರಾಮಸಭೆಗಳ ಕಾರ್ಯಕ್ಷಮತೆಯನ್ನು ಹೋಲಿಕೆ ಮಾಡಿದರೆ 'ನೀರಾವರಿ ಪಂಚಾಯತಿ ಪ್ರದೇಶಗಳಲ್ಲಿ ಗ್ರಾಮಸಭೆಗಳು ಉತ್ತಮವಾಗಿವೆ ಎಂದು ಹೇಳಬಹುದು. ಇದರಿಂದ ಗ್ರಾಮಪಂಚಾಯತಿಯ ಕಾರ್ಯಕ್ಷಮತೆ ಸಹ ಉತ್ತಮವಾಗಿದೆ. ಎಲ್ಲಾ ಗ್ರಾಮಪಂಚಾಯತಿಗಳ ವ್ಯಾಪ್ತಿಗೆ ಬರುವ ಗ್ರಾಮದ ಜನರಲ್ಲಿ ಹೆಚ್ಚಿನ ಜನ ಗ್ರಾಮಸಭೆಯ ಬಗ್ಗೆ ನಿರಾಸೆಯನ್ನು ವ್ಯಕ್ತಪಡಿಸಿದ್ದಾರೆ. ಈ 'ನಿರಾಸೆಗೆ ಹಲವು ಕಾರಣಗಳನ್ನು ಕೊಟ್ಟಿದ್ದಾರೆ. ಗ್ರಾಮಸಭೆಯನ್ನು ಕರೆಯುತ್ತಾರೆ, ಅಲ್ಲಿ ಜನತೆಯ ಬೇಡಿಕೆಗಳ ಪಟ್ಟಿಯನ್ನು ಬರೆದುಕೊಳ್ಳುತ್ತಾರೆ. ಆದರೆ ಇನ್ನೊಂದು ಗ್ರಾಮಸಭೆ ನಡೆಯುವವರೆಗೆ ಆ ಬೇಡಿಕೆಗಳು ಹಾಗೇಯೇ ಇರುತ್ತವೆ. ಒಂದೂ ಈಡೇರಿರುವುದಿಲ್ಲ. ಸರ್ಕಾರಿ ಇಲಾಖೆಗಳ

ಪ್ರತಿನಿಧಿಗಳು ಬರುತ್ತಾರೆ. ಅವರು ತಮ್ಮ ತಮ್ಮ ಇಲಾಖೆಯ ಸೌಲಭ್ಯಗಳ ಕುರಿತು ಹೇಳುತ್ತಾರೆ. ಆದರೆ ಇವುಗಳ ಪ್ರಯೋಜನ ಹೇಗೆ ಪಡೆಯಬೇಕು, ಯಾರಿಗೆ ಸಿಗುತ್ತದೆ ಎಂಬುದರ ಬಗ್ಗೆ ಸ್ಪಷ್ಟನೆ ಇಲ್ಲ.

ಫಲಾನುಭವಿಗಳ ಆಯ್ಕೆಯಲ್ಲಂತೂ ಉತ್ತಮ 'ನಿರ್ಧಾರ ಯಾವ ಪಂಚಾಯತಿಯಲ್ಲಿಯೂ ಕಂಡುಬಂದಿಲ್ಲ. ಜನರು ಇದರ ಬಗ್ಗೆ ಫಲಾನುಭವಿಗಳ ಪಟ್ಟಿಯನ್ನು ಗ್ರಾಮಸಭೆಯಲ್ಲಿ ತಯಾರಿಸುತ್ತಾರೆ. ಪುನಃ ತಾಲ್ಲೂಕು, ಜಿಲ್ಲಾಪಂಚಾಯತ್ ಸದಸ್ಯರಿಂದ, ಶಾಸಕರಿಂದ ಮತ್ತು ಸ್ಥಳೀಯ ರಾಜಕಾರಣದಿಂದ ಬದಲಾವಣೆಯಾಗುತ್ತದೆ. ಒಂದು ವಸತಿಗೆ ಇಷ್ಟು ಹಣ ಎಂದು ನಿಗದಿಮಾಡಿರುತ್ತಾರೆ. ಇದು ಎಲ್ಲರಿಗೂ ಗೊತ್ತಿರುವ ಗುಪ್ತ ವಿಚಾರ ಎಂದು ಹೇಳಿದ್ದಾರೆ. ವಿಕೇಂದ್ರೀಕರಣದ ಆಶಯವೆಲ್ಲ ಗ್ರಾಮಸಭೆಯ ಮೇಲೆ 'ನಿರ್ಧಾರವಾಗುತ್ತದೆ. ಆದರೆ ಆ ಗ್ರಾಮಸಭೆಗಳೆ ಇಲ್ಲಿ ವಿಫಲವಾದರೆ ವಿಕೇಂದ್ರೀಕರಣ ಆಶಯ ಯಾವ ಪಂಚಾಯತಿಯಲ್ಲೂ ನಡೆದಿಲ್ಲ ನೇರವೇರಿಲ್ಲ ಎಂದು ಹೇಳಬಹುದು. ಗ್ರಾಮಸಭೆ ವಿಫಲಕ್ಕೆ ಗ್ರಾಮಪಂಚಾಯತಿಯು ಕಾರಣವಾಗಿದೆ. ಗ್ರಾಮ ಪಂಚಾಯತಿಗಿಂತ ಹೆಚ್ಚು ಕಾರಣ ರಾಜಕಾರಣ ಎಂದು ಹೇಳಬಹುದು. ಮೇಲ್‌ಸ್ತರಗಳ ಮತ್ತು ಸ್ಥಳೀಯ ರಾಜಕಾರಣ ಇಲ್ಲದಿದ್ದರೆ ಕೆಲವು ಪ್ರಯೋಜನಗಳು ಬಡವರಿಗೆ ಉದ್ದೇಶಿತ ವರ್ಗಕ್ಕೆ ತಲುಪಬಹುದಿತ್ತು. ಆದರೆ ಇಲ್ಲಿ ಯಾವ ಪಂಚಾಯತಿಯಲ್ಲಿ ರಾಜಕಾರಣ ಹೊರತುಪಡಿಸಿ ಗ್ರಾಮಸಭೆಗಳೆ ನಡೆದಿಲ್ಲ. ಹೀಗೆ ಗ್ರಾಮಸಭೆಯ ಕೆಲವು ದೋಷಗಳನ್ನು ಗುರುತಿಸಬಹುದಾಗಿದೆ.

**೧.೬.ತೆರಿಗೆ ಸಂಗ್ರಹ:**

ತೆರಿಗೆ ಸಂಗ್ರಹದ ಮೂಲಕ ಗ್ರಾಮಪಂಚಾಯತಿಗಳ ಕಾರ್ಯಕ್ಷಮತೆ ಮತ್ತು ಜನತೆಯ ಭಾಗವಹಿಸುವಿಕೆಯನ್ನು ಅಧ್ಯಯನ ಕೈಗೊಂಡ ನಾಲ್ಕು ಗ್ರಾಮಪಂಚಾಯತಿಗಳಲ್ಲಿ ನೋಡಿದ್ದೇವೆ. ನಾಲ್ಕು ಪಂಚಾಯತಿಗಳಲ್ಲೂ ತೆರಿಗೆ ಸಂಗ್ರಹವನ್ನು ತೌಲನಿಕವಾಗಿ ನೋಡಿದಾಗ ನೀರಾವರಿ ಪಂಚಾಯತಿಗಳಾದ ನಾಗೇನಹಳ್ಳಿ ಮತ್ತು ಹಿರೇಹೆಗ್ಡಾಳ್‌ನಲ್ಲಿ ತೆರಿಗೆ ಸಂಗ್ರಹವು ಒಣ ಪಂಚಾಯತಿಗಳಾದ ಬೈಲುವದ್ದಿಗೆರೆ ಮತ್ತು ಉಜ್ಜಿನಿ'ಗಿಂತ ಹೆಚ್ಚು ಉತ್ತಮವಾಗಿದೆ. ನೀರಾವರಿ ಪಂಚಾಯತಿಗಳಲ್ಲಿ ತೆರಿಗೆ ಸಂಗ್ರಹ ಚೆನ್ನಾಗಿರುವುದಕ್ಕೆ ಕಾರಣಗಳು ಹೀಗಿವೆ. ಆರ್ಥಿಕವಾಗಿ ಇಲ್ಲಿಯ ಜನತೆ ಉತ್ತಮವಾಗಿದ್ದಾರೆ. ಈ ಪಂಚಾಯತಿಗಳು ಪಟ್ಟಣಕ್ಕೆ ಹತ್ತಿರ ಇವೆ. ಗ್ರಾಮಪಂಚಾಯತಿಯ ಬಗ್ಗೆ ಅರಿವು ಮತ್ತು ಭಾಗವಹಿಸುವಿಕೆ ಒಣಭೂಮಿ ಪಂಚಾಯತಿಗಳಿಗಿಂತ ಉತ್ತಮವಾಗಿದೆ. ಉದ್ಯೋಗದ ಸಮಸ್ಯೆ ಇಲ್ಲ ಎಂದು ಹೇಳಬಹುದು. ಈ ಎಲ್ಲ ಅಂಶಗಳು ಅಧಿಕ ತೆರಿಗೆ ಸಂಗ್ರಹಕ್ಕೆ ಕಾರಣವಾಗಿವೆ ಎಂದು ಗ್ರಹಿಸಲಾಗಿದೆ. ಅದೇ ರೀತಿ ಒಣಭೂಮಿ ಪಂಚಾಯತಿಗಳು ಪಟ್ಟಣದಿಂದ ದೂರ ಇವೆ. ಕೃಷಿ ಅವಲಂಬನೆ ಹೆಚ್ಚು ಇದೆ. ಆರ್ಥಿಕವಾಗಿ ದುರ್ಬಲರಾಗಿದ್ದಾರೆ. 'ನಿರುದ್ಯೋಗದ ಸಮಸ್ಯೆ ಇದೆ. 'ನೀರಾವರಿ ಪಂಚಾಯತಿಯಲ್ಲಿರುವ ಎಲ್ಲಾ ಅಂಶಗಳು ಒಣಭೂಮಿ ಪಂಚಾಯತಿಗಳಲ್ಲಿ ವಿರುದ್ಧವಾಗಿವೆ.

'ನೀರಾವರಿ ಪ್ರದೇಶದಲ್ಲಿರುವ ಪಂಚಾಯತಿಗಳಾದ ನಾಗೇನಹಳ್ಳಿ ಮತ್ತು ಹಿರೇಹೆಗ್ಡಾಳನಲ್ಲಿ ತೆರಿಗೆ ಸಂಗ್ರಹವನ್ನು ತೌಲನಿಕವಾಗಿ ನೋಡಿದಾಗ ನಾಗೇನಹಳ್ಳಿಗಿಂತ ಹಿರೇಹೆಗ್ಡಾಳ್‌ನಲ್ಲಿ ತೆರಿಗೆ ಸಂಗ್ರಹ ಉತ್ತಮವಾಗಿದೆ. ಎರಡು ಪಂಚಾಯತಿಗಳು 'ನೀರಾವರಿ ಪ್ರದೇಶವಾಗಿದ್ದರು ಹಿಂದುಳಿದ ತಾಲ್ಲೂಕಿನ ಪಂಚಾಯತಿಯಾದ ಹಿರೇಹೆಗ್ಡಾಳ್‌ನಲ್ಲಿ ಅಭಿವೃದ್ಧಿ ಹೊಂದಿದ ತಾಲ್ಲೂಕಿನ ನಾಗೇನಹಳ್ಳಿ ಪಂಚಾಯತಿಗಿಂತ ಉತ್ತಮವಾಗಿದೆ. ಇದಕ್ಕೆ ಕೆಲವು ಕಾರಣಗಳನ್ನು ಕೊಡಬಹುದು. ಹಿರೇಹೆಗ್ಡಾಳನಲ್ಲಿ ನಾಗೇನಹಳ್ಳಿಗಿಂತ ಹೆಚ್ಚು ಮೇಲ್ವರ್ಗಗಳನ್ನು, ನಾಗೇನಹಳ್ಳಿ ಪಂಚಾಯತಿಯ ಹೆಚ್ಚು ಪರಿಶಿಷ್ಟರನ್ನು ಹೊಂದಿದೆ. ಹಿರೇಹೆಗ್ಡಾಳ್‌ನ್ನು ತೆರಿಗೇತರ ಮೂಲವಾದ ಹುಣಸೆ ಮರದ ಟೆಂಡರ್‌ನಿಂದ ಹೆಚ್ಚು ಆದಾಯ ಸಂಗ್ರಹವಾಗುತ್ತದೆ. ನಾಗೇನಹಳ್ಳಿಯಲ್ಲಿ ಶೇ.೩೫ರಷ್ಟು ಇತರೆ ಕರಗಳಿಂದ ಸಂಗ್ರಹವಾದರೆ, ಹಿರೇಹೆಗ್ಡಾಳ್‌ನಲ್ಲಿ ಶೇ.೬೦ರಷ್ಟು ಇತರೇ ಕರಗಳಿಂದ ಸಂಗ್ರಹವಾಗುತ್ತದೆ. ಹಾಗಾಗಿ 'ನೀರಾವರಿ ಪಂಚಾಯತಿಯಲ್ಲಿ ತೆರಿಗೆ ಸಂಗ್ರಹದಲ್ಲಿ ಅಂತರ ಕಂಡುಬಂದಿದೆ.

ಒಣಭೂಮಿ ಪಂಚಾಯತಿಗಳಾದ ಬೈಲುವದ್ದಿಗೆರೆ ಮತ್ತು ಉಜ್ಜಿನಿ ಗ್ರಾಮ ಪಂಚಾಯತಿಗಳಲ್ಲಿ ತೆರಿಗೆ ಸಂಗ್ರಹವನ್ನು ತೌಲನಿಕವಾಗಿ ನೋಡಿದಾಗ ಬೈಲುವದ್ದಿಗೆರೆಗಿಂತ ಉಜ್ಜಿನಿ' ಗ್ರಾಮಪಂಚಾಯತಿಯಲ್ಲಿ ತೆರಿಗೆ ಸಂಗ್ರಹ ಚೆನ್ನಾಗಿದೆ.

ಉಜ್ಜಿನಿ' ಪಂಚಾಯತಿಯಲ್ಲಿ ಇತರೇ ಕರಗಳಿಂದ ಶೇ.೪೫ರಷ್ಟು ಸಂಗ್ರಹವಾದರೇ, ಬೈಲುವದ್ದಿಗೆರೆ ಪಂಚಾಯತಿಯಲ್ಲಿ ಶೇ.೧೨ರಷ್ಟು ಇತರೇ ಕರಗಳಿಂದ ಸಂಗ್ರಹವಾಗುತ್ತದೆ. ಉಜ್ಜಿನಿಯು ಒಣಭೂಮಿ ಪ್ರದೇಶವಾದರೂ ಕೃಷಿಯೇತರ ಚಟುವಟಿಕೆಗಳು ಹೆಚ್ಚು ಇದ್ದು, ಇಲ್ಲಿ ಆರ್ಥಿಕವಾಗಿ ಬೈಲುವದ್ದಿಗೆರೆ ಗ್ರಾಮಪಂಚಾಯತಿಗಿಂತ ಉತ್ತಮ ಸ್ಥಿತಿಯಲ್ಲಿದ್ದರೆ, ಬಡತನ ರೇಖೆ ಕೆಳಗಿನ ಕುಟುಂಬಗಳು ಬೈಲುವದ್ದಿಗೆರೆಯಲ್ಲಿ ಶೇ.೪೪ರಷ್ಟಿದ್ದರೇ, ಉಜ್ಜಿನಿಯಲ್ಲಿ ಶೇ.೩೨ರಷ್ಟು ಕುಟುಂಬಗಳು ಬಡತನ ರೇಖೆಗಿಂತ ಕೆಳಗೆ ಇದ್ದಾರೆ. ಹಾಗಾಗಿ ಉಜ್ಜಿನಿ' ಪಂಚಾಯತಿಯಲ್ಲಿ ಹೆಚ್ಚು ತೆರಿಗೆ ಸಂಗ್ರಹವಿದೆ. ಒಟ್ಟಾರೇ ಅಧ್ಯಯನ ಕೈಗೊಂಡ ಗ್ರಾಮಪಂಚಾಯತಿಗಳ ತೆರಿಗೆ ಸಂಗ್ರಹದಲ್ಲಿ ಹಿರೇಹೆಗ್ಡಾಳ್ ಮೊದಲನೇ ಸ್ಥಾನದಲ್ಲಿದ್ದರೇ ಬೈಲುವದ್ದಿಗೆರೆ ಕೊನೆಯ ಸ್ಥಾನದಲ್ಲಿದೆ. ನಾಗೇನಹಳ್ಳಿ ಮತ್ತು ಉಜ್ಜಿನಿ' ಪಂಚಾಯತಿಗಳು ಎರಡನೇ ಮತ್ತು ಮೂರನೇ ಸ್ಥಾನದಲ್ಲಿವೆ ಎಂದು ಹೇಳಬಹುದು.

ಒಣಭೂಮಿ ಪಂಚಾಯತಿಗಳಲ್ಲಿ ಎಲ್ಲಾ ಕುಟುಂಬಗಳಿಗೆ ಒಂದೇ ತೆರನಾದ ತೆರಿಗೆ ಸಂಗ್ರಹಿಸಿದರೆ, 'ನೀರಾವರಿ ಪಂಚಾಯತಿಗಳಲ್ಲಿ ಮನೆಯ ಮಾದರಿಯ ಮೇಲೆ ತೆರಿಗೆ ಸಂಗ್ರಹಿಸಲಾಗಿದೆ. ಪ್ರತಿವರ್ಷದ ಬೇಡಿಕೆಯಲ್ಲಿ ಉಜ್ಜಿನಿಯು ಮೊದಲ ಸ್ಥಾನದಲ್ಲಿದೆ, ಕೊನೆಯ ಸ್ಥಾನದಲ್ಲಿ ಹಿರೇಹೆಗ್ಡಾಳ್ ಪಂಚಾಯತಿ ಇದೆ. ಅದರೂ ತೆರಿಗೆ ಸಂಗ್ರಹದಲ್ಲಿ ಹಿರೇಹೆಗ್ಡಾಳ್ ಮೊದಲ ಸ್ಥಾನದಲ್ಲಿದೆ.

ಅಭಿವೃದ್ಧಿ ಹೊಂದಿದ ತಾಲೂಕು ನಾಗೇನಹಳ್ಳಿ ಮತ್ತು ಬೈಲುವದ್ದಿಗೆರೆ ಗ್ರಾಮಪಂಚಾಯತಿ ಗಳಿಗಿಂತ ಹಿಂದುಳಿದ ತಾಲ್ಲೂಕಿನ ಹಿರೇಹೆಗ್ಡಾಳ್ ಮತ್ತು ಉಜ್ಜಿನಿ'ಯಲ್ಲಿ ಗ್ರಾಮಪಂಚಾಯತಿ ಗಳಲ್ಲಿ ತೆರಿಗೇತರ ಮೂಲಗಳಿಂದ ಹೆಚ್ಚು ಆದಾಯ ಸಂಗ್ರಹವಾಗುತ್ತಿದೆ. ಆದಕಾರಣ ಸ್ಥಳೀಯ ಸಂಪನ್ಮೂಲ ಕ್ರೋಢೀಕರಣದಲ್ಲಿ ಹಿಂದುಳಿದ ತಾಲ್ಲೂಕಿನ ಗ್ರಾಮಪಂಚಾಯತಿಗಳಲ್ಲಿ ಅಧಿಕ ಸಂಗ್ರಹವಾಗಿದೆ ಎಂದು ಹೇಳಬಹುದು. ಹಾಗೆಯೆ ಆಯಾ ಪ್ರದೇಶದ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳು ಮತ್ತು ಪಂಚಾಯತಿಯ ಅರಿವು ಭಾಗವಹಿಸುವಿಕೆಯ ಮೇಲೆ ತೆರಿಗೆ ಸಂಗ್ರಹದಲ್ಲಿ ಪ್ರಮುಖ ಪಾತ್ರವಹಿಸಿವೆ ಎಂಬುದು ಅಧ್ಯಯನದಿಂದ ತಿಳಿದುಬಂದಿದೆ.

**೧.೭.ಪಂಚಾಯತ್ ವ್ಯವಸ್ಥೆ ಮತ್ತು ಪಕ್ಷ ರಾಜಕಾರಣ:**

ಗ್ರಾಮಗಳ ಅಭಿವೃದ್ಧಿಯಲ್ಲಿ ಪಂಚಾಯತ್ ವ್ಯವಸ್ಥೆಯ ಮೂರು ಸ್ತರಗಳ ಪಾತ್ರ ಬಹಳ ಮುಖ್ಯ. ಆದ್ದರಿಂದ ಗ್ರಾಮಪಂಚಾಯತಿಗಳ ಕಾರ್ಯಕ್ಷಮತೆಯಲ್ಲಿ ತಾಲೂಕ್ ಮತ್ತು ಜಿಲ್ಲಾಪಂಚಾಯತ್ ಸದಸ್ಯರ ಪಾತ್ರವನ್ನು ಈಗಾಗಲೇ ನೋಡಿದ್ದೇವೆ. ಗ್ರಾಮಪಂಚಾಯತಿಯ ಸದಸ್ಯರು ಯಾವ ಪಕ್ಷಕ್ಕೆ ಸೇರಿರುತ್ತಾರೋ, ಅದೇ ಪಕ್ಷದವರು ಮೇಲಿನಸ್ತರದಲ್ಲಿದ್ದರೆ ಆ ಗ್ರಾಮಪಂಚಾಯತಿಗಳ ಕಾರ್ಯಕ್ಷಮತೆ ಉತ್ತಮವಾಗಿದೆ.

ಹಿರೇಹೆಗ್ಡಾಳ್ ಮತ್ತು ನಾಗೇನಹಳ್ಳಿ ಪಂಚಾಯತಿಗಳ ಆಡಳಿತವು ಕಾಂಗ್ರೇಸ್ ಪಕ್ಷದವರ ಕೈಯಲ್ಲಿದ್ದು ಮೇಲಿನ ಸ್ತರಗಳಲ್ಲೂ ಸಹ ಇದೇ ಪಕ್ಷದವರಿದ್ದು ಕೆಲವು ವಸತಿ ಯೋಜನೆಗಳೂ, ಹೆಚ್ಚು ಅನುಷ್ಠಾನ ಗೊಂಡಿವೆ. ಗ್ರಾಮಸಭೆಗಳಲ್ಲಿ ಇದರ ಭಾಗವಹಿಸುವಿಕೆ ಸಹ ಚೆನ್ನಾಗಿದೆ. ಗ್ರಾಮಪಂಚಾಯತಿಯ ಕೆಲವು ಕೆಲಸಕಾರ್ಯಗಳಲ್ಲಿ ಸಹಕರಿಸಿದ್ದಾರೆ. ಈ ಎರಡು ಪಂಚಾಯತಿಗಳು ತಾಲೂಕಿಗೆ ಹತ್ತಿರವಿದ್ದು, 'ನೀರಾವರಿ ಪಂಚಾಯತಿಗಳು, ಒಂದೇ ಪಕ್ಷದವರು ಮತ್ತು ಆರ್ಥಿಕ ಮತ್ತು ಸಾಮಾಜಿಕವಾಗಿ ಉತ್ತಮವಾಗಿದೆ. ಈ ಎಲ್ಲ ಅಂಶಗಳು ಸಹ ಉತ್ತಮ ಕಾರ್ಯಕ್ಷಮತೆಗೆ ಕಾರಣವಾಗಿವೆ ಎಂದು ಹೇಳಬಹುದು.

ಬೈಲುವದ್ದಿಗೆರೆ ಮತ್ತು ಉಜ್ಜಿನಿ' ಪಂಚಾಯತಿಗಳ ಆಡಳಿತವು ಜನತಾದಳದವರ ಕೈಯಲ್ಲಿದ್ದು, ತಾಲ್ಲೂಕ್ ಮತ್ತು ಜಿಲ್ಲಾ ಪಂಚಾಯತ್ ಸದಸ್ಯರು ಕಾಂಗ್ರೇಸ್ ಪಕ್ಷಕ್ಕೆ ಸೇರಿದ್ದಾರೆ. ಇಲ್ಲಿ ಪಕ್ಷರಾಜಕೀಯದಿಂದ ಈ ಪಂಚಾಯತಿಗಳಲ್ಲಿ ವಸತಿ ಯೋಜನೆಗಳಲ್ಲಿ ನಿರ್ಮಿಸಿದ ಮನೆಗಳ ಸಂಖ್ಯೆ ಕಡಿಮೆ, ಗ್ರಾಮಪಂಚಾಯತಿ ಕೆಲಸಕಾರ್ಯಗಳಲ್ಲಿ ಸಹಕಾರವಿಲ್ಲ, ಜಿಲ್ಲಾ ಮತ್ತು ತಾಲೂಕ್ ಪಂಚಾಯತ್ ಸದಸ್ಯರು ಗ್ರಾಮಸಭೆಗೆ ಭಾಗವಹಿಸದೆ ಇರುವುದು, ತಾಲೂಕ್ ಪಂಚಾಯತ್ ಕೆಲಸಗಳಲ್ಲಿ ವಿಳಂಬಕ್ಕೆ ಕಾರಣವಾಗಿದೆ. ಇವು ತಾಲೂಕಿನಿಂದ ದೂರ ಇವೆ. ಈ ಎಲ್ಲ ಅಂಶಗಳು ಸಹ ಗ್ರಾಮಪಂಚಾಯತಿಯ ಕಾರ್ಯಕ್ಷಮತೆಗೆ ಹಸ್ತಕ್ಷೇಪ ಮಾಡಿದೆ ಎಂದು ಹೇಳಬಹುದು.

ಅದರಲ್ಲೂ ಈ ಎರಡು ಪಂಚಾಯತಿಗಳು ಒಣಭೂಮಿ ಪಂಚಾಯತಿಗಳಾಗಿದ್ದು ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದಿವೆ. ಹೀಗಾಗಿ ಒಣಭೂಮಿ ಪಂಚಾಯತಿಗಳ ಕಾರ್ಯಕ್ಷಮತೆಗಿಂತ 'ನೀರಾವರಿ ಪಂಚಾಯತಿಗಳ ಕಾರ್ಯಕ್ಷಮತೆ ಉತ್ತಮವಾಗಿವೆ. ಇದಕ್ಕೆ 'ನೀರಾವರಿ ಪಂಚಾಯತಿ ಮತ್ತು ಮೇಲಿನ ಸ್ತರಗಳು ಕಾಂಗ್ರೇಸ್ ಪಕ್ಷಕ್ಕೆ ಸೇರಿರುವುದು ಸಹ ಮುಖ್ಯ ಅಂಶವಾಗಿದೆ. ಒಣಭೂಮಿ ಪಂಚಾಯತಿಗಳು ಜನತಾದಳಕ್ಕೆ ಸೇರಿದ್ದು, ಮೇಲಿನ ಸ್ತರಗಳು ಕಾಂಗ್ರೇಸ್ ಪಕ್ಷಕ್ಕೆ ಸೇರಿದ್ದರಿಂದ ಗ್ರಾಮ ಪಂಚಾಯತಿಯ ಕಾರ್ಯಕ್ಷಮತೆಯು ಉತ್ತಮವಾಗಿಲ್ಲ ಎಂದು ಹೇಳಬಹುದು.

**೧.೮.ಹಣದ ಲಾಭಿ:**

ಗ್ರಾಮಪಂಚಾಯತಿಯ ಕಾರ್ಯಕ್ಷಮತೆಯಲ್ಲಿ ಹಣ ಹೇಗೆ ಕೆಲಸಮಾಡಿದೆ ಎಂಬುದನ್ನು ಮಾಪನ ಮಾಡಲು ಪ್ರಸ್ತುತ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ. ಇಂದು ಸರ್ಕಾರದ ಯಾವುದೆ ಯೋಜನೆಯ ಲಾಭವನ್ನು ಪಡೆಯಬೇಕೆಂದರೆ ಹಣದ ಲಾಭಿ ಮುಖ್ಯ ಪಾತ್ರವನ್ನು ವಹಿಸುತ್ತದೆ. ಹಣದಲಾಭಿ ಸರ್ಕಾರದ ಎಲ್ಲಾ ಕ್ಷೇತ್ರಗಳಲ್ಲಿ ಇದೆ. ಗ್ರಾಮ ಪಂಚಾಯತಿಯು ಸಹ ಈ ಹಣದಲಾಭಿಯಿಂದ ಮುಕ್ತವಾಗಿಲ್ಲ. ಈಗಿರುವ ಪರ್ಸೆಂಟೈಜ್ ಜಾಲದಲ್ಲಿ ಸರ್ಕಾರದ ಯೋಜನೆಗಳು ಇಂದು ಉದ್ದೇಶಿತ ವರ್ಗಕ್ಕೆ ತಲುಪುವಲ್ಲಿ ವಿಫಲವಾಗಿವೆ.

ಪ್ರಸ್ತುತ ಅಧ್ಯಯನದ ನಾಲ್ಕು ಗ್ರಾಮಪಂಚಾಯತಿಗಳಲ್ಲಿ ಹಣದ ಲಾಭಿಯನ್ನು ನೋಡಿದಾಗ, ಅಧ್ಯಯನ ಕೈಗೊಂಡ ಎಲ್ಲಾ ಗ್ರಾಮಪಂಚಾಯತಿಗಳಲ್ಲಿ ಹಣದ ಲಾಭಿ ತುಂಬಾ ಕೆಲಸ ಮಾಡಿರುವುದು ಅಧ್ಯಯನದಿಂದ ಕಂಡುಬಂದಿದೆ. ಅಂದರೆ ಗ್ರಾಮ ಪಂಚಾಯತಿಯ ಯೋಜನೆಗಳ ವಿತರಣೆಯಲ್ಲಿ ಹಣದಲಾಭಿ ನಡೆದಿದೆ. ಗ್ರಾಮಪಂಚಾಯತಿಗಳ ಯೋಜನೆಗಳ ಅನುಷ್ಠಾನವನ್ನು ನೋಡಿದಾಗ, ಅಧ್ಯಯನ ಕೈಗೊಂಡ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಯಾವ ಕಾಮಗಾರಿಗಳಲ್ಲಿ ಹೆಚ್ಚು ಹಣದ ಲಾಭಿಯಾಗುತ್ತದೆಯೋ ಅಂತಹ ಕಾಮಗಾರಿಗಳನ್ನು ಹೆಚ್ಚು ಅನುಷ್ಠಾನಗೊಳಿಸಲಾಗಿದೆ. ಆಯಾ ವಾರ್ಡಿನ ಪಂಚಾಯತಿ ಸದಸ್ಯರು ತಮ್ಮ ವಾರ್ಡಿನ ಕಾಮಗಾರಿಗಳನ್ನು ಮಾಡಿಸಿದ್ದಾರೆ. ಉದಾಹರಣೆಗೆ ಬಂಡೆಹಾಕಿಸುವ, 'ನೀರಿನತೊಟ್ಟಿ ಕಟ್ಟಿಸುವ ಮತ್ತು ಅಗಸಿಕಟ್ಟೆಗಳ 'ನಿರ್ಮಾಣ ಎಲ್ಲಾ ಗ್ರಾಮಪಂಚಾಯತಿಗಳಲ್ಲಿ ಅನುಷ್ಠಾನಗೊಂಡಿವೆ. ವಸತಿ ಯೋಜನೆಗಳ ವಿತರಣೆಯಲ್ಲಂತೂ ಎಲ್ಲಾ ಗ್ರಾಮಪಂಚಾಯತಿಗಳಲ್ಲಿ ಮನೆಗೆ ರೂ.೫೦೦೦ಗಳನ್ನು 'ನಿಗದಿಪಡಿಸಲಾಗಿದೆ. ಗ್ರಾಮಸಭೆಯಲ್ಲಿ ಫಲಾನುಭವಿಗಳ ಆಯ್ಕೆಯಾಗಿದ್ದರೂ ಸಹ ಯಾರು ಹೆಚ್ಚು ಹಣವನ್ನು ಕೊಟ್ಟಿರುತ್ತಾರೊ ಅಂತವರಿಗೆ ಹೆಚ್ಚು ಮನೆಗಳಾಗಿವೆ ಎಂದು ಎಲ್ಲಾ ಪಂಚಾಯತಿಗಳ ಗ್ರಾಮಸ್ಥರು ಅಭಿಪ್ರಾಯಪಟ್ಟಿದ್ದಾರೆ. ಇಲ್ಲಿ ಹಣ ಇದ್ದವನು ಹೆಚ್ಚು ಲಾಭ ಪಡೆದಿದ್ದಾನೆ.

ಪ್ರತಿ ಗ್ರಾಮಪಂಚಾಯತಿಯ ಕಾರ್ಯದರ್ಶಿ, ಅಧ್ಯಕ್ಷ, ಉಪಾಧ್ಯಕ್ಷರಿಗೆ ಮತ್ತು ಗುತ್ತಿಗೆದಾರರಿಗೆ ಇಂತಿಷ್ಟು ಪರ್ಸೆಂಟೈಜ್ ಎಂದು 'ನಿಗಧಿ ಮಾಡಲಾಗಿದ್ದು ಇದು ಎಲ್ಲರಿಗೂ ಗೊತ್ತಿರುವ ಗುಪ್ತ ವಿಚಾರವಾಗಿದೆ. ಕೆಲವು ಸದಸ್ಯರು ಇದನ್ನು ಒಪ್ಪಿಕೊಂಡಿದ್ದಾರೆ. ಪಂಚಾಯತಿಯ ಸಂಪೂರ್ಣ ಜವಾಬ್ದಾರಿ ಕಾರ್ಯದರ್ಶಿಯ ಮೇಲೆಯೇ ಅವಲಂಬಿತವಾಗಿರು ತ್ತದೆ. ಇಲ್ಲಿ ಪಂಚಾಯತಿ ಅಧ್ಯಕ್ಷ ಮತ್ತು ಸದಸ್ಯರು ಓದು ಬರಹ ಕಾನೂನು ಬಗ್ಗೆ ತಿಳಿದವರಾಗಿದ್ದರೆ ಎಲ್ಲವನ್ನು ಪ್ರಶ್ನಿಸುತ್ತಾರೆ ಇಲ್ಲವಾದರೆ ಕಾರ್ಯದರ್ಶಿಯ ತಿರ್ಮಾನವೇ ಅಂತಿಮವಾಗಿರುತ್ತದೆ. ಎಲ್ಲಾ ಗ್ರಾಮಪಂಚಾಯತಿ ಗಳಲ್ಲಿ ಇದೇ ಸ್ಥಿತಿ ಅಂದರೆ ಯಾವ ಗ್ರಾಮಪಂಚಾಯತಿಯು ಹಣದಲಾಭಿಯಿಂದ ಮುಕ್ತವಾಗಿಲ್ಲ. ಅಧ್ಯಯನದ ನಾಲ್ಕು ಗ್ರಾಮಪಂಚಾಯತಿಗಳಲ್ಲಿ ಹಣದ ಲಾಭಿಯನ್ನು ತೌಲಾನಿಕವಾಗಿ ನೋಡಿದಾಗ 'ನೀರಾವರಿ ಪ್ರದೇಶದ ಪಂಚಾಯತಿಗಳಾದ ನಾಗೇನಹಳ್ಳಿ ಮತ್ತು ಹಿರೇಹೆಗ್ಡಾಳ್‌ನಲ್ಲಿ ಹಣದಲಾಭಿಯು, ಒಣಭೂಮಿ ಪ್ರದೇಶದ ಪಂಚಾಯತಿಗಳಾದ ಬೈಲುವದ್ದಿಗೆರೆ ಮತ್ತು ಉಜ್ಜಿನಿಗಿಂತ ಕಡಿಮೆ ನಡೆದಿದೆ ಎಂದು ಹೇಳಬಹುದು. ಒಣಭೂಮಿ ಪ್ರದೇಶದ ಎರಡು ಪಂಚಾಯತಿಗಳು ತಾಲೂಕು ಕೇಂದ್ರಕ್ಕೆ ದೂರವಿದ್ದು, ಇಲ್ಲಿಯ ಜನತೆ ತಮ್ಮ ಬದುಕನ್ನು ಬಿಟ್ಟು ಪಟ್ಟಣಕ್ಕೆ ಓಡಾಡುವ ಸ್ಥಿತಿಯಲ್ಲಿ ಇಲ್ಲ. ಕಾರಣ ಇವರು ಹೆಚ್ಚು ಕೂಲಿಕಾರರಿದ್ದಾರೆ. ಇವರು ಸರ್ಕಾರದ ಯೋಜನೆಗಳ ಸಿಕ್ಕರೆ ಸಾಕು ಎನ್ನುವ

ಸ್ಥಿತಿಯಲ್ಲಿದ್ದಾರೆ. ಹಾಗಾಗಿ ಈ ಪ್ರದೇಶದಲ್ಲಿ ಸ್ವಲ್ಪ ಹಣವಿದ್ದವರು ಹಾಗೂ ರಾಜಕೀಯ ಪ್ರತಿನಿಧಿಗಳ ಒಡನಾಟವಿರುವವರು ಹೆಚ್ಚು ಸರ್ಕಾರದ ಯೋಜನೆಯ ಲಾಭವನ್ನು ಪಡೆದುಕೊಂಡಿದ್ದಾರೆ. ಹಾಗಾಗಿ ಇಲ್ಲಿ ನೀರಾವರಿ ಪಂಚಾಯತಿ ಪ್ರದೇಶಗಳು ಪಟ್ಟಣಕ್ಕೆ ಹತ್ತಿರವಿದ್ದು ಯಾವುದೇ ಸರ್ಕಾರದ ಯೋಜನೆ ಬಂದರೂ ಓಡಾಡಿ ಕೆಲಸವನ್ನು ಮಾಡಿಕೊಳ್ಳುತ್ತಾನೆ. ಇಲ್ಲಿಯ ಜನತೆ ಆರ್ಥಿಕವಾಗಿ ಉತ್ತಮವಾಗಿರುತ್ತಾರೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ 'ನೀರಾವರಿ ಪ್ರದೇಶದ ಗ್ರಾಮಪಂಚಾಯತಿಗಳಿಗಿಂತ ಒಣಭೂಮಿ ಪಂಚಾಯತಿ ಪ್ರದೇಶಗಳಲ್ಲಿ ಹೆಚ್ಚು ಹಣದ ಲಾಭಿ ನಡೆದಿದೆ ಎಂದು ಹೇಳಬಹುದು. ಅಧ್ಯಯನದ ಎಲ್ಲಾ ಗ್ರಾಮಪಂಚಾಯತಿಗಳಲ್ಲಿ ಹಣದಲಾಭಿ ನಡೆದಿರುವುದು ಅಧ್ಯಯನದಿಂದ ಕಂಡುಬಂದಿದೆ.

ಸ್ವಾತಂತ್ರ್ಯಾನಂತರ ಜಾರಿಗೆ ತಂದ ಅಭಿವೃದ್ಧಿ ಯೋಜನೆಗಳು ಕೆಳಜಾತಿ/ವರ್ಗಗಳ ಬಡವರ ಮೂಲಭೂತ ಸಾಮಾಜಿಕ ಪರಿವರ್ತನೆಗೆ ಪೂರಕವಾಗಿಲ್ಲ. ಏಕಂದರೆ ಸ್ವಾತಂತ್ರ್ಯಾ ನಂತರ ಇಷ್ಟೆಲ್ಲಾ ಅಭಿವೃದ್ಧಿ ಯೋಜನೆಗಳು ಜಾರಿಗೆ ಬಂದಿದ್ದು ಕೆಳಜಾತಿ/ವರ್ಗಗಳ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗಾಗಿ. ಆದರೂ ಸಹ ಈ ಕೆಳಜಾತಿ/ವರ್ಗಗಳ ಸ್ಥಿತಿಗತಿಗಳು ಯಥಾ ರೀತಿಯಲ್ಲಿ ಮುಂದುವರಿದಿವೆ. ಇಲ್ಲಿ ಕಷ್ಟವಿರುವುದು ಈ ಕೆಳಜಾತಿ/ವರ್ಗಗಳ ತ್ರಿಶಂಕು ಸ್ಥಿತಿಯ ಬಗ್ಗೆ. ಹಾಗಾಗಿ ಸರ್ಕಾರದ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ತಲುಪಿಸುವ ದೃಷ್ಟಿಯಿಂದ ಪಂಚಾಯತ್ ವ್ಯವಸ್ಥೆ ರೂಪುಗೊಂಡಿದೆ. ಈ ಸಂಸ್ಥೆಗಳಿಂದ ಕೆಳಜಾತಿ/ವರ್ಗಗಳ ಎಲ್ಲಾ ಸಮಸ್ಯೆಗಳು ಪರಿಹಾರವಾಗುತ್ತವೆ ಎಂಬ ಗ್ರಹಿಕೆ ಇಲ್ಲಿದೆ. ಇಲ್ಲಿ ಯೋಜನೆಗಳು ಉದ್ದೇಶಿತ ವರ್ಗಕ್ಕೆ ತಲುಪಬೇಕು. ಆದರೆ ಯೋಜನೆಗಳ ವಿತರಣೆಯಲ್ಲಿ ಜಾತಿರಾಜಕಾರಣ, ಪಕ್ಷರಾಜಕಾರಣ ಮತ್ತು ಹಣದ ಲಾಭಿಗಳು ತುಂಬಾ ಪ್ರಭಾವ ಬೀರಿರುವುದು ಅಧ್ಯಯನದಿಂದ ಕಂಡುಬಂದಿದೆ. ಹೀಗೆ ಗ್ರಾಮಪಂಚಾಯತಿಯ ಕಾರ್ಯಕ್ಷಮತೆಯಲ್ಲಿ ಜಾತಿವಾರು ಪ್ರಾತಿನಿಧ್ಯ , ಗ್ರಾಮಸಭೆ , ತೆರಿಗೆ ಸಂಗ್ರಹ, ಪಂಚಾಯತ್ ವ್ಯವಸ್ಥೆಯ ವಿವಿಧ ಸ್ತರಗಳು, ಪಕ್ಷರಾಜಕೀಯ ಮತ್ತು ಹಣದ ಲಾಭಿಗಳು ಇನ್ನು ಚಾಲ್ತಿಯಲ್ಲಿದ್ದು ಕೆಳಜಾತಿ/ವರ್ಗಗಳ ಬಡವರ ಮೂಲಭೂತ ಸಾಮಾಜಿಕ ಪರಿವರ್ತನೆಗೆ ಪೂರಕವಾಗಿಲ್ಲ. ಹೀಗೆ ಅಧ್ಯಯನದ ಮುಖ್ಯ ಫಲಿತಗಳನ್ನು ನೋಡಬಹುದು

**೧.೯.ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನಗಳು:**

೧.ಬಹುತೇಕ ಗಾಮಪಂಚಾಯಿತಿ ಸದಸ್ಯರು ಜಾತಿ ವ್ಯವಸ್ಥೆ ಸಣ್ಣ ಪುಟ್ಟ ಬದಲಾವಣೆಗಳನ್ನು ಹೊರುತುಪಡಿಸಿದರೆ ಈ ವ್ಯವಸ್ಥೆ ಇನ್ನೂ ಹಾಗೇ ಇದೆ.

೨.ಜಾತಿ ಜಾತಿ ನಡುವಿನ ಅಂತರ ಕಡಿಮೆ ಆಗಿದ್ದರೂ ಸಹ ಬೇದ ಭಾವನೆಗಳಿವೆ.

೩.ಮೇಲ್ಜಾತಿಯ ಜನರು ಕೆಳ ಸಮುದಾಯಗಳಿಗೆ ರಾಜಕೀಯ ಅಧಿಕಾರವಿದೆ ಎಂದು ತೋರಿಕೆಗೆ ಮಾತ್ರ ಗೌರವ ಕೊಡುತ್ತಾರೆ ಆದರೆ ಜಾತಿಯ ಕೀಲರಿಮೆ ಹೋಗಿಲ್ಲ.

೪.ಆರ್ಥಿಕವಾಗಿ ಸಾಮಾನ್ಯವಾಗಿ ಎಲ್ಲಾ ಕೆಳಸಮುದಾಯಗಳು ಕೆಲವು ಪ್ರದೇಶಗಳಲ್ಲಿ ಮೇಲ್ಜಾತಿಗಿಂತ ಹೆಚ್ಚಿನ ಭೂಮಿಯನ್ನು ಹೊಂದಿದ್ದರೂ ಮೇಲ್ಜಾತಿಯವರೇ ಶ್ರೀಮಂತರಾಗಿದ್ದಾರೆ. ಇದಕ್ಕೆ ನಮ್ಮ ಜನರಲ್ಲಿರುವ ಸೋಮಾರಿತನವೆ ಮತ್ತು ಅಜ್ಞಾನವೇ ಕಾರಣವಾಗಿದೆ.

೫.ಮನೆಯಲ್ಲಿ ಮತ್ತು ಕೇರಿಯಲ್ಲಿ ಎಲ್ಲಾ ಚುನಾಯಿತ ಪಂಚಾಯತ್ ಸದಸ್ಯರ ಗೌರವ ಹೆಚ್ಚಾಗಿದೆ. ವಾರ್ಡುಗಳಲ್ಲಿ ಏನೇ ಸಮಸ್ಯೆಗಳಿದ್ದರು ನಮ್ಮ ಬಳಿ ಬಂದು ಹೇಳುತ್ತಾರೆ.

೬.ಇನ್ನೂ ಕೆಲವು ಪ್ರದೇಶಗಳಲ್ಲಿ ಮಾತ್ರ ಮದುವೆ ಇತರ ಸಂದರ್ಭಗಳಲ್ಲಿ ಕೆಳಸಮುದಾಯಗಳಿಗೆ ಪ್ರತ್ಯೇಕ ವ್ಯವಸ್ಥೆಯನ್ನು ಕಾಣಬಹುದು.

**೧.೧೦.ರಾಜಕೀಯ ಅರಿವು ಮತ್ತು ಬಾಗವಹಿಸುವಿಕೆ:**

೧.ಸಾಮಾನ್ಯವಾಗಿ ಪಂಚಾಯತ್ ಸಭೆ,ನೋಟಿಸ್ ಇದರ ಬಗ್ಗೆ ಎಲ್ಲರಲ್ಲೂ ತಿಳಿವಳಿಕೆ ಇದ್ದು ಆದರೆ

ನೋಟಿಸ್‌ನಲ್ಲಿ /ಕೋರಂ ಬಗ್ಗೆ/ನಿರ್ಧಾರ ಹೇಗೆ ದಾಖಲಿಸುವ ಕುರಿತು ತಿಳಿವಳಿಕೆಯ ಅವಶ್ಯಕತೆ ಇದೆ.

೨.ಪಂಚಾಯತ್ ಸದಸ್ಯರಾಗಿ ಚರ್ಚೆ/ಸಭೆಗಳಲ್ಲಿ ಭಾಗವಹಿಸುವಿಕೆ ಕುರಿತು ಪಂಚಾಯತ್ ಸದಸ್ಯರು ಹೆಚ್ಚು ಅತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ. ಕೆಳಸಮುದಾಯಗಳು ಮುಂದೆ ಕುಳಿತಿದ್ದರೆ ವ್ಯವಸ್ಥಿತವಾಗಿ ಹಿಂದಿನ ಸಾಲಿಗೆ ಕುಳಿತುಕೊಳ್ಳುವ ಹಾಗೇ ಮಾಡುತ್ತಾರೆ.

೩.ಪಂಚಾಯತ್ ಸಭೆಗಳಲ್ಲಿ ಕೆಳಸಮುದಾಯಗಳ ಸದಸ್ಯರ ಮಾತಿಗೆ ಯಾವುದೇ ಬೆಲೆ ಇಲ್ಲಾ ಯಾರು ಪಂಚಾಯಿತಿಯಲ್ಲಿ ಜಾತಿ/ಪ್ರಾಬಲ್ಯ/ಪ್ರತಿಷ್ಠೆಗಳು ಸ್ಪಷ್ಟವಾಗಿ ಕೆಲಸ ಮಾಡುತ್ತವೆ.ಯಾವುದೇ ನಿರ್ಣಯಗಳಿಗೆ ಕೆಳಸಮುದಾಯಗಳ ಸಹಮತ ಬೇಕಾಗಿಲ್ಲ ಈ ಸದಸ್ಯರು ಏನೇ ಮಾತನಾಡಿದರೂ ಅದನ್ನು ಕೇಳಿಸಿಕೊಂಡಿದ್ದರೂ ಕೇಳಿಸಿಲ್ಲ ಅನ್ನುವ ಹಾಗೇ ಎಲ್ಲಾ ಸದಸ್ಯರು ವರ್ತಿಸುತ್ತಾರೆ.

೪.ಗ್ರಾಮಸಭೆಯ ಬಗ್ಗೆ ಸಾಮಾನ್ಯ ತಿಳಿವಳಿಕೆ ಇದ್ದು ನೋಟಿಸ್‌ನಲ್ಲಿ ಏನಿರಬೇಕು/ಕೋರಂ ಬಗ್ಗೆ/ನಿರ್ಧಾರದ ಬಗ್ಗೆ /ನಿರ್ಧಾರ ಹೇಗೆ ದಾಖಲಿಸುವ ಕುರಿತು ತಿಳಿವಳಿಕೆಯ ಅವಶ್ಯಕತೆ ಇದೆ.

೫.ಕಾಯ್ದೆಯಲ್ಲಿ ವಾರ್ಡಸಭೆಗಳನ್ನು ಏರ್ಪಡಿಸುವ ಕುರಿತು ಸೂಚನೆಗಳಿದ್ದರೂ ಬಹುತೇಕ ಪಂಚಾಯಿತಿಗಳಲ್ಲಿ ವಾರ್ಡ್ ಸಭೆಯ ಬಗ್ಗೆ ಸರಿಯಾದ ಮಾರ್ಗದರ್ಶನ ಇಲ್ಲಾ.

೬.ಜನರು ಸಾಮಾನ್ಯವಾಗಿ ವಸತಿ, ಚರಂಡಿ,ಕುಡಿಯುವ ನೀರು ಇತರೆ ವಿಷಯಗಳ ಬಗ್ಗೆ ಹೆಚ್ಚು ಮಹತ್ವ ನೀಡುತ್ತಾರೆ ಪಂಚಾಯತ್ ಸಭೆಗಳಲ್ಲಿ ಹೇಗೆ ನಡೆದುಕೊಳ್ಳುತ್ತಾರೊ ಗ್ರಾಮಸಭೆಗಳಲ್ಲಿ ಕೆಳಸಮುದಾಯಗಳ ಸದಸ್ಯರನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.

೭.ಸ್ಥಾಯಿಸಮಿತಿಗಳ ಬಗ್ಗೆ ಯಾವುದೇ ತಿಳಿವಳಿಕೆ ಕೆಳಸಮುದಾಯಗಳ ಪಂಚಾಯತ್ ಸದಸ್ಯರಿಗೆ ಬಹುತೇಕ ಪಂಚಾಯಿತಿಗಳಲ್ಲಿ ಇಲ್ಲಾ ಸ್ಥಾಯಿಸಮಿತಿಗಳ ಉದ್ದೇಶ ಇದರ ಬಗ್ಗೆ ಮಾಹಿತಿ ಇಲ್ಲಾ ದಾಖಲೆಗಳಲ್ಲಿ ಮಾತ್ರ ಸ್ಥಾಯಿಸಮಿತಿಗಳ ರಚನೆ ಮಾಡಲಾಗಿದೆ.

ಹೀಗೆ ಭಾರತದಲ್ಲಿ ಸ್ವಾತಂತ್ರ್ಯ ನಂತರ ಪಂಚಾಯತ್ ರಾಜ್ ಸಂಸ್ಥೆಗಳು ಹೇಗೆ ಜಾರಿಗೆ ಬಂದವು. ಹೀಗೆ ಒಂದು ಕಡೆ ತಳಮಟ್ಟದ ಸಂಸ್ಥೆಯಾದ ಗ್ರಾಮಪಂಚಾಯಿತಿಗಳು ಕಳೆದ ೨೫ ವರ್ಷಗಳಿಂದ ನಾವು ಮೀಸಲಾತಿಯನ್ನು ಈ ಸಂಸ್ಥೆಗಳಲ್ಲಿ ಪಡೆದಿದ್ದೇವೆ. ನಿಜಕ್ಕೂ ಈ ಮೀಸಲಾತಿಯಿಂದ ಕೆಳಸಮುದಾಯಗಳ ಮತ್ತು ಬಡವರ ಸಾಮಾಜಿಕ,ಆರ್ಥಿಕ ಮತ್ತು ರಾಜಕೀಯ ಪರಿವರ್ತನೆಯ ಮೂಲಕ ಸಬಲೀಕರಣ ಆಗಬೇಕಾದರೆ ಈ ಸಲಹೆಗಳು ಅತ್ಯಗತ್ಯವಾಗಿವೆ.

**೧.೧೧. ಸಮರೋಪ:**

ಇಂದಿಗೂ ಬಹುತೇಕ ಗ್ರಾಮಗಳಲ್ಲಿ ಸಾಮಾಜಿಕವಾಗಿ ಸಾಕಷ್ಟು ವೈತ್ಯಾಸ, ಭೇದ ಭಾವನೆಗಳು, ಭಿನ್ನಾಬಿಪ್ರಾಯಗಳು ಇದ್ದು ಮತ್ತು ರಾಜಕೀಯ ಅರಿವು ಮತ್ತು ಭಾಗವಹಿಸುವಿಕೆ ಬಗ್ಗೆ ಸಾಕಷ್ಟು ಪರಿಹಾರಗಳನ್ನು ಮತ್ತು ಸೂಕ್ತ ಸಲಹೆಗಳನ್ನು ಕೊಡಲಾಗಿದೆ.

೧. ಕೆಳಸಮುದಾಯಗಳ ಪಂಚಾಯಿತಿ ಸದಸ್ಯರಲ್ಲಿರುವ ಕೀಲರಿಮೆ ಮತ್ತು ಅವರಲ್ಲಿರುವ ರಾಜಕೀಯ ಅಧಿಕಾರದ ಪ್ರಯೋಗದ ಬಗ್ಗೆ ತಿಳಿವಳಿಕೆ ಮೂಡಬೇಕು.

೨. ಎಲ್ಲಾ ಕೆಳಜಾತಿಗಳ ಪಂಚಾಯಿತಿ ಸದಸ್ಯರಲ್ಲಿ ಹೊಂದಾಣಿಕೆ ಏರ್ಪಡಬೇಕು ಅಂದರೆ ಮಾದಿಗ,ಚೆಲುವಾದಿ.ಬೊವಿ.ಲಂಬಾಣಿ,ಬುಡಕಟ್ಟು, ಮತ್ತು ಹಿಂದುಳಿದ ಸಮುದಾಯದವರು ಒಗ್ಗೂಡಬೇಕು.

೩. ಮುಖ್ಯವಾಗಿ ಕೆಳಜಾತಿಗಳ ಪಂಚಾಯಿತಿ ಸದಸ್ಯರಲ್ಲಿ ರಾಜಕೀಯ ಅಧಿಕಾರದ ಪ್ರಯೋಗದ ಮನೋಭಾವನೆಗಳು ಬೆಳೆಯಬೇಕು.

೪. ಕೆಳಜಾತಿಗಳ ಪಂಚಾಯಿತಿ ಸದಸ್ಯರಲ್ಲಿ ಆಂತರಿಕ ಭಿನ್ನಾಭಿಪ್ರಾಯಗಳನ್ನು ಬಿಟ್ಟು ನನ್ನ ಜನ ,ನನ್ನ ಕೇರಿ ಎನ್ನುವ ಭಾವನೆಗಳು ಮೂಡಬೇಕು

೫. ಕೆಳಜಾತಿಗಳ ಪಂಚಾಯಿತಿ ಸದಸ್ಯರು ಸಂಘಟಿತ ಹೋರಾಟವನ್ನು ಮಾಡಬೇಕು ರಾಜಕೀಯ ನಿತಿ ನಿರ್ಧಾರಗಳಲ್ಲಿ ತೆಗೆದುಕೊಳ್ಳಬೇಕು.

೬. ಕೆಳಜಾತಿಗಳ ಪಂಚಾಯಿತಿ ಸದಸ್ಯರಿಗೂ ಮತ್ತು ಜನತೆಗೂ ರಾಜಕೀಯ ಶಿಕ್ಷಣದ ಅಗತ್ಯತೆ ಹೆಚ್ಚು ಇದೆ.

೭. ಪಂಚಾಯತ್ ಸಭೆಗಳಲ್ಲಿ ಮತ್ತು ಗ್ರಾಮಸಭೆಗಳಲ್ಲಿ ಕೆಳಜಾತಿಗಳ ಪಂಚಾಯಿತಿ ಸದಸ್ಯರು ಒಗ್ಗೂಡಿ ತನ್ನ ಜಾತಿ/ಕೇರಿಯ/ವಾರ್ಡ್‌ನ ಜನತೆಯ ಸಬಲೀಕರಣಕ್ಕಾಗಿ ಜಾಗೃತಿ ವಹಿಸಬೇಕು.

೮. ಕೆಳಜಾತಿಗಳ ಪಂಚಾಯಿತಿ ಸದಸ್ಯರು ಮೇಲ್ವರ್ಗದ ಕೈಗೊಂಬೆಗಳಾಗಿ ಕಾರ್ಯನಿರ್ವಹಿಸಬಾರದು.

೯. ಅಭಿವೃದ್ಧಿಯ ಫಲಗಳು ನಿಜವಾದ ಶೋಷಿತರಿಗೆ ತಲುಪುವ ಹಾಗೇ ಕೆಳಜಾತಿಗಳ ಪಂಚಾಯಿತಿ ಸದಸ್ಯರು ರಾಜಕೀಯ ನಿರ್ಧಾರ ತೆಗೆದು ಕೊಳ್ಳಬೇಕು.

೧೦. ಪಂಚಾಯಿತಿ ಕಾಯ್ದೆ, ಕಾನೂನು, ಶಿಕ್ಷಣ, ಮತ್ತು ಇಂತಹ ತರಬೇತಿ ಕಾರ್ಯಕ್ರಮಗಳನ್ನು ಸರ್ಕಾರ ಯೋಜಿಸಬೇಕು.

೧೧. ಸ್ಥಾಯಿ ಸಮಿತಿಗಳು ನಿಜಕ್ಕೂ ಕೆಳಜಾತಿಯ ಜನರಿಗೆ ಶೋಷಣೆ,ಅನ್ಯಾಯವನ್ನು ತಡೆಗಟ್ಟುವ ಶಕ್ತಿಯನ್ನು ಹೊಂದಿದ್ದು ಇವುಗಳು ಸರಿಯಾಗಿ ಕಾರ್ಯ ನಿರ್ವಹಿಸುವಂತೆ ಜಾಗೃತರಾಗಬೇಕು

ಈ ಎಲ್ಲಾ ಅಂಶಗಳನ್ನು ಕೆಳಜಾತಿಗಳ ಪಂಚಾಯಿತಿ ಸದಸ್ಯರಲ್ಲಿ ಮತ್ತು ಜನರಲ್ಲಿ ಮೂಡಿ ಮತ್ತು ರಾಜಕೀಯದಲ್ಲಿ ಭಾಗವಹಿಸಿದರೆ ನಿಜಕ್ಕೂ ಕೆಳವರ್ಗಗಳ ಸಬಲೀಕರಣ ಹೊಂದಬಹುದು

## ಆಧಾರಗ್ರಂಥಗಳು

೧. ಬಲವಂತರಾಯ್ ಮೆಹತಾ, ರಿಪೋರ್ಟ್ ಆಫ್ ದಿ ಟೀಮ್ ಪಾರ್ ದಿ ಸ್ಟಡಿ ಆಫ್ ಕಮಿಟಿ, ಪ್ರೋಜೆಕ್ಟ್ ಆಂಡ್ ನೇಶನಲ್ ಎಕ್ಸಟೆನ್ಷನ್ ಸರ್ವೀಸಸ್, ವಾಲ್ಯುಮ್ ಒನ್, ನ್ಯೂಡೆಲ್ಲಿ: ಪ್ಲಾನಿಂಗ್ ಕಮಿಷನ್ ೧೯೫೫.

೨. ಅಶೋಕ್ ಮೆಹ್ತಾ, ರಿಪೋರ್ಟ ಆಫ್ ದಿ ಕಮಿಟಿ ಆನ್ ಪಂಚಾಯತ್ ರಾಜ್ ಇನ್‌ಸ್ಟಿಟ್ಯೂಶನ್ಸ್, ನ್ಯೂಡೆಲ್ಲಿ: ಮಿನಿಸ್ಟ್ರಿ ಆಫ್ ಅಗ್ರಿಕಲ್ಚರ್ ಆ್ಯಂಡ್ ಇರಿಗೇಷನ್, ೧೯೭೮

೩. ಗವರ್ನ್‌ಮೆಂಟ್ ಆಫ್ ಇಂಡಿಯಾ, ಪಂಚಾಯತ್‌ರಾಜ್ ಸ್ಟೇಟಸ್ ರಿಪೋರ್ಟ ೧೯೯೯, ನ್ಯೂಡೆಲ್ಲಿ: ರಾಜೀವ್‌ಗಾಂಧಿ ಪೌಂಢೇಶನ್, ೧೯೯೯,

೪. ಬಡ್ಡಿ ಎಮ್. ಎಮ್., ಕರ್ನಾಟಕ ಪಂಚಾಯತ್ ಕಾಯ್ದೆ ೧೯೯೩ , ಧಾರವಾಡ: ಆಕಳವಾಡಿ ಬುಕ್ ಡಿಪೊ, ೧೯೯೪

೫. ಶೇಷಾದ್ರಿ ಬಿ., ""ವಿಕೇಂದ್ರೀಕರಣ: ತತ್ವ ಮತ್ತು ಆಚರಣೆ", ಟಿ. ಆರ್.ಚಂದ್ರಶೇಖರ್ (ಸಂ.) ವಿಕೇಂದ್ರೀಕರಣ : ತತ್ವ-ಆಚರಣೆ, ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೦೦,

೬. ಶ್ರೀಧರ ಎ., ಕರ್ನಾಟಕದಲ್ಲಿ ಪಂಚಾಯತ್‌ರಾಜ್ ಕಾಯ್ದೆಗಳು, ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೦೦,

೭. ಗವರ್ನ್‌ಮೆಂಟ್ ಆಫ್ ಕರ್ನಾಟಕ, ಕರ್ನಾಟಕ ಆಕ್ಟ್ ನಂ.೨೦ ಆಫ್ ೧೯೮೫: ದಿ ಕರ್ನಾಟಕ್ ಜಿಲ್ಲಾ ಪರಿಷತ್, ತಾಲೂಕು ಪಂಚಾಯತ್ ಸಮಿತಿಸ್ ಮಂಡಲ್ ಪಂಚಾಯತ್ಸ್ ಆಕ್ಟ್, ೧೯೮೩, ಬೆಂಗಳೂರು: ಗವರ್ನ್‌ಮೆಂಟ್ ಆಫ್ ಕರ್ನಾಟಕ, ೧೯೮೭

೮. ಮಹಿಪಾಲ್, ""ಇನ್ಯುಲೋಷನ್ ಆಫ್ ಡಿಸೆಂಟ್ರಲೇಜಷನ್ ಪ್ಲಾ'ನಿಂಗ್ ಇನ್ ಇಂಡಿಯಾ:", ಕುರುಕ್ಷೇತ್ರ, ಸಂಚಿಕೆ ೪೫, ಸಂಖ್ಯೆ ೯, ಜೂನ್ ೧೯೯೭,

೯. ಐಸಕ್ ಟಿ. ಎಮ್. ಲೋಕಲ್ ಡೆಮಾಕ್ರಸಿ ಅಂಡ್ ಡೆವೆಲಪ್‌ಮೆಂಟ್: ಪೀಪಲ್ ಕಾಂಪೈನ್ ಫಾರ್ ಡೆಸೆಂಟ್ರಲೈಜಡ್ ಪ್ಲಾನಿಂಗ್ ಇನ್ ಕೇರಳ, ನ್ಯೂಡೆಲ್ಲಿ: ಲೆಫ್ಟ್ ವರ್ಡ್, ೨೦೦೦,

೧೦. ಮೆಹಬೂಬ ಹುಲ್-ಹಕ್, ರಿಫ್ಲೇಕ್‌ಷನ್ಸ್ ಆನ್ ಹ್ಯೂಮನ್ ಡೆವಲ-ಪ್‌ಮೆಂಟ್, ಆಕ್ಸ್‌ಫರ್ಡ್: ಯುನಿರ್ವಸಿಟಿ ಪ್ರೆಸ್, ೧೯೯೬,

೧೧. ಚಂದ್ರಪೂಜರಿ ಎಂ. ದೇಶೀಯತೆ ನೆರಳಲ್ಲಿ ವಿಕೇಂದ್ರೀಕರಣ, ಹಂಪಿ : ಕನ್ನಡ ವಿಶ್ವವಿದ್ಯಾಲಯ, ೨೦೦೧

೧೨. ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ : ೧೯೯೯, ಯೋಜನಾ ಇಲಾಖೆ, ಬೆಂಗಳೂರು : ಕರ್ನಾಟಕ ಸರ್ಕಾರ, ೧೯೯೯.

೧೩. ಬಡ್ಡಿ ಎಂ. ಎಂ. ಕರ್ನಾಟಕ ಜಿಲ್ಲಾ ಪರಿಷತ್ತುಗಳ, ಮಂಡಲ ಪಂಚಾಯತಿಗಳ, ತಾಲ್ಲೂಕು ಪಂಚಾಯತಿ ಸಮಿತಿಗಳು

ಮತ್ತು ನ್ಯಾಯ ಮಂಡಳಿಗಳ ಅಧಿನಿಯಮ-೧೯೮೩, ಧಾರವಾಡ : ಆಕಳವಾಡಿ ಬುಕ್ ಡಿಪೋ, ೧೯೮೫

೧೪. ಪಂಚಾಯತಿ ಕಾರ್ಯದರ್ಶಿಗ್ರಾಮಪಂಚಾಯತಿ ಬೇಡಿಕೆ ರಿಜಿಸ್ಟರ್ ಮತ್ತು ಗ್ರಾಮಪಂಚಾಯತಿ ಸದಸ್ಯರ ಆಯ್ಕೆಪಟ್ಟಿ-೧೯೯೯, ಪಂಚಾಯತಿ ದಾಖಲೆಗಳು, ಹಿರೇಹೆಗ್ಡಾಳ್: ಗ್ರಾಮಪಂಚಾಯತಿ ಕಚೇರಿ, ೨೦೦೧

೧೫. ಪಂಚಾಯತಿ ಕಾರ್ಯದರ್ಶಿ, ಗ್ರಾಮಪಂಚಾಯತಿ ಸದಸ್ಯರ ಆಯ್ಕೆಪಟ್ಟಿ-೧೯೯೯, ಪಂಚಾಯತಿ ದಾಖಲೆಗಳು, ಉಜ್ಜಿನಿ: ಗ್ರಾಮಪಂಚಾಯತಿ ಕಚೇರಿ, ೨೦೦೧

೧೬. ಗ್ರಾಮಪಂಚಾಯತಿ ಬೇಡಿಕೆ ರಿಜಿಸ್ಟರ್ ಮತ್ತು ಗ್ರಾಮಪಂಚಾಯತಿ ಸದಸ್ಯರ ಆಯ್ಕೆಪಟ್ಟಿ–೧೯೯೯, ಪಂಚಾಯತಿ ದಾಖಲೆಗಳು, ಉಜ್ಜಿನಿ: ಗ್ರಾಮಪಂಚಾಯತಿ ಕಚೇರಿ, ೨೦೦೧

೧೭. ಚಂದ್ರಪೂಜಾರಿ ಎಂ., ದೇಶಿಯತೆ ನೆರಳಲ್ಲಿ ವಿಕೇಂದ್ರೀಕರಣ, ಹಂಪಿ : ಕನ್ನಡ ವಿಶ್ವವಿದ್ಯಾಲಯ, ೨೦೦೧, ಪುಟ.೧೪೭

೧೮. ಶುಭ ಕೆ. ಮತ್ತು ಭಾರ್ಗವ ಬಿ. ಎಸ್.(ಸಂ), ಗ್ರಾಮಸಭೆ ಮತ್ತು ಮಹಿಳೆ :ಕೇರಳದ ಅನುಭವಗಳು, ಬೆಂಗಳೂರು : ಇನ್ಸಿಟ್ಯೂಟ್ ಆಫ್ ಸೋಶಿಯಲ್ ಸೈನ್ಸ್, ೨೦೦೧, ಪುಟ.೫

೧೯. ದಿನಾಂಕ ೧೩–೦೬–೨೦೦೧ರಲ್ಲಿ ಬೈಲುವದ್ದಿಗೆರೆ ಗ್ರಾಮಪಂಚಾಯತಿಯ ಗ್ರಾಮಸಭೆಯಲ್ಲಿ ಭಾಗವಹಿಸಿ ಫಲಿತಗಳನ್ನು ದಾಖಲಿಸಲಾಗಿದೆ.

೨೦. ಕುಮಾರ ಪಿ., ""ಗ್ರಾಮೀಣ ವಸತಿ ಯೋಜನೆ– ಮುನ್ನೋಟ'', ಕರ್ನಾಟಕ ವಿಕಾಸ, ಸಂಪುಟ ೪೧, ಸಂಚಿಕೆ ೯, ಆಗಸ್ಟ್ ೨೦೦೧, ಪುಟ.೪–೫

# Making a case for the liberal arts

*The importance of STEM does not imply the unimportance of the liberal arts.*

**V. H. Belvadi**

**Abstract**

